


ಜಾಜ್ವಲ್ಯೇತೇ ವಿಷ್ಣುವಾಯೂ ಸ್ಮ ದೇವೌ ವೇದವ್ಯಾಸಾನಂದತೀರ್ಥಾಭಿಧಾನೌ

# ಶ್ರೀವ್ಯಾಸ ಮಧ್ವ

(ಶ್ರೀವ್ಯಾಸಮಧ್ವಸಂಶೋಧನಪ್ರತಿಷ್ಠಾನದ ಮಾಸಪತ್ರಿಕೆ)

**ಪಾಜಕ, 89/24, 3ನೇ ಅಡ್ಡರಸ್ತೆ, ಮೌಂಟ್‌ಜಾಯ್ ಎಕ್ಸ್‌ಟೆನ್ಷನ್, ಹನುಮಂತನಗರ,**
**ಬೆಂಗಳೂರು-19. ದೂರವಾಣಿ : (080) 26602802; 26611011**

## ಸಂಪಾದಕರು : ಡಾ || ವ್ಯಾಸನಕೆರೆ ಪ್ರಭಂಜನಾಚಾರ್ಯ

---

**ಸಂಪುಟ -೫   ಸಂಚಿಕೆ – ೭   ಶ್ರೀನಂದನ(ಅಧಿಕ - ನಿಜ ಭಾದ್ರಪದ)   ಸೆಪ್ಟೆಂಬರ್ ೨೦೧೨**

---


## ಶ್ರೀವ್ಯಾಸಸೂಕ್ತಿ

**ನ ಜಾತು ಕಾಮಃ ಕಾಮಾನಾಮುಪಭೋಗೇನ ಶಾಮ್ಯತಿ ।**
**ಹವಿಷಾ ಕೃಷ್ಣವರ್ತ್ಮೇವ ಭೂಯ ಏವಾಪಿ ವರ್ತತೇ ॥**

**-ಮಹಾಭಾರತ**

ಬಯಕೆಯು ಎಂದೂ ಸಹ ಬಯಸಿದ ವಸ್ತುಗಳನ್ನು ಅನುಭವಿಸುವುದರಿಂದ ಮಾತ್ರವೇ ಶಮನಗೊಳ್ಳಲಾರದು; ಬದಲಿಗೆ ತುಪ್ಪದಿಂದ ಬೆಂಕಿಯು ಪ್ರಜ್ವಲಿಸುವಂತೆ ಮತ್ತಷ್ಟು ಹೆಚ್ಚುತ್ತಲೇ ಹೋಗುವುದು.

## ಶ್ರೀಮಧ್ವಸೂಕ್ತಿ

**ಕೋ ನಾಮ ಸತ್ಸು ವಿಷಮಃ ಪ್ರಭವೇತ್ ಸುಖಾಯ ॥**

**-ಮ.ಭಾ.ತಾ.ನಿ.(೧೯/೪೫)**

ಸಜ್ಜನರಿಗೆ ದ್ರೋಹವೆಸಗಿದ ಯಾವನು ತಾನೇ ಸುಖಿಯಾಗಲು ಸಾಧ್ಯ !

# ವಿಷಯಾನುಕ್ರಮಣಿಕೆ


೧. ಶ್ರೀವ್ಯಾಸಸೂಕ್ತಿ – ಶ್ರೀಮಧ್ವಸೂಕ್ತಿ ೧

೨. ಹರಿದಾಸರ ಸೂಕ್ತಿರತ್ನಗಳು – ಶ್ರೀಪುರಂದರದಾಸರ ಸೂಕ್ತಿರತ್ನಗಳು ೩

೩. ಗಾಯತ್ರೀಭಾಷ್ಯರೂಪಃ ಅಸೌ – ೪೨ : – ಶ್ರೀಶ್ರೀವಿದ್ಯಾಧೀಶತೀರ್ಥ ಶ್ರೀಪಾದರು ೪

೪. ಶ್ರೀಕೃಷ್ಣನಾಮಾರ್ಥಚಂದ್ರಿಕಾ – ೪೫ : – ಶ್ರೀಶ್ರೀವಿದ್ಯೇಶತೀರ್ಥ ಶ್ರೀಪಾದರು ೬

೫. ಗೋಕ್ಷೀರ – ಶ್ರೀಶ್ರೀವಿಶ್ವಪ್ರಸನ್ನತೀರ್ಥಶ್ರೀಪಾದರು ೧೧

೬. ಸಂಪಾದಕೀಯ – ವಿಹಿತರೀತಿಯಲ್ಲಿ ನಡೆಯದ ಹೋಮ-ಹವನಗಳು ೧೨

೭. ಅನಂತಾಸನನಲ್ಲಿಯ ಪ್ರಣಾಮದ ಅನುಸಂಧಾನ –ಪಂ.ಶ್ರೀಸಗ್ರಿರಾಘವೇಂದ್ರ ಉಪಾಧ್ಯಾಯ ೧೪

೮. ಬಲರಾಮ ಜಯಂತಿ – ಧನ್ವಂತರಿ ಜಯಂತಿ – ವರಾಹ ಜಯಂತಿ –ವಿಪ್ರ ೧೭

೯. ಋಷಿಪಂಚಮೀ ವ್ರತ – ವಿಪ್ರ ೨೦

೧೦. ಗಣೇಶನ ಹಿರಿಮೆ –ವಿಪ್ರ ೨೧

೧೧. ಸುಮಧ್ವವಿಜಯದಲ್ಲಿ ಶ್ರೀಮದಾಚಾರ್ಯರ ಕಾಲ – ಜಯಂತ ವ್ಯಾಸನಕೆರೆ ೨೬

೧೨. ಕಣ್ವತೀರ್ಥದಲ್ಲೊಂದು ಅಪರೂಪದ ವಜ್ರದುಂಗುರ ! – ಜಯಂತ ವ್ಯಾಸನಕೆರೆ ೪೦

೧೩. ಶ್ರೀಕನಕದಾಸರ ಹರಿಭಕ್ತಿಸಾರ – ಡಾ. ವ್ಯಾಸನಕೆರೆ ಪ್ರಭಂಜನಾಚಾರ್ಯ ೪೧

೧೬. ಮಾಸದ ವಿಶೇಷಗಳು ೪೫


ಆಗಸ್ಟ್ ಸಂಚಿಕೆಯ ಮುಖಪುಟ-೪ರ ಶ್ರೀಸತ್ಯಧರ್ಮತೀರ್ಥರ ಮೂಲವೃಂದಾವನಚಿತ್ರವನ್ನು
ಒದಗಿಸಿದವರು : ಡಾ|| ಎಸ್.ಹನುಮಂತಜೋಯಿಸ್,ಶಿವಮೊಗ್ಗ

*****

---

## ಚಂದಾ ವಿವರ

ಆಜೀವಚಂದಾ : ರೂ ೫೦೦೦

ಪಂಚವಾರ್ಷಿಕ ಚಂದಾ : ರೂ. ೫೦೦; ಬಿಡಿ ಪ್ರತಿ : ರೂ. ೧೦

ವಿ.ಸೂ.:–

೧) ರೂ.೧೫,೦೦೦ಗಳನ್ನು ನೀಡಿ ಶ್ರೀವ್ಯಾಸಮಧ್ವಸಂಶೋಧನಪ್ರತಿಷ್ಠಾನದ ಸದಸ್ಯರಾಗುವವರಿಗೆ ಸರ್ವಮೂಲಗ್ರಂಥಗಳು, ಮಹಾಭಾರತತಾತ್ಪರ್ಯನಿರ್ಣಯ, ಹರಿಕಥಾಮೃತಸಾರ, ಸುಮಧ್ವವಿಜಯ, ಸಂಗ್ರಹರಾಮಾಯಣ ಮೊದಲಾದ ಪ್ರಕಾಶನದ ಎಲ್ಲಾ ಉಪಲಬ್ಧಗ್ರಂಥಗಳೂ ಉಚಿತ.

೨) ಅದರೊಂದಿಗೆ ೫ ವರ್ಷಗಳ ಕಾಲ ಶ್ರೀವ್ಯಾಸಮಧ್ವಮಾಸಪತ್ರಿಕೆಯನ್ನೂ ಸಹ ಉಚಿತವಾಗಿ ನೀಡಲಾಗುವುದು.

# ಹರಿದಾಸರ ಸೂಕ್ತಿರತ್ನಗಳು

(ದಾಸಸಾಹಿತ್ಯ - ವ್ಯಾಸಸಾಹಿತ್ಯದ ಕನ್ನಡ ಆವಿಷ್ಕರಣ. ಕನ್ನಡಕ್ಕೆ ವ್ಯಾಸಪೀಠದ ಭಾಗ್ಯವನ್ನು ನೀಡಿದ ಹಿರಿಮೆ ಹರಿದಾಸಸಾಹಿತ್ಯದ್ದು. ಅದರಿಂದ ಆಯ್ದ ಸೂಕ್ತಿರತ್ನಗಳನ್ನು ಪ್ರತಿತಿಂಗಳೂ ಈ ಅಂಕಣದಲ್ಲಿ ಕ್ರಮವಾಗಿ ನೀಡಲಾಗುವುದು.)

## ಶ್ರೀಪುರಂದರದಾಸರ ಸೂಕ್ತಿರತ್ನಗಳು

ಯಶೋದೆ ಕೋಪಿಸಿಕೊಂಡು ಎಡವುತ ಮುಗ್ಗುತ
ಕೋಲುಗೊಂಡು ಕೋಲ ಹೊಡಿಯಬೇಕೆಂದು
ಕೋಲುಕೊಂಡು ಬಂದಳು ನಿನ್ನ ಬಳಿಗೆ ನೀನೆಲ್ಲಿ
ಪೊಕ್ಕೆಯೊ ಪೇಳೊ ಪುರಂದರವಿಠಲ ॥

******

ಸುಖವಾದರೆ ಎನ್ನಿಂದಾಯಿತೆಂಬರು
ದುಃಖವಾದರೆ ದೈವ ಮಾಡಿತೆಂಬರು
ಸುಖಕೆ ತಾನ್ಯಾರು ದುಃಖಕೆ ತಾನ್ಯಾರು
ವಿಕಲನಾಗಿ ಕೆಡಬೇಡ ಮನುಜ
ರುಕ್ಮಿಣಿಯರಸ ಪುರಂದರವಿಠಲ
ಸುಖದುಃಖವನು ಮಾಡಿಸುವನು ಕಾಣೊ ॥

******

ಕೆಟ್ಟನೆಂದೆನಲ್ಯಾಕೆ ಕ್ಲೇಶ ಪಡುವುದ್ಯಾಕೆ
ಹೊಟ್ಟೆಗೋಸುಗ ಪರರ ಕಷ್ಟಪಡಿಸಲ್ಯಾಕೆ
ಬೆಟ್ಟದ ಮ್ಯಾಲಿದ್ದರೇನು ವನದೊಳಗಿದ್ದರೇನು
ಹುಟ್ಟಿಸಿದ ದೇವ ತಾ ಹುಲ್ಲು ಮೇಯಿಸುವನೆ
ಘಟ್ಯಾಗಿ ನೆರೆನಂಬು ಪುರಂದರವಿಠಲನ್ನ
ಸೃಷ್ಟಿಮಾಡಿದ ದೇವ ಸ್ಥಿತಿಮಾಡಲರಿಯನೆ ॥

******

# ಗಾಯತ್ರೀಭಾಷ್ಯರೂಪಃ ಅಸೌ - ೪೨

## (ಅನುಗ್ರಹಲೇಖನ)

**ಪರಮಪೂಜ್ಯ ಶ್ರೀಶ್ರೀವಿದ್ಯಾಧೀಶತೀರ್ಥ ಶ್ರೀಪಾದರು**
**ಪಲಿಮಾರು ಮಠ, ಉಡುಪಿ.**

### ಸವಿತಾ

ಯಜ್ಞಮಾಡುವವರನ್ನೂ ಯಜ್ಞವನ್ನೂ ರಕ್ಷಿಸಿದ ಭಗವಂತನಿಗೆ ಈ ನಾಮಧೇಯ. ಚತುರ್ಥಸ್ಕಂಧದಲ್ಲಿ ಬರುವ ಪೃಥುಮಹಾರಾಜರು ನಡೆಸಿದ ಯಜನ ಮನನ ನಡೆಯುತ್ತಿದೆ :

**ಸ್ಪೃಶಂತಂ ಪಾದಯೋಃ ಶೀರ್ಷ್ಣಾ ವ್ರೀಡಿತಂ ಸ್ವೇನ ಕರ್ಮಣಾ ।**
**ಶತಕ್ರತುಂ ಪರಿಷ್ವಜ್ಯ ವಿದ್ವೇಷಂ ವಿಸಸರ್ಜ ಹ ॥ ೧೯ ॥**

ದೇವಲೋಕದ ಅಧಿಪತಿಯಾದ ಇಂದ್ರನು ಪೃಥುಮಹಾರಾಜರ ಯಾಗದ ಅಶ್ವವನ್ನು ಅಪಹರಿಸಿದ. ಲೋಕರೀತಿಯಿಂದ ಇದೊಂದು ಹೇಯಕಾರ್ಯ, ಕುಟಿಲಕರ್ಮ. ಈ ಕಾರ್ಯಕ್ಕಾಗಿ ಸ್ವತಃ ತಾನೇ(ಇಂದ್ರ) ಅಸಹ್ಯಪಟ್ಟ. ತಪ್ಪಿನ ಅರಿವಾಗಿ ಲಜ್ಜೆಪಟ್ಟ. ನಾಚಿಕೆ-ಯಿಂದ ತನ್ನಿಂದಾದ ತಪ್ಪಿನ ಪರಿಮಾರ್ಜನೆಗಾಗಿ ಪೃಥುಮಹಾರಾಜನ ಪಾದತಲದಲ್ಲಿ ನತಮಸ್ತಕನಾದ. ಪೃಥುರಾಜನಾದರೋ ಪೃಥುಹೃತ್ ; ಹಾಗಾಗಿ ಇಂದ್ರನಿಂದಾದ ತಪ್ಪನ್ನು ಸಂಪೂರ್ಣ ಮನ್ನಿಸಿದ. ದ್ವೇಷಭಾವನೆಯನ್ನು ತ್ಯಜಿಸಿದ. ಹಾಗಾಗಿ ಶತಕ್ರತುವನ್ನು ಆಲಿಂಗಿಸಿದ.

ಭಗವಂತನ ರಾಜರಾಜೇಶ್ವರರೂಪದ ವಿಶೇಷ ಆವೇಶವುಳ್ಳ ಪೃಥುಮಹಾರಾಜರು ನಡೆಸಿದ ೯೯ ಯಜ್ಞಗಳೂ (ಸವ) ಸಾಂಗೋಪಾಂಗವಾಗಿ ನಡೆಯಿತು. ೧೦೦ನೆಯ ಸವಕ್ಕೆ ಇಂದ್ರನೇ ಅಡ್ಡಿಯಾದ. ಶತಕ್ರತುವೇ ಶತತಮ ಯಾಗಕ್ಕೆ ಶತ್ರುವಾದ. ಈ ಪ್ರಕರಣದಲ್ಲಿ ಯಾಗಮಾಡಿದವರನ್ನು ದೇವರು ರಕ್ಷಿಸಲೇ ಇಲ್ಲವಲ್ಲ ! ಹಾಗಾಗಿ ಭಗವಂತ ''ಸವಿತಾ'' ಹೇಗಾಗುತ್ತಾನೆ? ಯಾಗ ಮಾಡಿದವರನ್ನು ರಕ್ಷಿಸದಿದ್ದರೂ ಪರವಾಗಿಲ್ಲ, ಈ ಯಾಗಕ್ಕೆ ಅಡ್ಡಿಪಡಿಸಿದ ಇಂದ್ರನ ಪರವಾಗಿಯೇ ನಿಂತ. ಯಾಗವಿರೋಧಿಯ ಪಕ್ಷಕ್ಕೆ ಸೇರಿದ. ಯಾಗಮಾಡಿದವನಿಗೆ ಅಭಯಹಸ್ತ ನೀಡಿಲ್ಲ. ಆದ್ದರಿಂದ 'ಸವಿತಾ' ಎಂಬ ನಾಮಧೇಯ ಭಗವಂತನಲ್ಲಿ ಹೇಗೆ ಸಮನ್ವಯಗೊಳ್ಳುತ್ತೆ? ಎಂಬುದು ನಮ್ಮ ನಿಮ್ಮೆಲ್ಲರ ಪ್ರಶ್ನೆ.

ಈ ಪ್ರಶ್ನೆಗೆ ಶ್ರೀಮದ್ಭಾಗವತವೇ ಸಮರ್ಪಕ ಉತ್ತರ ನೀಡಿದೆ. ಯಾಗಕ್ಕೆ ಅಡ್ಡಿಪಡಿಸಿದ ಇಂದ್ರನನ್ನು ಭಗವಂತ ಶಿಕ್ಷಿಸದೆ ಬಿಡಲಿಲ್ಲ. ತಪ್ಪು ಮಾಡಿದ ಇಂದ್ರನನನ್ನು ಪೃಥುವಿನ ಪಾದಕ್ಕೆ ಬೀಳಿಸಿದ, ನಮನ ಮಾಡಿಸಿದ. ಇಂದ್ರ ತಪ್ಪೊಪ್ಪಿದ. 'ಉತ್ತಮೇ ವಚಸಾ ಶಿಕ್ಷಾ'' - ದೊಡ್ಡವರಿಗೆ ಸಾಕಿಷ್ಟು ಶಿಕ್ಷೆ. ದೇವಲೋಕದ ಅಧಿಪತಿಯಾದ ಅಮರರಿಂದ ವಂದಿತ-ನಾದ ಇಂದ್ರ ತಲೆತಗ್ಗಿಸುವಂತಾಯಿತು. ತ್ರಿಲೋಕೀಶನ ಶರಣಾಗತಿ ಈ ಅವನೀಶನಿಗಾಗಿದೆ

ಎಂದರೆ ಇನ್ನು ಇದಕ್ಕಿಂತ ದೊಡ್ಡ ಗೌರವ ಪೃಥುವಿನಿಂದ ನಿರೀಕ್ಷಿಸಲಾದೀತೇ? ಹಾಗಾಗಿ ಭಗವಂತನ 'ಸವಿತಾ' ಶಬ್ದಕ್ಕೆ ಭಂಗ ಬರಲಿಲ್ಲ. ಯಜ್ಞಮಾಡಿದವರನ್ನು ಗೌರವಿಸಿ ರಕ್ಷಿಸಿದ, ಅಡ್ಡಿಪಡಿಸಿದ ಇಂದ್ರನನ್ನು ಶಿಕ್ಷಿಸಿದ.

ಯಜ್ಞರಕ್ಷಕತ್ವ ಎಂಬ ಬಿರುದು ಭಗವಂತನಿಗೆ ಅನ್ವಯವಾದರೂ ಇಲ್ಲಿ ಮತ್ತೊಂದು ಸಮಸ್ಯೆ ನಮ್ಮನ್ನು ಕಾಡಲಾರಂಭಿಸಿತು. ಇದು ನಮ್ಮ ತತ್ತ್ವವಾದದ ಬಹುಮುಖ್ಯವಾದ ತಾರತಮ್ಯ ಸಿದ್ಧಾಂತ. ಈ ಸಿದ್ಧಾಂತಕ್ಕೇನೇ ಧಕ್ಕೆ ಬರಲಿಲ್ಲವೇ? ದೇವತೆಗಳು ರಾಜರಿಗಿಂತ ಯೋಗ್ಯತೆಯಲ್ಲಿ ಅತ್ಯಂತ ಎತ್ತರದಲ್ಲಿರುವವರು. ಉತ್ತಮೋತ್ತಮರು. ಅವರಿಂದ ಅಶ್ವಾಪಹಾರವಾಗಲೀ ಅಥವಾ ಯಾಗವಿರೋಧವಾಗಲೀ ಮುಂತಾದವು ನಡೆದರೂ ಅದು ದೋಷವೇ ಅಲ್ಲ. ಪ್ರಕೃತ ಇಂದ್ರನ ಪಾಲಿಗೂ ಇದು ವಿರೋಧವಾಗಲು ಸಾಧ್ಯವೇ ಇಲ್ಲ. ಶತಕ್ರತುಪದವಿಗೆ ಅರ್ಹನಾದವ ಮಾಡುವ ೧೦೦ನೆಯ ಯಾಗವು ಪೃಥುಮಹಾರಾಜನ ಪಾಲಿಗೆ ಅಯಾಜ್ಯಯಾಜನಯೇ ಸರಿ. ಆದ್ದರಿಂದ ಒಂದುರೀತಿಯಲ್ಲಿ ಪೃಥುವಿನ ೧೦೦ನೆಯ ಯಜ್ಞ ಶಾಸ್ತ್ರನಿಷಿದ್ಧ. ಶಾಸಕಾಂಗದ ಕಾಯಿದೆಗೇ ವಿರುದ್ಧ. ಇಂತಹ ಯಾಗವನ್ನು ತಪ್ಪಿಸಿದ್ದು ಇಂದ್ರನ ತಪ್ಪು ಅಲ್ಲವೇ ಅಲ್ಲ. ಹಾಗಾಗಿ ತಪ್ಪು ಮಾಡದ ಇಂದ್ರನನ್ನು ಶಿಕ್ಷಿಸಿದ್ದು ಎಷ್ಟು ಸರಿ? ಅಷ್ಟೇ ಅಲ್ಲದೇ ಇದು ಇಂದ್ರನ ಅವಮಾನವಲ್ಲ. ದೇವತೆಗಳ ಗಣಕ್ಕೇ ಮಾಡಿದ ಅವಮಾನವಲ್ಲವೇ? ಇಂದ್ರಪದವಿಗೇನೇ ಎಸಗಿದ ಅವಮಾನವಲ್ಲವೇ?

ಈ ಪ್ರಶ್ನೆಗೆ ಶ್ರೀಮಧ್ವಾಚಾರ್ಯರು 'ಬ್ರಹ್ಮತರ್ಕ' ಎಂಬ ಪ್ರಮಾಣವನ್ನು ಉದಾಹರಿಸಿ ಸಮರ್ಪಕ ಉತ್ತರವನ್ನು ನೀಡಿದ್ದಾರೆ :

**'ಆಯಾಸದುಃಖವ್ರೀಡಾದೀನ್ ಪ್ರಾಯಶಃ ಸುಖಿನೋಽಪಿ ತು ।**
**ನಿಯಮಾದೃಷಿಭೂತೇಷು ಮೋಹಾಯಾದರ್ಶಯನ್ ಸುರಾಃ' ॥**

'ನಿಯಮಾತ್ ಸುಖಿನಃ' ಅಂದರೆ ದೇವತೆಗಳೂ ತಾರತಮ್ಯನಿಯಮಕ್ಕನುಗುಣವಾಗಿ ಋಷಿಗಳಿಗಿಂತ, ರಾಜರಿಗಿಂತ ಭಾರೀ ಭಾರೀ ಸುಖವಂತರು. ಆದರೂ ಅಯೋಗ್ಯರ ಮೋಹನೆಗಾಗಿ ಶ್ರಮ-ದುಃಖ-ಅವಮಾನ ಪ್ರದರ್ಶಿಸುತ್ತಾರೆ. ಲಜ್ಜಾದಿಗಳನ್ನೂ ಸಹಿಸುತ್ತಾರೆ. ಯಾಕೆಂದರೆ, ತಾಮಸರನ್ನು ದಿಕ್ಕುತಪ್ಪಿಸುವುದೆಂದರೆ ದೇವತೆಗಳಿಗೆ ಮಹಾ ಸಂತೋಷದಾಯಕವಾದುದು. ರಾಜಸರಿಗೆ ಸಂದೇಹ-ಗೊಂದಲವಾಗುವಂತೆ ಮಾಡುವುದೂ ದೇವಾನಂದ. ''ನಿಯಮ'' - ಭಗವಂತನ ಆಜ್ಞೆಯೂ ಹೌದು. ಶ್ರೀಹರಿಯ ಆಜ್ಞಾ-ಪರಿಪಾಲನೆ ಮಹಾಪುಣ್ಯಪ್ರದ. ಮಹತ್ಪುಣ್ಯಪ್ರದಾಯಕ ಕೆಲಸಗಳಲ್ಲಿ ಸಾಮಾನ್ಯದೋಷಗಳು ನಗಣ್ಯ. ಶ್ರೀಹರಿ ಆಜ್ಞೆ ಪರಿಪಾಲನೆ ಸಾತ್ತ್ವಿಕರಿಗೆ ಮುದನೀಡುವ ಸಂಗತಿಯೂ ಹೌದು. ಹಾಗಾಗಿ ಇಂದ್ರಪದವಿಗಾಗಲೀ, ದೇವತೆಗಳ ಸಮೂಹಕ್ಕಾಗಲೀ ಅವಮಾನ ಮಾಡಿದ-ಹಾಗೆ ಆಗಿಲ್ಲ. ನಮ್ಮ ತಾರತಮ್ಯಸಿದ್ಧಾಂತಕ್ಕೂ ಭಂಗವಿಲ್ಲ. ಭಗವಂತನ ''ಸವಿತಾ'' ಹೆಸರಿಗೂ ಯಾವುದೇ ಧಕ್ಕೆಯಿಲ್ಲ.

*****

# ಶ್ರೀಕೃಷ್ಣನಾಮಾರ್ಥಚಂದ್ರಿಕಾ - ೪೫

## (ಅನುಗ್ರಹಲೇಖನ)

ಪರಮಪೂಜ್ಯ ಶ್ರೀಶ್ರೀವಿದ್ಯೇಶತೀರ್ಥ ಶ್ರೀಪಾದರು
ಭಂಡಾರಕೇರಿಮಠ

## ಶಕಟಾಸುರಭಂಜನಃ

ಪಾರ್ವತೀವರದಿಂದ ಅವಧ್ಯನಾದ ಕಂಸಭೃತ್ಯನಾದ, ಗಾಡಿಯ ಕೆಳಗೆ ಮಲಗಿರುವ ತನ್ನನ್ನು ಕೊಲ್ಲಲು ಗಾಡಿಯೊಳಗೆ ಪ್ರವೇಶಿಸಿರುವ ಶಕಟಾಸುರನನ್ನು ಪಾದತಲದಿಂದ ಒದ್ದು, ಚಕ್ರಕ್ಕೆ ಆಧಾರ ಅಡ್ಡವಾಗಿ ಸಂಯೋಜಿಸಿದ ದಾರುದಂಡವನ್ನು ಅಸ್ತವ್ಯಸ್ತಗೊಳಿಸಿ ಗಾಡಿಯ ನೊಗವನ್ನು ಭಗ್ನಗೊಳಿಸಿ ಆ ಗಾಡಿಯ ಜೊತೆಗೆ ಬೀಳಿಸಿ ಮರ್ದಿಸಿದನು. ಈ ಅರ್ಥದಲ್ಲಿ 'ಶಕಟಂ ಚ ಅಸುರಶ್ಚ ಶಕಟಾಸುರೌ, ತೌ ಭನಕ್ತಿ ಇತಿ ಶಕಟಾಸುರಭಂಜನಃ'' ಇತಿ ವಿಗ್ರಹಾನುಸಾರವಾಗಿ ''ಶಕಟಾಸುರ''ಶಬ್ದದಿಂದ ಕೀರ್ತಿತನಾಗಿದ್ದಾನೆ. ಭಗವಾನ್ ಶ್ರೀಕೃಷ್ಣನು ಈ ಕಾರ್ಯವನ್ನು ನಾಲ್ಕನೇ ತಿಂಗಳಲ್ಲಿ ಜನ್ಮನಕ್ಷತ್ರಮಹೋತ್ಸವ-ನಿಷ್ಕ್ರಾಮಣೋತ್ಸವಕಾಲದಲ್ಲಿ ಮಾಡಿದ್ದಾನೆ. ಈ ವಿಷಯದ ಮೇಲೆ ಮಹಾಭಾರತ-ತಾತ್ಪರ್ಯನಿರ್ಣಯದ ಹನ್ನೆರಡನೆಯ ಅಧ್ಯಾಯವು ಬೆಳಕನ್ನು ಚೆಲ್ಲಿದೆ –

**ಯದಾಽಽಪ ದೇವಶ್ಚತುರಃ ಸ ಮಾಸಾಂಸ್ತದೋಪನಿಷ್ಕ್ರಾಮಣಮಸ್ಯ ಚಾಸೀತ್ ।**
**ಜನ್ಮರ್ಕ್ಷಮಸ್ಮಿನ್ ದಿನ ಏವ ಚಾಸೀತ್ ಪ್ರಾತಃ ಕಿಂಚಿತ್ ತತ್ರ ಮಹೋತ್ಸವೋಽಭೂತ್ ॥**
**ತದಾ ಶಯಾನಃ ಶಕಟಸ್ಯ ಸೋಽಧಃ ಪದಾಽಕ್ಷಿಪತ್ ತಂ ದಿತಿಜಂ ನಿಹಂತುಮ್ ।**
**ಅನಃ ಸಮಾಶ್ರಿತ್ಯ ದಿತೇಃ ಸುತೋಽಸೌ ಸ್ಥಿತಃ ಪ್ರತೀಪಾಯ ಹರೇಃ ಸುಪಾಪಃ ॥**
**ಕ್ಷಿಪ್ತೋಽನಸಿಸ್ಥಃ ಶಕಟಾಕ್ಷನಾಮಾ ಸ ವಿಷ್ಣುನೇತ್ಥಾಸಹಿತಃ ಪಪಾತ ।**
**ಮಮಾರ ಚಾಶು ಪ್ರತಿಭಗ್ನಗಾತ್ರೋ ವ್ಯತ್ಯಸ್ತಚಕ್ರಾಕ್ಷಮಭೂದನಶ್ಚ ॥** ಇತಿ (೧೨.೮೯-೯೧)।

**ಪುರಾ ಧುನಿಶ್ಚಮಸ್ತಥಾಽಪಿ ಪೂತನಾಸಮನ್ವಿತೌ ।**
**ಅನೋಕ್ಷಸಂಯುತೌ ತಪಃ ಪ್ರಚಕ್ರತುಃ ಶಿವಾಂ ಪ್ರತಿ ।**
**ತಯಾ ವರೋಽಪ್ಯವಧ್ಯತಾ ಚತುರ್ಷು ಚ ಪ್ರಯೋಜಿತಃ ॥**

ಇತಿ ತ್ರಯೋದಶೇಽಧ್ಯಾಯೇ । (೧೩.೨೦)

ಪಾರ್ವತೀವರದಿಂದ ಅವಧ್ಯನಾಗಿದ್ದರೂ, ಆತನನ್ನು ಸಂಹರಿಸಿ ಆಕೆಯ ವರೋಲ್ಲಂಘನ-ಶಕ್ತಿಯನ್ನು ತೋರಿಸುವ ಮೂಲಕ ''ಆಕೆಯೇ (ಶಕ್ತಿಯೇ) ಸರ್ವೋತ್ತಮಳು'' ಎಂಬ ಶಾಕ್ತಮತವನ್ನು ಭಗವಾನ್ ಶ್ರೀಕೃಷ್ಣನು ನಿರಾಕರಿಸಿದ್ದಾನೆ. ಬ್ರಹ್ಮಸೂತ್ರವೂ ಈ ವಿಷಯದಲ್ಲಿ ಸಂವಾದಿಯಾಗಿದೆ. ''ಉತ್ಪತ್ತ್ಯಸಂಭವಾತ್'' ಇತಿ. ಶಕ್ತಿ (ಪಾರ್ವತಿ) ನೀಡಿದ ವರಕ್ಕೆ ಫಲವೇ (ಅವಧ್ಯತ್ವ) ಉತ್ಪತ್ತಿಯಾಗದಿರುವುದರಿಂದ ವಿಫಲವರಪ್ರದಾನರೂಪದೋಷವುಳ್ಳ ಆಕೆ ಸರ್ವೋತ್ತಮಳಲ್ಲ ಎಂದು ಸೂಚಿಸಿದ್ದಾನೆ.

ಅಥವಾ, ''ಶಕಟಾಸುರಭಂಜನ''ಪದದಿಂದ, ದಟ್ಟ ಕತ್ತಲನ್ನು ಸೃಷ್ಟಿಸಿ ಶಕಟ-ಪದ್ಮ-ಚಕ್ರಾಕಾರವ್ಯೂಹಗಳಲ್ಲಿ ಜಯದ್ರಥನನ್ನು ಸಂರಕ್ಷಿಸುತ್ತಿರುವ ಅಶ್ವತ್ಥಾಮ ದ್ರೋಣ ಕೃಪಾಚಾರ್ಯ ಮುಂತಾದವರಿಗೆ ಸೂರ್ಯಾಸ್ತಮಯದ ಭ್ರಾಂತಿಯನ್ನು ಹುಟ್ಟಿಸಿ ಈ ಕಾರಣದಿಂದ ರಕ್ಷಣಕಾರ್ಯದಿಂದ ಅವರು ವಿಶ್ರಮಿಸಿದಾಗ ಅರಕ್ಷಿತನಾದ ಆತನನ್ನು ಅರ್ಜುನಮುಖದಿಂದ ಸಂಹರಿಸಿದ ಭಗವಾನ್ ಶ್ರೀಕೃಷ್ಣನು ಕೀರ್ತಿತನಾಗಿದ್ದಾನೆ ಎನ್ನಬಹುದು. ಇಲ್ಲಿ 'ಶಕಟ'ಪದದಿಂದ ಶಕಟಾಕಾರವ್ಯೂಹವನ್ನು ಸ್ವೀಕರಿಸಬೇಕು. ಅಷ್ಟು ಮಾತ್ರವಲ್ಲ, ಅದರೊಳಗೆ ದ್ರೋಣಾಚಾರ್ಯರಿಂದ ಸುಸಜ್ಜಿತಗೊಳಿಸಿದ ಪದ್ಮವ್ಯೂಹ-ಚಕ್ರಾಕಾರವ್ಯೂಹವನ್ನು ಸ್ವೀಕರಿಸಬೇಕು. ಹೀಗೆ ಅರ್ಥ ಸ್ವೀಕರಿಸಿದಾಗ ಶಕಟೇನ = ಮಹಾಭಾರತಸಂಗ್ರಾಮದಲ್ಲಿ ಅಭಿಮನ್ಯುವಿನ ವಧೆಗೆ ಕಾರಣನಾದ ಜಯದ್ರಥನ ವಧೆಯನ್ನು ಮರುದಿನ ಸೂರ್ಯಾಸ್ತದೊಳಗೆ ಮಾಡುವುದಾಗಿ ಅರ್ಜುನ ಪ್ರತಿಜ್ಞೆಗೈದಾಗ ಭೀತನಾದ ದುರ್ಯೋಧನನು ಜಯದ್ರಥನ ಸಂರಕ್ಷಣೆಗಾಗಿ ದ್ರೋಣರನ್ನು ಶರಣುಹೊಂದಿದಾಗ, ಅವರಿಂದ ಪ್ರತಿಜ್ಞಾತವಾದ ಜಯದ್ರಥನ ಸಂರಕ್ಷಣೆ ಸಲುವಾಗಿ ಸನ್ನದ್ಧಗೊಳಿಸಿದ ಶಕಟಾಕಾರ-ಪದ್ಮಾಕಾರ-ಚಕ್ರಾಕಾರವ್ಯೂಹತ್ರಯದಿಂದ ಅಸುಂ = ತನ್ನ ಪ್ರಾಣವನ್ನು ರಮಯತಿ = ಸಂತೋಷಪಡಿಸುತ್ತಾನೆ ಅರ್ಥಾತ್ ಪೋಷಿಸುತ್ತಾನೆ. ಈ ನಿರ್ವಚನಾನುಸಾರವಾಗಿ ''ಶಕಟಾಸುರ''ಪದದಿಂದ ಜಯದ್ರಥನು ಉಕ್ತನಾಗಿದ್ದಾನೆ. ದ್ರೋಣ ಅಶ್ವತ್ಥಾಮಾದಿಗಳಿಂದ ಸುರಕ್ಷಿತನಾದ ಆತನನ್ನು ಸಂಹರಿಸುವ ಸಲುವಾಗಿ ದಟ್ಟವಾದ ಅಂಧಕಾರವನ್ನು ಸೃಷ್ಟಿಸಿ ಆತನ ರಕ್ಷಣೆಯಲ್ಲಿ ನಿರತರಾದ ಅವರಿಗೆ ಸೂರ್ಯಾಸ್ತಮಯದ ಭ್ರಾಂತಿಯನ್ನು ಹುಟ್ಟಿಸಿ ಈ ನಿಮಿತ್ತದಿಂದ ರಕ್ಷಣಕಾರ್ಯದಿಂದ ಅವರು ವಿಶ್ರಮಿಸುತ್ತಿರಲು ಅರಕ್ಷಿತನಾದ ಆತನನ್ನು ಅರ್ಜುನನ ಮುಖದಿಂದ ಬಾಣದಿಂದ ತಲೆ ಕತ್ತರಿಸಿ ಸಂಹರಿಸಿದ್ದಾನೆ. ಈ ನಿಮಿತ್ತದಿಂದ ''ಶಕಟಾಸುರಂ = ಜಯದ್ರಥಂ ಭನಕ್ತಿ ಇತಿ ಶಕಟಾಸುರಭಂಜನಃ'' ಎಂಬ ನಿರ್ವಚನಾನುಸಾರವಾಗಿ ಅರ್ಜುನಮುಖೇನ ಉಪಾಯದಿಂದ ಜಯದ್ರಥನನ್ನು ಕೊಂದ ಭಗವಾನ್ ಶ್ರೀಕೃಷ್ಣನು ಸಾರ್ಥಕವಾಗಿ ಶಕಟಾಸುರಭಂಜನಪದದಿಂದ ಕೀರ್ತಿತನಾಗಿದ್ದಾನೆ. ಈ ಪ್ರಮೇಯದ ಮೇಲೆ ಬೆಳಕನ್ನು ಚೆಲ್ಲುವ ಮಹಾಭಾರತತಾತ್ಪರ್ಯನಿರ್ಣಯದ ವಾಕ್ಯಗಳು ಈ ತೆರನಾಗಿವೆ –

**ಸತ್ಯಂ ವಃ ಪ್ರತಿಜಾನಾಮಿ ಶ್ವೋಽಸ್ಮಿ ಹಂತಾ ಜಯದ್ರಥಮ್ ।**
**ಯದ್ಯಸ್ಮಿನ್ನಹತೇ ಪಾಪೇ ಸೂರ್ಯೋಽಸ್ತಮುಪಯಾಸ್ಯತಿ ।**
**ಇಹೈವ ಸಂಪ್ರವೇಷ್ಟಾಹಂ ಜ್ವಲಿತಂ ಜಾತವೇದಸಮ್ ॥ ಇತಿ ಮಹಾಭಾರತೇ ।**

**ಶ್ರುತ್ವಾ ಪ್ರತಿಜ್ಞಾಂ ಪುರುಹೂತಸೂನೋರ್ದುರ್ಯೋಧನೇನಾರ್ಥಿತಃ ಸಿಂಧುರಾಜಮ್ ।**
**ತ್ರಾತಾಽಸ್ಮ್ಯಹಂ ಸರ್ವಥೇತಿ ಪ್ರತಿಜ್ಞಾಂ ಕೃತ್ವಾ ದ್ರೋಣವ್ಯೂಹಮಭೇದ್ಯಮಾತನೋತ್ ।**
**ಸದಿವ್ಯಮಗ್ರ್ಯಂ ಶಕಟಾಬ್ಜಚಕ್ರಂ ಕೃತ್ವಾ ಸ್ವಯಂ ವ್ಯೂಹಮುಖೇ ವ್ಯವಸ್ಥಿತಃ ।**
**ಪೃಷ್ಠೇ ಕರ್ಣದ್ರೋಣಕೃಪೈಃ ಸಶಲ್ಯೈರ್ಜಯದ್ರಥಂ ಗುಪ್ತಮಧಾತ್ ಪರೈಶ್ಚ ॥**

ಇತಿ ತಾತ್ಪರ್ಯನಿರ್ಣಯೇ ಷಡ್ವಿಂಶೇಽಧ್ಯಾಯೇ ।

**ತದ್ದೃಷ್ಟ್ವಾ ಭಗವಾನ್ ಕೃಷ್ಣೋ ಲೋಹಿತಾಯತಿ ಭಾಸ್ಕರೇ ।**
**ಅಜಿತೇ ದ್ರೋಣತನಯೇ ತ್ವಹತೇ ಚ ಜಯದ್ರಥೇ ।**
**ಅರ್ಜುನಸ್ಯ ಜಯಾಕಾಂಕ್ಷೀ ಸಸರ್ಜ ತಮ ಊರ್ಜಿತಮ್ ।**
**ತಮೋವ್ಯಾಪ್ತೇ ಗಗನೇ ಸೂರ್ಯಮಸ್ತಂಗತಂ ಮತ್ವಾ ದ್ರೌಣಿಪೂರ್ವಾಃ ಸಮಸ್ತಾಃ ।**
**ವಿಶಶ್ರಮುಃ ಸೈಂಧವಶ್ಚಾರ್ಜುನಸ್ಯ ಹತಪ್ರತಿಜ್ಞಸ್ಯ ಮುಖಂ ಸಮೈಕ್ಷತ ।**
**ತದಾ ಹರೇರಾಜ್ಞಯಾ ಶಕ್ರಸೂನುಶ್ಚಕರ್ತ ಬಾಣೇನ ಜಯದ್ರಥಸ್ಯ ।**
**ಅಗ್ನಿಂ ವಿವಿಕ್ಷನ್ನಿವ ದರ್ಶಿತಃ ಶಿರಸ್ತದಾ ವಚಃ ಪ್ರಾಹ ಜನಾರ್ದನಸ್ತಮ್ ॥**

ಇತಿ ಚ (ಇಪ್ಪತ್ತಾರನೆಯ ಅಧ್ಯಾಯ)।

ಅಥವಾ, ''ಶಕಟಾಸುರಭಂಜನ''ಪದದಿಂದ ಭೀಮಮುಖದಿಂದ ಬಕಾಸುರನನ್ನು ಸಂಹರಿಸಿದ ಭಗವಾನ್ ಶ್ರೀಕೃಷ್ಣನು ಕೀರ್ತಿತನಾಗಿದ್ದಾನೆ ಎನ್ನಬಹುದು. ಇಲ್ಲಿ 'ಶಕಟಾಸುರ'–ಪದದಿಂದ ಬಕಾಸುರನನ್ನು ಸ್ವೀಕರಿಸಬೇಕು. ಪರ್ಯಾಯದಿಂದ ಏಕಚಕ್ರನಾಗರೀಕರು ನೀಡಿದ ಎರಡು ಎತ್ತುಗಳಿಂದ ಸಂಯೋಜಿತವಾದ, ನರಸಹಿತವಾದ ಅನ್ನಪೂರ್ಣವಾದ ಗಾಡಿಯಿಂದಲೇ ಬಕಾಸುರನು ತನ್ನ ಪ್ರಾಣವನ್ನು ಸಂತೋಷಪಡಿಸುತ್ತಿದ್ದನು – ಪೋಷಿಸುತ್ತಿದ್ದನು. ಆ ನಿಮಿತ್ತ ''ಶಕಟೇನ = ಪೂರ್ವೋಕ್ತೇನ, ಅಸುಂ = ಸ್ವಪ್ರಾಣಂ ರಮಯತಿ = ಪುಷ್ಣಾತೀತಿ ಯಾವತ್'' ಎಂಬ ನಿರ್ವಚನಾನುಸಾರವಾಗಿ ಶಕಟಾಸುರ ಪದದಿಂದ ಬಕಾಸುರನನ್ನು ಸ್ವೀಕರಿಸುವುದು ಸಮಂಜಸವಾಗುತ್ತದೆ. ಅಂಥ ಬಕಾಸುರನನ್ನು ಭೀಮಮುಖದಿಂದ ಶ್ರೀಕೃಷ್ಣ ಸಂಹರಿಸಿದ್ದಾನೆ. ಈ ನಿಮಿತ್ತ ''ಶಕಟಾಸುರಂ = ಬಕಾಸುರಂ ಭನಕ್ತಿ = ಸಂಹರತಿ'' ಎಂಬ ನಿರ್ವಚನಾನುಸಾರ ಶಕಟಾಸುರಭಂಜನಪದದಿಂದ ಭಗವಾನ್ ಶ್ರೀಕೃಷ್ಣನು ಸಾರ್ಥಕವಾಗಿಯೇ ಕೀರ್ತಿತನಾಗಿದ್ದಾನೆ. ಬಲರಾಮ ಅರ್ಜುನ ಭೀಮಾದಿ–ಗಳಲ್ಲಿರುವ ಆ ಆ ನಾಮಗಳಿಂದ ವಾಚ್ಯಗಳಾದ ತನ್ನ ರೂಪಗಳಿಂದ ಭಗವಾನ್ ಶ್ರೀಕೃಷ್ಣನು ಭೂಭಾರಭೂತ ಅಸುರಾದಿಗಳನ್ನು ಸಂಹರಿಸುತ್ತಾನೆಂದು ಭಾಗವತ ದ್ವಿತೀಯಸ್ಕಂಧದಲ್ಲಿ ಏಳನೆಯ ಅಧ್ಯಾಯದಲ್ಲಿ ಉಕ್ತವಾಗಿದೆ –

**ಯೇ ವಾ ಮೃಧೇ ಸಮಿತಿಶಾಲಿನ ಆತ್ತಚಾಪಾಃ**
**ಕಾಂಬೋಜಮತ್ಸ್ಯಕುರುಸೃಂಜಯಕೈಕಯಾರ್ಣಾಃ ।**
**ಅನ್ಯೇಽಪಿ ಸಾಲ್ವಕಪಿವಲ್ಕಲದಂತವಕ್ರ–**
**ಸಪ್ರೋಕ್ಷಶಂಬರವಿಡೂರಥ ರುಗ್ಮಿಮುಖ್ಯಾಃ ।**
**ಯಾಸ್ಯಂತ್ಯದರ್ಶನಮಿತಾ ಬಲಪಾರ್ಥಭೀಮ–**
**ವ್ಯಾಜಾಹ್ವಯೇನ ಹರಿಣಾ ನಿಲಯಂ ತದೀಯಮ್ ॥ ಇತಿ ।**

ಅಥವಾ ''ಶಕಟಾಸುರಭಂಜನ'' ಪದದಿಂದಲೇ ಭೀಮಸೇನನಿಂದ ಭೂಭಾರಭಂಜನ–ಗೊಳಿಸಿದ ಭಗವಾನ್ ಶ್ರೀಕೃಷ್ಣನು ಕೀರ್ತಿತನಾಗಿದ್ದಾನೆ. ''ಭೂಭಾರಹರಣೇ ವಿಷ್ಣೋಃ ಪ್ರಧಾನಾಂಗಂ ಹಿ ಮಾರುತಿಃ'' ಎಂಬ ವಚನೋಕ್ತರೀತ್ಯಾ ಭಗವಾನ್ ಶ್ರೀಕೃಷ್ಣನು ಉಪನಿಷತ್ತಿನಲ್ಲಿ ''ಸಂವರ್ಗ'' ಎಂದು ಸ್ತುತನಾದ ಮುಖ್ಯವಾಯುದೇವರ ಅವತಾರ–

ಭೂತನಾದ ಭೀಮನನ್ನೇ ಬಲಕಾರ್ಯದಲ್ಲಿ ಪ್ರಧಾನಾಂಗನಾದುದರಿಂದ ದುರ್ಯೋಧನಾದಿ–ಗಳು, ಕೀಚಕ, ಬಕ, ಕಿರ್ಮೀರ, ಹಿಡಿಂಬ, ಜಟಾಸುರ, ಜರಾಸಂಧ ಮುಂತಾದ ಮಹಾಸುರರ ಭಂಜಕನನ್ನಾಗಿ ಮಾಡಿದ್ದಾನೆ ತಾನೆ? ಆದುದರಿಂದ ಭೀಮಸೇನನನ್ನು ಭೂಭಾರಭಂಜಕನನ್ನಾಗಿ ಮಾಡಿದನು ಎಂಬರ್ಥದಲ್ಲಿ ಶಕಟಾಸುರಭಂಜನ ಎಂಬ ಪದವು ಶ್ರೀಕೃಷ್ಣನಲ್ಲಿ ಸಮಂಜಸವಾಗುತ್ತದೆ.

ಇಲ್ಲಿ 'ಶಕಟಾಸುರ' ಪದದಿಂದ ಭೀಮನನ್ನು ಸ್ವೀಕರಿಸಬೇಕು. ವೃಕೋದರಾದಿ ಪದಗಳನ್ನು ಬಿಟ್ಟು 'ಶಕಟಾಸುರ' ಎಂಬ ಯೌಗಿಕಪದದಿಂದ ಭೀಮನನ್ನು ಉಲ್ಲೇಖಿಸುವ ಮೂಲಕ ಸರ್ವದೇವತಾಭಂಜಕನಾಗಿ ''ಸಂವರ್ಗವಿದ್ಯೆ''ಯಲ್ಲಿ ಪ್ರತಿಪಾದಿತನಾದ ''ಸಂವರ್ಗ'' ಎಂದು ಕೀರ್ತಿತನಾದ ಮುಖ್ಯವಾಯುವಿನ ಸ್ವರೂಪವನ್ನು ಸೂಚಿಸಲಾಗಿದೆ. ಈ ಸೂಚನಾಮುಖೇನ ಆತನಿಗೆ ಮಹಾಸುರಭಂಜನಶಕ್ತಿಯೂ ಸಂಭಾವಿತವೇ ಎಂದು ಸೂಚಿಸಲಾಗಿದೆ. ಇಲ್ಲಿ 'ಶಕಟಾಸುರ'ಪದದಿಂದ ವಾಯುದೇವನನ್ನು ಸ್ವೀಕರಿಸಬೇಕು. ರಾಜಾ ಪೌತ್ರಾಯಣನು ಸಾರಥಿ ಮೂಲಕ ಒಂದು ಕಡೆ ಗಾಡಿಯ ಕೆಳಗೆ ಉಪವಿಷ್ಟನಾದ ಜ್ಞಾನಿ ರೈಕ್ವನನ್ನು ತಿಳಿದು ಆತನಿಂದ ಶ್ರೇಷ್ಠವಿದ್ಯೆಯನ್ನು ಸಂಪಾದಿಸುವ ಸಲುವಾಗಿ ಗೋ–ಚಿನ್ನದ ಹಾರ–ಅಶ್ವತರೀರಥರೂಪ ಶಕಟವನ್ನು ದಕ್ಷಿಣಾರೂಪದಲ್ಲಿ ಆತನಿಗೆ ನೀಡಲು ಮುಂದಾಗುತ್ತಾನೆ. ಆಗ ಅತೃಪ್ತಿಯಿಂದ ರೈಕ್ವನು ಮೊದಲು ಗೋ–ಹಾರದಿಂದ ಯುಕ್ತವಾದ ಹೇಸರಗತ್ತೆ ಕಟ್ಟಿದ ರಥ (ಅಶ್ವತರೀರಥ)ರೂಪ ಶಕಟವನ್ನು ''ಹಾರೇತ್ವಾ ಶೂದ್ರ ತವೈವ ಸಹ ಗೋಭಿರಸ್ತು'' ಎಂಬುದಾಗಿ ನಿರಾಕರಿಸುತ್ತಾನೆ (ನಂತರ ಕನ್ಯಾಸಹಿತ ಆ ರಥರೂಪ ಶಕಟವನ್ನು ನೀಡಿದಾಗ ಸ್ವೀಕರಿಸುತ್ತಾನೆ). ಹೀಗಾಗಿ ಪೌತ್ರಾಯಣನು ಮೊದಲು ನೀಡಿದ ಕನ್ಯಾರಹಿತವಾದ ಅಶ್ವತರೀರಥರೂಪಶಕಟವನ್ನು ನಿರಾಕರಿಸುತ್ತಾನೆ. ಆದುದರಿಂದ ''ಶಕಟಂ ಅಸ್ಯತಿ = ನಿರಾಕರೋತಿ ಇತಿ ಶಕಟಾಸುಃ ರೈಕ್ವಃ''. ಇಲ್ಲಿ ನಿರಾಸ ಎಂಬ ಅರ್ಥವನ್ನು ನೀಡುವ 'ಅಸು ಕ್ಷೇಪಣೇ' ಎಂಬ ಧಾತುವಿನ ಮೇಲೆ ಸ್ವಭಾವ ಎಂಬರ್ಥದಲ್ಲಿ 'ಉ'ಪ್ರತ್ಯಯ ಬಂದಾಗ 'ಶಕಟಾಸು' ಎಂಬ ಶಬ್ದವು ನಿಷ್ಪನ್ನವಾಗುತ್ತದೆ. ಪೌತ್ರಾಯಣನು ಮೊದಲು ನೀಡಿದ ಕನ್ಯಾರಹಿತವಾದ ಶಕಟವನ್ನು ಪ್ರತಿಯೊಂದು ಕಲ್ಪದ ರೈಕ್ವರು ನಿರಾಕರಿಸುವ ಸ್ವಭಾವದವರಾದುದರಿಂದ 'ಶಕಟಾಸು' ಎಂಬ ಶಬ್ದವು ರೈಕ್ವರಿಗೆ ಸಮಂಜಸವಾಗುತ್ತದೆ. ಈ ಅರ್ಥದಲ್ಲಿ 'ಶಕಟಾಸು' ಎಂದು ಕೀರ್ತಿತರಾದ ರೈಕ್ವರನ್ನು ಸಂವರ್ಗವಿದ್ಯೆಯಿಂದ ಅವರಿಂದ ಉಪಾಸಿತನಾಗಿ ಮಹಾಧರ್ಮಸಿದ್ಧಿಕನ್ಯಾರಥಾದಿ–ಸಂಪತ್‌ಪ್ರಾಪ್ತಿಗೆ ಕಾರಣನಾಗಿ ಸಂತೋಷಪಡಿಸುವುದರಿಂದ ''ಶಕಟಾಸುಂ = ರೈಕ್ವಂ ಸ್ವವಿಷಯಕಸಂವರ್ಗವಿದ್ಯಾಫಲಪ್ರದಾನೇನ ರಮಯತೀತಿ'' ಎಂಬ ನಿರ್ವಚನಾನುಸಾರ ''ಶಕಟಾಸುರ''ಪದದಿಂದ ಸಂವರ್ಗವಿದ್ಯಾವಿಷಯನಾದ ಮುಖ್ಯಪ್ರಾಣನು ಕೀರ್ತಿತ–ನಾಗಿದ್ದಾನೆ. ವಾಯುದೇವರಿಗೆ ರೈಕ್ವರಿಂದ ಉಪಾಸಿತವಾದ ಸಂವರ್ಗವಿದ್ಯಾವಿಷಯತ್ವ ಹಾಗೂ ಉಪಾಸಿತವಾದ ವಿದ್ಯೆಯ ಫಲಪ್ರದಾನಮುಖೇನ ರೈಕ್ವರಂಜಕತ್ವವು ಈ ಕೆಳಗೆ ನಿರ್ದಿಷ್ಟವಾದ ಪ್ರಮಾಣವಚನಗಳಿಂದ ಸಾಬೀತಾಗಿದೆ –

**‘‘ರಾಜಾ ಪೌತ್ರಾಯಣಃ ಶೋಕಾಚ್ಛೂದ್ರೇತಿ ಮುನಿನೋದಿತಃ ।**
**ಪ್ರಾಣವಿದ್ಯಾಮವಾಪ್ಯಾಸ್ಮಾತ್ ಪರಂ ಧರ್ಮಮವಾಪ್ತವಾನ್ ॥ ಇತಿ ಪಾದ್ಮೇ ।**

**ಸಂವೃಕ್ತೇ ಸರ್ವದೇವಾನ್ ಯದ್ವಾಯುಃ ಸಂವರ್ಗ ಈರಿತಃ ।**
**ಮಹಿಮಾಽಸ್ಯ ಮಹಾನೇಷ ಯದನಾದ್ಯೋತ್ತಿ ದೇವತಾಃ ॥ ಇತಿ ಪ್ರಭಂಜನೇ ।**

ಇಲ್ಲಿ ರೈಕ್ವನಿಂದ ಹೊಂದಿದ ಸಂವರ್ಗ(ವಾಯು)ವಿದ್ಯೆಯಿಂದ ಮುಖ್ಯಪ್ರಾಣನ ಅನುಗ್ರಹದಿಂದ ಪೌತ್ರಾಯಣನಿಗೂ ಮಹಾಧರ್ಮಸಿದ್ಧಿಯಾಯಿತು ಎಂದ ಮೇಲೆ ಆ ವಿದ್ಯೋಪದೇಶಕನಾದ ರೈಕ್ವನಿಗೆ ಮುಖ್ಯಪ್ರಾಣನ ಪ್ರಸಾದದಿಂದ ಆ ಸಿದ್ಧಿ ಇದೆ ಎಂದು ಏನು ಹೇಳಬೇಕು?

ಒಟ್ಟಿನಲ್ಲಿ ‘‘ಶಕಟಾಸು’’ ಎನಿಸಿದ ರೈಕ್ವನನ್ನು ವಿದ್ಯಾಫಲಪ್ರದಾನದಿಂದ ಸಂತೋಷಪಡಿಸಿ ‘‘ಶಕಟಾಸುರ’’ ಎಂದು ಖ್ಯಾತನಾದ ವಾಯುದೇವರ ಸ್ವರೂಪನಾದ ಭೀಮನು ಭಂಜನ – ಪ್ರಭಂಜನ = ಭೂಭಾರಭೂತದುರ್ಯೋಧನಾದಿ ಮಹಾಸುರರ ಭಂಜಕನು ಯಾರ ಅನುಗ್ರಹದಿಂದ ಯಾರ ಪ್ರೀತಿಗೆ ಆದನೋ, ಆ ಭಗವಾನ್ ಶ್ರೀಕೃಷ್ಣನೇ ‘‘ಶಕಟಾಸುರಃ = ವಾಯುಸ್ವರೂಪಭೀಮಃ ಭಂಜನಃ = ಪ್ರಭಂಜನಃ ಯೇನ, ಯಸ್ಮೈ ಚ ಸಃ ಶಕಟಾಸುರಭಂಜನಃ’’ ಎಂಬ ನಿರ್ವಚನಾನುಸಾರವಾಗಿ ಶಕಟಾಸುರಭಂಜನಶಬ್ದದಿಂದ ಅನ್ವರ್ಥವಾಗಿ ಕೀರ್ತಿತನಾಗಿದ್ದಾನೆ.

ಮಹಾಸುರಭಂಜನ ಎಂಬರ್ಥದಲ್ಲೂ ವಾಯುದೇವನಿಗೆ ಪ್ರಭಂಜನಶಬ್ದವಾಚ್ಯತ್ವ–ವೆಂದು ಪ್ರಾತಃಸಂಕಲ್ಪಗದ್ಯದಲ್ಲಿ ಪ್ರತಿಪಾದಿತವಾಗಿದೆ – **‘‘ಸರ್ವಾತಾತ್ತ್ವಿಕಾಸುರಭಂಜಕೇನ ತಥಾ ತತ್ಪ್ರೇರಣಾಪ್ರಯುಕ್ತಾಶೇಷದುರ್ಮತಭಂಜಕೇನ ಅತ ಏವ ‘ಪ್ರಭಂಜನ’–ಶಬ್ದವಾಚ್ಯೇನ’’** ಇತಿ ॥

*****


# flipkart.com

## ಆನ್‌ಲೈನ್ ಮೂಲಕ ಪುಸ್ತಕ ಖರೀದಿಗೆ ಅವಕಾಶ

ನಮ್ಮ ಪ್ರತಿಷ್ಠಾನದಿಂದ ಪ್ರಕಟವಾಗುವ ಕೃತಿಗಳು ಹಾಗೂ ಸಿ.ಡಿ.ಗಳನ್ನು ಈಗ ವೆಬ್‌ಸೈಟ್ ಮೂಲಕ ಕೂಡ ಖರೀದಿಸಬಹುದಾಗಿದೆ. **www.flipkart.com** ಎಂಬ ವೆಬ್ ಸೈಟಿನಲ್ಲಿ ‘‘**vyasamadhwa**’’ ಎಂದು ಹುಡುಕಿದರೆ ನಮ್ಮ ಪ್ರಕಟನೆಗಳು ನಿಮಗೆ ವಿಶೇಷ ರಿಯಾಯಿತಿ ದರದಲ್ಲಿ ಲಭ್ಯವಾಗುತ್ತವೆ. ಆಯ್ದ ಊರುಗಳಲ್ಲಿ ""Cash on Delivery'' ವ್ಯವಸ್ಥೆ ಕೂಡ ಇದೆ. ರೂ.300/– ಅಥವಾ ಅದಕ್ಕೆ ಮೇಲ್ಪಟ್ಟ ಪುಸ್ತಕಗಳ ಖರೀದಿಗೆ ಭಾರತದ ಯಾವುದೇ ಊರಿಗೆ ಅಂಚೆವೆಚ್ಚರಹಿತ(free shipment) ವ್ಯವಸ್ಥೆಯೂ ಲಭ್ಯವಿದೆ. ಇದರ ಸದುಪಯೋಗವನ್ನು ಪಡೆದುಕೊಳ್ಳಲು ವಿನಂತಿ.

# ಗೋಕ್ಷೀರ
## (ಅನುಗ್ರಹ ಲೇಖನ)

**ಪರಮಪೂಜ್ಯ ಶ್ರೀಶ್ರೀ ವಿಶ್ವಪ್ರಸನ್ನತೀರ್ಥ ಶ್ರೀಪಾದರು**
**ಕಿರಿಯಪಟ್ಟ, ಪೇಜಾವರ ಅಧೋಕ್ಷಜ ಮಠ.**

ಭಗವದನುಗ್ರಹದಿಂದ ಪ್ರಕೃತಿಬಂಧನದಿಂದ ಕಳಚಿಕೊಂಡ ಜೀವರು ಮೋಕ್ಷದಲ್ಲಿ ಸ್ವರೂಪಭೂತವಾದ ಸುಖವನ್ನುಣ್ಣುತ್ತಿರುತ್ತಾರೆ. ಸ್ವರೂಪಭೂತವಾದ ಸುಖದ ಭೋಗ ಇನ್ನಾವುದೋ ಮತ್ತೊಂದ ಉದ್ದೇಶಸಿದ್ಧಿಗಾಗಿ ಅಲ್ಲ. ಅದು ಸಹಜಸ್ಥಿತಿ. ಅದಕ್ಕಿನ್ನೊಂದು ಪ್ರಯೋಜನ ಬೇಕಾಗಿಲ್ಲ; ಇರುವುದಿಲ್ಲ.

ಸಂಸಾರಾವಸ್ಥೆಯಲ್ಲಿರುವವರು = ಅಮುಕ್ತರು = ಪ್ರಕೃತಿಯ ಬಂಧನಕ್ಕೊಳ-ಗಾಗಿರುವವರು. ಅವರೂ ನಿತ್ಯ ಏನನ್ನಾದರೂ ಉಣ್ಣುತ್ತಿರಬೇಕು. ಅಮುಕ್ತರ ಊಟ-ಕ್ಕೊಂದು ಉದ್ದೇಶವಿದೆ. ಅದೆಂದರೆ ಸ್ವರೂಪಭೂತವಾದ ಸುಖವನ್ನುಣ್ಣುವುದು. ಅದು ಹೇಗೆಂದರೆ :- ಸ್ವರೂಪಸುಖವನ್ನುಣ್ಣಲು ಭಗವತ್ಪ್ರಸಾದ ಬೇಕು. ಅದಕ್ಕಾಗಿ ಸಾಧನೆ ಬೇಕು. ಅದಕ್ಕಾಗಿ ಶರೀರ ಬೇಕು. ಅದಕ್ಕಾಗಿ ಪ್ರಾಣಧಾರಣೆ ಬೇಕು. ಅದಕ್ಕಾಗಿ ಆಹಾರ ಬೇಕು.

ಸಾಧಕರ ಸಾಧನೆಗೆ ಅನುಕೂಲವಾಗುವಂತೆ ಭಗವಂತ ಏಳು ಬಗೆಯ ಅನ್ನಗಳನ್ನು ಸೃಷ್ಟಿಸಿದನೆನ್ನುತ್ತದೆ ಬೃಹದಾರಣ್ಯಕೋಪನಿಷತ್ತು. ನಾವು ನೀವು ಉಣ್ಣುವ ಸರ್ವ-ಸಾಧಾರಣವಾದುದು ಒಂದು. ಇದೇ ಅನ್ನ ಮಂತ್ರಪೂತವಾಗಿ ವೈಶ್ವದೇವ- ಬಲಿಹರಣ-ಗಳೆಂಬ ಎರಡುರೂಪದಿಂದ ದೇವತೆಗಳ ಅನ್ನವಾಗುತ್ತದೆ. ಸಾಧಕರ ಮನಸ್ಸು , ವಾಕ್, ಪ್ರಾಣಗಳೇ ಭಗವಂತನಿಗಾಹಾರ. ಏಳನೆಯ ಆಹಾರವೇ ಹಾಲು. ಎರಡು ಕಾಲಿನ, ನಾಲ್ಕು ಕಾಲಿನ ಪ್ರಾಣಿಗಳಿಗೆಲ್ಲ ಎಳವೆಯಲ್ಲಿ ಇದೇ ಆಹಾರ.

ಏಳನೆಯ ಬಗೆಯಲ್ಲಿ ಪ್ರಧಾನವಾದುದು ಗೋಕ್ಷೀರ. ಭಗವಂತ ಇದನ್ನು ಸಕಲ-ಪ್ರಾಣಿಗಳೊಂದಿಗೆ ದೇವತೆಗಳಿಗೂ ನೀಡಿ ತನಗೂ ಆಹಾರವಾಗಲೆಂದು ಸಂಕಲ್ಪಿಸಿದ.

**ಸತ್ವರಂ ಗೋಪಯಸಾ ಯೇನ ಹೋಮೋ ಹರೇಃ ಕೃತಃ।**
**ಭಗವತ್ತತ್ವವಿದುಷಾ ತಸ್ಯ ಮುಕ್ತಿರ್ನ ಸಂಶಯಃ॥**
**ಅದೃಷ್ಟಭಗವದ್ರೂಪಸ್ಯೈತದ್ದರ್ಶನಕಾರಣಮ್॥**

ಅಪರೋಕ್ಷಜ್ಞಾನಿಯಾದ ಸಾಧಕನು ಒಂದು ವರುಷಕಾಲ ಶ್ರೀಹರಿಯನ್ನುದ್ದೇಶಿಸಿ ಗೋಕ್ಷೀರದಿಂದ ಹೋಮ ಮಾಡಿದಲ್ಲಿ ಭಗವದನುಗ್ರಹ ವಿಶೇಷದಿಂದ ಮುಕ್ತಿಯಲ್ಲಿ ಆನಂದಾತಿಶಯವನ್ನು ಉಣ್ಣುತ್ತಾನೆ. ಯಾವ ಸಾಧಕನು ಇನ್ನೂ ಅಪರೋಕ್ಷಜ್ಞಾನಿ-ಯಾಗಿಲ್ಲವೋ ಆತನು ಮಾಡುವ ಇಂತಹ ಗೋಕ್ಷೀರಹೋಮದಿಂದುಂಟಾದ ಭಗವದ-ನುಗ್ರಹದಿಂದ ಬೇಗನೇ ಅಪರೋಕ್ಷಜ್ಞಾನಿಯಾಗುತ್ತಾನೆ.

*****

## ಸಂಪಾದಕೀಯ -

# ವಿಹಿತರೀತಿಯಲ್ಲಿ ನಡೆಯದ ಹೋಮ-ಹವನಗಳು

ಸಾಧಕನ ಉನ್ನತಿಗೆ ವಿಹಿತವಾಗಿರುವ ಮೂರು ಶ್ರೇಷ್ಠಕರ್ಮಗಳು ಎಂದರೆ ಯಜ್ಞ, ದಾನ ಹಾಗೂ ತಪಸ್ಸು: **ಯಜ್ಞೋ ದಾನಂ ತಪಶ್ಚೈವ ಪಾವನಾನಿ ಮನೀಷಿಣಾಮ್ ।** - ಗೀತಾ(೧೮/೫). ಇವುಗಳಲ್ಲಿ ಯಜ್ಞಕ್ಕೆ ವಿಶೇಷವಾದ ಪ್ರಾಧಾನ್ಯ. ಅಶ್ವಮೇಧಾದಿ ಮಹಾಯಜ್ಞಗಳು ಮಾತ್ರವಲ್ಲದೇ ಪವಮಾನಹೋಮ, ಬೃಹತೀಸಹಸ್ರಹೋಮ ಮೊದಲಾದವುಗಳೂ ಸಹ ಯಜ್ಞಗಳ ಸಾಲಿಗೇ ಸೇರುವ ಕ್ರಿಯೆಗಳು. ಪ್ರತಿದಿನ ಗೃಹಸ್ಥರಿಗೆ ವಿಹಿತವಾಗಿರುವ ವೈಶ್ವದೇವಾದ ಮಹಾಯಜ್ಞಗಳೂ ಸಹ ಈ ಗುಂಪಿಗೆ ಸೇರುತ್ತವೆ. ಎಂದರೆ ವಿಹಿತರೀತಿಯಲ್ಲಿ ಇವುಗಳ ಆಚರಣೆ ಜ್ಞಾನಸಿದ್ಧಿಗೆ ಕಾರಣವಾಗುತ್ತವೆ.

ಇಂದು ಹೋಮ-ಹವನಾದಿ ಕಾರ್ಯಗಳು ಒಂದಲ್ಲ ಒಂದುಕಡೆ ಸದಾ ನಡೆಯುತ್ತಲೇ ಇರುತ್ತವೆ ಎಂಬುದು ಸಂತಸದ ಸಂಗತಿ. ಆದರೆ, ಇವುಗಳು ನಡೆಯುವ ರೀತಿ ಮಾತ್ರ ಮೆಚ್ಚುವಂತಹುದಲ್ಲ. ಹೆಚ್ಚಿನ ಸಂದರ್ಭಗಳಲ್ಲಿ ಅವುಗಳಿಗೆ ಆಯ್ಕೆ-ಮಾಡಿಕೊಂಡ ದಿನಗಳೇ ಸೂಕ್ತವಾಗಿರುವುದಿಲ್ಲ. ಅದನ್ನು ಹಮ್ಮಿಕೊಂಡ ಯಜಮಾನನಿಗೆ ಸಂಧ್ಯಾವಂದನೆ, ದೇವಪೂಜೆ ಮೊದಲಾದ ನಿತ್ಯಕರ್ಮಗಳಲ್ಲಿ ಆಚರಣೆ, ಪರಿಜ್ಞಾನಗಳು ಮಾತ್ರವಲ್ಲದೇ ಆಸಕ್ತಿಯೂ ಸಹ ಇರುವುದಿಲ್ಲ. ಅಂದಿನ ದಿನ ಮಾತ್ರ ಸ್ನಾನಪೂರೈಸಿ ತಮಗೆ ತೋಚಿದಂತೆ ನಾಮಮುದ್ರೆಗಳನ್ನು ಧರಿಸಿ, ಹೋಮಕಾರ್ಯಕ್ಕೆ ಸಿದ್ಧರಾಗಿ ಕುಳಿತಿರುತ್ತಾರೆ. ಇಂತಹವರಲ್ಲೂ ಹೆಚ್ಚಿನವರು ಉಪಹಾರ ಪೂರೈಸಿ, ಕಾಫಿ ಇತ್ಯಾದಿಗಳನ್ನು ಸೇವಿಸಿರುತ್ತಾರೆ ; ಎಂದರೆ ಇದು ಹೋಮಕ್ಕೆ ಬೇಕಾದ ಅರ್ಹತೆಯನ್ನು ಸರ್ವಥಾ ಹೊಂದಿರುವುದಿಲ್ಲ. ಏಕಾದಶ್ಯಾದಿ ಕಡ್ಡಾಯವ್ರತಗಳ ಆಚರಣೆಯೂ ಇವರಲ್ಲಿ ಇರುವುದಿಲ್ಲ. ಅಗತ್ಯವಾದ ಆಹಾರನಿಯಮದ ಪಾಲನೆಯೂ ಇವರಿಂದ ಸಾಧ್ಯವಿರುವುದಿಲ್ಲ.

ಇನ್ನು ಆಗಮಿಸುವ ಪುರೋಹಿತರು ; ಕೆಲವರನ್ನು ಹೊರತುಪಡಿಸಿದರೆ ಹೆಚ್ಚಿನವರಿಗೆ ತಾವು ಮಾಡಿಸುವ ಹೋಮದ ದೇವತೆ, ಮಂತ್ರಗಳು, ವಿಧಿ-ವಿಧಾನಗಳು ಮೊದಲಾದವುಗಳ ಬಗ್ಗೆ ಸ್ಪಷ್ಟ ಪರಿಕಲ್ಪನೆ ಇರುವುದಿಲ್ಲ. ಕೆಲವರಿಗಂತೂ ಆ ಹೋಮಕ್ಕೆ ವಿಹಿತವಾದ ಪವಮಾನ ಮೊದಲಾದ ಮಂತ್ರಗಳ ಸುಳಿವೂ ಇರುವುದಿಲ್ಲ. ನನ್ನ ಆಪ್ತರೊಬ್ಬರ ಕೋರಿಕೆಯಂತೆ ಒಮ್ಮೆ ನಾನು ಪ್ರಸಿದ್ಧ ಪುರೋಹಿತರನ್ನು ಪವಮಾನಹೋಮ ಮಾಡಿಸಲೆಂದು ಕೇಳಿಕೊಂಡಿದ್ದೆ. ಅದಕ್ಕೆ ಒಪ್ಪಿಕೊಂಡಿದ್ದ ಅವರು ಕೊನೇ ಘಳಿಗೆಯಲ್ಲಿ ತಮ್ಮ ಬದಲಾಗಿ ತಮ್ಮ ಶಿಷ್ಯನೊಬ್ಬನನ್ನು ಆ ಕಾರ್ಯಕ್ಕೆ ಕಳುಹಿಸಿಕೊಟ್ಟರು. ಹಾಗೆ ತೆರಳಿದ ಆ ಶಿಷ್ಯ ಪವಮಾನದ ಒಂದು ಋಕ್ಕನ್ನೂ ಸಹ ಹೇಳದೆ, ತನಗೆ ತಿಳಿದ ಬೇರೆ ಮಂತ್ರಗಳನ್ನು ಹೇಳಿ ಹೋಮ ಮುಗಿಯಿತೆಂದು ತಿಳಿಸಿದ. ಆದರೆ ಆ ಕಾರ್ಯ ಹಮ್ಮಿಕೊಂಡಿದ್ದ ನನ್ನ ಆಪ್ತರಿಗೆ ಪವಮಾನದ ಪಾಠವಾಗಿ ಅದರ ಪರಿಚಯ ಇತ್ತು. ಅದರಿಂದಾಗಿ ಆ ಬಗ್ಗೆ ಪೌರೋಹಿತ್ಯಮಾಡಿಸಿದ ವ್ಯಕ್ತಿಯನ್ನು ಕೇಳಿದಾಗ ಆತ ಗಾಬರಿಗೊಂಡು ಸಲ್ಲದ ಸಬೂಬು ಹೇಳಿ ಅಲ್ಲಿಂದ ಪಲಾಯನ ಮಾಡಿದ; ಇದರಿಂದ ಮನನೊಂದ ಯಜಮಾನರು ತಾವು ಸಂಕಲ್ಪಿಸಿದ ಕಾರ್ಯ ವ್ಯರ್ಥವಾಯಿತೆಂಬುದನ್ನು ಮನಗಂಡು ಮತ್ತೊಂದು ದಿನ

ಇನ್ನೊಬ್ಬ ಸಮರ್ಥ ಪುರೋಹಿತರನ್ನು ಕರೆಸಿ, ಆ ಹೋಮಕಾರ್ಯವನ್ನು ಪೂರೈಸ-ಬೇಕಾಯಿತು. ಇದು ಒಂದು ನಿದರ್ಶನ ಮಾತ್ರ; ಎಂದರೆ ಯಜಮಾನನಂತೆ ಪುರೋಹಿತರಲ್ಲೂ ಸಹ ಇದರ ಬಗ್ಗೆ ಸಾಮರ್ಥ್ಯ ಹಾಗೂ ನಿಷ್ಠೆಗಳು ಮಾಯವಾಗುತ್ತಿವೆ.

ಇನ್ನು ಅನೇಕ ಹೋಮ-ಹವನಗಳನ್ನು ರಾಜಕಾರಣಿಗಳು ಮೊದಲಾದವರು ತಮ್ಮ ವಿವಿಧ ಬೇಡಿಕೆಗಳಿಗಾಗಿ ಪ್ರಧಾನ ತೀರ್ಥಕ್ಷೇತ್ರಗಳಲ್ಲಿ ಹಮ್ಮಿಕೊಳ್ಳುವುದುಂಟು. ಅವರ ಅಂತಹ ಕಾರ್ಯಗಳಲ್ಲಿ ಭಾಗವಹಿಸುವ ಪುರೋಹಿತರು ಅಂತಹವರು ಅಂಗಿ, ಪ್ಯಾಂಟ್ ಇತ್ಯಾದಿ ಯಾವುದೇ ವೇಷಭೂಷಣ ಧರಿಸಿದ್ದರೂ ಅವರ ಕೈಯ್ಯಿಂದಲೇ ಪೂರ್ಣಾಹುತಿಯನ್ನು ಹಾಕಿಸುವ ಅವಿವೇಕವನ್ನು ತೋರುವರು. ಇದು ಅವರಿಗೂ ಸಮಾಜಕ್ಕೂ ಹೇಗೆ ತಾನೆ ಒಳಿತಿಗೆ ಕಾರಣವಾದೀತು? ಅಧಿಕಾರ, ಹಣ ಮೊದಲಾದ ಬೇರೆ ಬೇರೆ ಕಾರಣಗಳಿಗಾಗಿ ಶಾಸ್ತ್ರದ ವಿಧಿ-ವಿಧಾನಗಳಿಗೆ ತಿಲಾಂಜಲಿ ನೀಡುವ ಇಂತಹ ಪ್ರಸಂಗಗಳು ಈಗ ಎಣಿಕೆ ಮೀರಿ ನಡೆಯುತ್ತಿದ್ದು, ವಿಹಿತರೀತಿಯ ಹೋಮ-ಹವನಗಳು ದುರ್ಲಭವೆನಿಸತೊಡಗಿವೆ. ಕೆಲವು ಪುರೋಹಿತರಂತೂ ಪವಮಾನಹೋಮಗಳಂತಹ ಹೋಮಗಳನ್ನು ೧ ಗಂಟೆಗಿಂತಲೂ ಕಡಿಮೆ ಅವಧಿಯಲ್ಲಿ ಮುಗಿಸುವುದನ್ನು ಕಣ್ಣಾರೆ ಕಂಡಿದ್ದೇನೆ. ಮತ್ತೆ ಕೆಲವರದು ಯಜಮಾನ ಹಾಗೂ ಅದರಲ್ಲಿ ಭಾಗವಹಿಸುವ ವಿದ್ವಾಂಸರು ಮೊದಲಾದವರ ಯೋಗ್ಯತೆಯನ್ನು ಅರಿತು, ಅದಕ್ಕೆ ತಕ್ಕಂತೆ ಕಾಲ ಹಾಗೂ ಮಂತ್ರಗಳನ್ನು ಬದಲಾಯಿಸುವ ಹವ್ಯಾಸ. ಇವೆಲ್ಲಾ ಮಂತ್ರ ಹಾಗೂ ಮಂತ್ರಾಭಿಮಾನಿ ದೇವತೆಗಳಿಗೆ ಮಾಡುವ ಅಪಚಾರ ಎಂಬುದಾಗಿಯೇ ಶಾಸ್ತ್ರಗಳು ತಿಳಿಸಿವೆ. ಸಹಜವಾಗಿಯೇ ಇವುಗಳಿಗೆ ನಿರೀಕ್ಷಿತಫಲ ಸರ್ವಥಾ ದೊರೆಯದು. ಬದಲಾಗಿ ಅನಪೇಕ್ಷಿತವಾದ ದುಷ್ಫಲಗಳೇ ಲಭಿಸಿ ಜನರಿಗೆ ಇವುಗಳ ಬಗ್ಗೆಯೇ ನಂಬಿಕೆ ನಶಿಸಿಹೋಗುವ ದೊಡ್ಡ ಅಪಾಯ ಒದಗುವುದು ನಿಶ್ಚಿತ. ಸಾಲದ್ದಕ್ಕೆ ಹೋಮಮಾಡಿಸುವ ಪುರೋಹಿತರು, ಮಾಡುವ ಯಜಮಾನ, ಅದರಲ್ಲಿ ಭಾಗಿಯಾಗುರವ ಋತ್ವಿಜರು, ಮಧ್ಯೆ ಮಧ್ಯೆ ಅನೇಕ ಬಗೆಯ ಹಾಳು ಹರಟೆಗಳಲ್ಲಿ ತಮಾಷೆಯ ಮಾತುಗಳಲ್ಲಿ ತೊಡಗಿಕೊಂಡಿರುವ ದೃಶ್ಯಗಳು ಸಾಮಾನ್ಯವಾಗಿ ಕಂಡುಬರುತ್ತಿರುತ್ತವೆ.

ಇಷ್ಟೆಲ್ಲಾ ನಡೆಯುತ್ತಿದ್ದರೂ, ಇವುಗಳನ್ನು ನಿಯಂತ್ರಿಸುವ ಒಂದು ವ್ಯವಸ್ಥೆ ನಮ್ಮಲ್ಲಿ ರೂಪುಗೊಂಡಿಲ್ಲ ಎಂಬುದು ನಿಜಕ್ಕೂ ಶೋಚನೀಯವಾದ ಸಂಗತಿ. ಇನ್ನಾದರೂ ಸಮಾಜದ ಮುಖಂಡರು ಎಚ್ಚೆತ್ತುಕೊಂಡು ಈ ಬಗ್ಗೆ ಕೂಲಂಕಷ ಚರ್ಚೆ ನಡೆಸಿ ಶಾಸ್ತ್ರವಿಹಿತರೀತಿಯಲ್ಲಿ ಹೋಮ-ಹವನಾದಿ ಸತ್ಕಾರ್ಯಗಳು ನಡೆಯುವಂತೆ ಯೋಜನೆಯನ್ನು ರೂಪಿಸುವ ಅಗತ್ಯ ಎದ್ದುಕಾಣುತ್ತಿದೆ. ಹಾಗೆ ಮಾಡಿದಲ್ಲಿ ಇವುಗಳ ಬಗ್ಗೆ ನಮ್ಮ ಜನಾಂಗಕ್ಕೆ ನಂಬಿಕೆ ಹುಟ್ಟಿ ಶಾಸ್ತ್ರವಿಹಿತಕಾರ್ಯಗಳು ಅರ್ಥವತ್ತಾದವುಗಳು ಎನ್ನಿಸಲು ಸಾಧ್ಯ. ಇದಕ್ಕೆ ಅಪವಾದ ಎಂಬಂತೆ ತಾವು ನಡೆಸುವ ಹೋಮಹವನಗಳಿಗೆ ಸಂಪೂರ್ಣ ನ್ಯಾಯ ದೊರಕಿಸುವ ದೀಕ್ಷೆಯನ್ನು ಹೊಂದಿದ ಕೆಲವು ಯಾಜ್ಞಿಕರು ಸಹ ಅಲ್ಲಲ್ಲಿ ಸಿಕ್ಕುವರು ಎಂಬುದು ಸಮಾಧಾನದ ಸಂಗತಿ.

*****

# ಅನಂತಾಸನನಲ್ಲಿಯ ಪ್ರಣಾಮದ ಅನುಸಂಧಾನ

– ಸಗ್ರಿ ರಾಘವೇಂದ್ರ ಉಪಾಧ್ಯಾಯ

**'ಗಮನಾಸನಸಂಕಥಾದಿಲೀಲಾಃ ಸ್ಮೃತಿಮಾತ್ರೇಣ ಭವಾಪವರ್ಗದಾತ್ರೀಃ'** – ಎಂದು ಮಧ್ವವಿಜಯದಲ್ಲಿ (೧೩/೪೨)ಶ್ರೀಮಧ್ವರ ಚಲನೆ, ಕುಳಿತುಕೊಳ್ಳುವಿಕೆ, ತಿಳಿಸುವಿಕೆ – ಮುಂತಾದ ಲೀಲೆಗಳು ಸ್ಮರಣೆಮಾತ್ರದಿಂದಲೇ ಸಂಸಾರಬಂಧನದಿಂದ ಬಿಡುಗಡೆಯನ್ನೂ, ಜ್ಞಾನ–ಭಕ್ತಿ–ವೈರಾಗ್ಯರೂಪವಾದ ಸಂಪತ್ತನ್ನೂ, ಅವುಗಳ ಮೂಲಕ ಮೋಕ್ಷವನ್ನೂ ನೀಡಬಲ್ಲವುಗಳೆಂದು ಸಾರಲಾಗಿದೆ.

ಇದರ ಮೇಲೆ ಸಹಜವಾಗಿ ಏಳಬಹುದಾದ ಎರಡು ಸಂದೇಹಗಳು : ಭಗವಂತನ ಜ್ಞಾನದಿಂದಲೇ ದೊರೆಯಬಹುದಾದ ಮೋಕ್ಷ ಮಧ್ವರ ಲೀಲೆಗಳ ಸ್ಮರಣದಿಂದ ದೊರೆಯುವುದಾದರೂ ಹೇಗೆ? ಭಗವಂತನ ಕುರಿತೂ ಶ್ರವಣ–ಮನನ–ನಿದಿಧ್ಯಾಸನರೂಪ ಜಿಜ್ಞಾಸೆಯಿಂದ ಉಂಟಾಗುವ ಜ್ಞಾನವೇ ಮೋಕ್ಷಪ್ರಯೋಜಕವಾಗಿರುವಾಗ ಮಧ್ವರ ಲೀಲೆಗಳ ಸ್ಮರಣಮಾತ್ರ, ಅರ್ಥಾತ್ ಮಾತ್ರ ಪದದಿಂದ ಬೇರ್ಪಡಿಸಲ್ಪಡುವ ಮನನ ನಿದಿಧ್ಯಾಸನಗಳೂ ಇಲ್ಲದೆ ಬರೇ ಸ್ಮರಿಸುವಿಕೆ ಹೇಗೆ ಮೋಕ್ಷಕ್ಕೆ ಪ್ರಯೋಜಕವಾದೀತು?

ಅರ್ಥವಾದರೂಪದಿಂದ ಹೊರಟ ಈ ಮಾತು **'ಆಭಾಸಕೋಽಸ್ಯ ಪವನಃ'** – ಎಂದಿರುವಂತೆ ಭಗವಂತನ ಮುಖ್ಯಪ್ರತಿಬಿಂಬರೆನಿಸಿರುವವರು ಮುಖ್ಯಪ್ರಾಣಾವತಾರ ಶ್ರೀಮಧ್ವರು ; ಅಂತಹವರ ಚಿಕ್ಕಪುಟ್ಟ ಚಟುವಟಿಕೆಯೂ ಭಗವದನುಸಂಧಾನಪೂರ್ವಕ ವಾಗಿಯೇ ನಡೆಸಲ್ಪಡುವುದರಿಂದ ಅಂತಹ ಅನುಸಂಧಾನಕ್ಕೆ ಜ್ಞಾಪಕವಾಗಿ **'ಚರಿತಂ ವೈಷ್ಣವಾನಾಂ ತು ವಿಷ್ಣೂದ್ರೇಕಾಯ ಕಥ್ಯತೇ** (ಮ.ಭಾ. ೧–೨–೧೩೦) ಎಂದಿರುವಂತೆ ವಿಷ್ಣುವಿನ ಪಾರಮ್ಯಕ್ಕೆ ಪೋಷಕವಾಗಿ ಮೋಕ್ಷಕ್ಕೆ ಪೂರಕವಾಗುತ್ತದೆ.

ಆದುದರಿಂದಲೇ **'ಇಚ್ಛಾಮಾತ್ರಂ ಪ್ರಭೋಃ ಸೃಷ್ಟಿಃ'** ಎಂಬ ಉಪನಿಷತ್ತಿನ ಮಾತು ಬರೇ ಇಚ್ಛೆಯಿಂದ ನಡೆಸಲಾಗುವಷ್ಟು ಅನಾಯಾಸವಾಗಿ ಸೃಷ್ಟಿಯನ್ನು ನಡೆಸುವನೆಂಬ ಅಭಿಪ್ರಾಯದಲ್ಲಿ ಹೇಗೆ ಹೊರಟಿದೆಯೋ ಹಾಗೆ ಮಧ್ವರ ಲೀಲೆಗಳ ಸ್ಮರಣಮಾತ್ರದಿಂದ ಎನ್ನುವಷ್ಟು ಅನಾಯಾಸವಾಗಿ ಮೋಕ್ಷ ದೊರಕುವುದು – ಎಂಬ ಅಭಿಪ್ರಾಯದಲ್ಲಿ **'ಸ್ಮೃತಿಮಾತ್ರೇಣ'**–ಎಂಬ ಮಾತು ಹೊರಟಿದೆ. ಮಧ್ವರ ಲೀಲೆಗಳನ್ನು ಭಗವದನುಸಂಧಾನಪೂರ್ವಕವಾಗಿ ಸ್ಮರಿಸಿಕೊಳ್ಳಲಾಯಿತೆಂದರೆ ಅದರಿಂದ ಪ್ರಸನ್ನರಾಗುವ ಹರಿಗುರುಗಳು ಆದಷ್ಟು ಬೇಗ ಮೋಕ್ಷ ದೊರಕುವಂತೆ ಅನುಗ್ರಹಿಸುವರು – ಎಂದು ಅಭಿಪ್ರಾಯ.

ಆದುದರಿಂದ ಮಧ್ವರ ಲೀಲೆಗಳನ್ನು ಅನುಸಂಧಾನಪೂರ್ವಕವಾಗಿ ಸ್ಮರಿಸಿದರಷ್ಟೇ ಅದರಿಂದ ಮೋಕ್ಷ ದೊರಕಬಹುದಾದ ಪ್ರಯುಕ್ತ ಮಧ್ವರ ಲೀಲೆಗಳ, ಮಹಿಮೆಗಳ

ಅನುಸಂಧಾನವನ್ನೂ, ಅಲ್ಲಿ ಭಗವಂತನ ಪಾತ್ರದ ಅನುಸಂಧಾನವನ್ನೂ ನಡೆಸಬೇಕು ಹೊರತು ಬರೇ ಸ್ಮರಣೆ ಸಾಲದು. ಆದುದರಿಂದ ಶ್ರೀಮಧ್ವರು ತಮ್ಮ ಸರ್ವಮೂಲ-ಗ್ರಂಥಗಳಲ್ಲಿ ನೀಡಿರುವ ಸಂದೇಶಗಳ ಹಿನ್ನೆಲೆಯಲ್ಲಿ ಅವರ ಲೀಲೆಗಳ ಹಿನ್ನೆಲೆಯಲ್ಲಿ ಅಳವಡಿಸಿಕೊಳ್ಳಬಹುದಾದ ಅನುಸಂಧಾನವನ್ನು ಗುರುತಿಸಿಕೊಂಡು ಅಂತಹ ಅನು-ಸಂಧಾನದ ಬೆಳಕಿನಲ್ಲಿ ಅವರ ಲೀಲೆಗಳ, ಮಹಿಮೆಗಳ ಸವಿಯನ್ನು ಆಸ್ವಾದಿಸೋಣ.

## ಅನಂತಾಸನನ ಪ್ರಣಾಮದ ಅನುಸಂಧಾನ

''ನಡಿಲ್ಲಾಯರ ಹೆಂಡತಿ ಹಡೆದಾಕ್ಷಣ ವಾಯುದೇವರು ಅಂಶದಿಂದ ಅವತರಿಸಿ ರೂಪ್ಯಪೀಠಪುರದಲ್ಲಿದ್ದ ಅನಂತಾಸನನನ್ನು ಚೆನ್ನಾಗಿ ನಮಿಸಿ ನಡೆಲ್ಲಾಯರ ಪಾಜಕದ ಮನೆಗೆ ಸಾಗಿದರು'' - ಎಂದು ಮಧ್ವವಿಜಯ(೨/೨೪)ದಲ್ಲಿ ಮಧ್ವಾವತಾರಕ್ಕಾಗಿ ವಾಯುದೇವರು ಅವತರಿಸಿದವರೇ ಅನಂತಾಸನನಿಗೆ ಪ್ರಣಾಮ ಸಲ್ಲಿಸಿದರೆಂದು ನಿರೂಪಿಸಲಾಗಿದೆ.

**'ನ ಹಿ ಹರಿಂ ಸತತಂ ನ ನಮತ್ಯಸೌ...'** (ಮ.ವಿ.೩/೭) ಎಂದಿರುವಂತೆ ಶ್ರೀಹರಿಯನ್ನು ಯಾವಾಗಲೂ ನಮಿಸುತ್ತಲೇ ಇರುವ ವಾಯುದೇವರು ಆ ವಿಶಿಷ್ಟ ಪ್ರಸಂಗದಲ್ಲಿ ಅನುಸಂಧಾನವಿಶೇಷದೊಂದಿಗೆ ವಿಶಿಷ್ಟವಾಗಿ ಪ್ರಣಾಮವನ್ನು ಸಲ್ಲಿಸಿದರೆಂದೇ ಅಭಿಪ್ರಾಯ. ಆಗ ಅಳವಡಿಸಿಕೊಂಡಿದ್ದ ಅನುಸಂಧಾನವಿಶೇಷ ಯಾವುದಿದ್ದಿರಬಹುದು? ಹಿಡಿಂಬವನದಲ್ಲಿ ವೇದವ್ಯಾಸರು ಇದ್ದಕ್ಕಿದ್ದಂತೆ ಕಾಣಿಸಿಕೊಂಡಾಗ **'ಸಮರ್ಪ್ಯ ಕೃತ್ಯಾನಿ... ಕರಿಷ್ಯಮಾಣಾನಿ ಚ ತಸ್ಯ ಪೂಜಾಂ ಸಂಕಲ್ಪಯಾಮಾಸ ಸ ಶುದ್ಧಬುದ್ಧಿಃ'** - ಎಂದು ಮಧ್ವವಿಜಯದಲ್ಲಿ ನಿರೂಪಿಸಿರುವಂತೆ ಭೀಮಸೇನ ಮುಂದೆ ತನ್ನ ಮಾಧ್ಯಮದಲ್ಲಿ ನಡೆಯಬೇಕಾದ ಸಾಧನೆಗಳನ್ನೆಲ್ಲ ಪರಾಮರ್ಶಿಸಿಕೊಂಡು **'ನ ಋತೇ ತ್ವತ್ ಕ್ರಿಯತೇ ಕಿಂಚನಾರೇ ಮಹಾಮರ್ಕಂ...........'** ಎಂದಿರುವಂತೆ ನನ್ನ ಅಂತರ್ಯಾಮಿಯಾಗಿ ಇದ್ದುಕೊಂಡು ನೀನೇ ಅವನ್ನೆಲ್ಲ ನಿನ್ನ ಪೂಜಾರೂಪದಿಂದ ನಡೆಸಲಿರುವಿ - ಎಂದು ಮುಂದೆ ತನ್ನ ಮೂಲಕ ನಡೆಯಲಿರುವ ಗ್ರಂಥರಚನೆ, ಪಾಠಪ್ರವಚನ, ತತ್ತ್ವಪ್ರಚಾರ, ದುರ್ವಾದಿನಿರಾಕರಣೆ, ಕೃಷ್ಣಪ್ರತಿಷ್ಠೆ ಶಿಷ್ಯರ ಸಿದ್ಧಪಡಿಸುವಿಕೆ - ಇವೆಲ್ಲವನ್ನೂ ಸ್ವತಂತ್ರವಾಗಿ ನೀನೇ ನಡೆಸಲಿರುವಿ - ಎಂದು ಆ ಸಾಧನೆಗಳ ಕುರಿತ ಸ್ವತಂತ್ರಕರ್ತೃತ್ವವನ್ನು ಅವನಿಗೆ ಸಂಬಂಧಿಸಿದ್ದನ್ನಾಗಿ ದೃಢಪಡಿಸಿಕೊಳ್ಳುವ ಅನುಸಂಧಾನ. **'ತಥಾಪಿ ಮತ್ಕೃತಾ ಪೂಜಾ ತತ್ ಪ್ರಸಾದೇನ ನಾನ್ಯಥಾ'** - ಎಂದು 'ಬ್ರಹ್ಮತರ್ಕ' - ತಿಳಿಸಿರುವಂತೆ ಆ ಸಾಧನೆಗಳನ್ನು ಸ್ವತಂತ್ರವಾಗಿ ಅವನೇ ನಡೆಸುವವನಾದರೂ ತಮಗೆ ಆ ಪ್ರಯುಕ್ತ ಪುಣ್ಯ ಹಾಗೂ ಕೀರ್ತಿ ಬರಬೇಕೆಂದು ತಮ್ಮನ್ನು ಅವುಗಳ ಅನುಷ್ಠಾನದಲ್ಲಿ ಮಾಧ್ಯಮವನ್ನಾಗಿ ಇಟ್ಟುಕೊಂಡಿರುವನೆಂಬ ಅನುಸಂಧಾನದಿಂದಾಗಿ ಅವನ ಬಗ್ಗೆ ಭಕ್ತಿ ಉಕ್ಕೇರುವುದು. ಅಂತಹ ಭಕ್ತಿಯಿಂದಾಗಿ ಸಮಗ್ರದೇಹವನ್ನೂ, ದೇಹದ ಪ್ರತಿಯೊಂದು ಅಂಗವನ್ನೂ, ಅವುಗಳ ಮೂಲಕ ನಡೆಸಲಾಗುವ ಪ್ರತಿಯೊಂದು ಸಾಧನೆಯನ್ನೂ ಸಮರ್ಪಿಸುವ ಸಂಕೇತವಾಗಿ ಅಷ್ಟಾಂಗಪೂರ್ವಕವಾದ ಪ್ರಣಾಮವನ್ನು ಅರ್ಪಿಸಿರುವರು. ನಾವೂ

ಕೂಡಾ ಅನಂತಾಸನನಿಗೆ ಪ್ರಣಾಮವನ್ನು ಅರ್ಪಿಸುವಾಗ ''ಮಧ್ವಗುರುಗಳು, ಅವತರಿಸುವ ಮುನ್ನ ಯಾವ ಅನಂತಾಸನನಿಗೆ ಪ್ರಣಾಮವನ್ನು ಅರ್ಪಿಸಿ ತಮ್ಮ ಸಮಗ್ರ ಅವತಾರದ ಸಾಧನೆಗಳನ್ನೆಲ್ಲ ಯಾರೆದುರು ನಿವೇದಿಸಿಕೊಂಡು ಅನುಗ್ರಹಕ್ಕೆ ಪಾತ್ರರಾಗಿದ್ದರೋ ಅಂತಹ ಅನಂತಾಸನನನ್ನೇ ನಮಿಸುತ್ತಿದ್ದೇನೆ'' – ಎಂಬ ಅನುಸಂಧಾನವನ್ನು ತಾಳೋಣ.

(ಮುಂದಿನ ಸಂಚಿಕೆಯಲ್ಲಿ: **ಪಾಜಕದತ್ತ ನಡೆಸಲಾದ ಪ್ರಯಾಣದ ಅನುಸಂಧಾನ**)

*****


**ಗೋಮಾತೆಯ ಸೇವೆಗೆ ಒಂದು ಸುವರ್ಣಾವಕಾಶ**

## ಗೋವರ್ಧನ ಗಿರಿ ವಿಶ್ವಸ್ತ ಮಂಡಳಿ

**ಶ್ರೀಪೇಜಾವರ ಅಧೋಕ್ಷಜ ಮಠ, ಉಡುಪಿ**

ಶ್ರೀಮನ್ಮಧ್ವಾಚಾರ್ಯರಿಂದ ಸಂದರ್ಶಿತವಾದ ಕೊಡವೂರಿನಲ್ಲಿ ಸುಮಾರು ಎರಡು ಎಕರೆ ಜಾಗದಲ್ಲಿ ಗೋಶಾಲೆಯನ್ನು ಹದಿನೇಳು ವರ್ಷಗಳಿಂದ ನಡೆಸುತ್ತಿರುವ ಗೋವರ್ಧನಗಿರಿ ವಿಶ್ವಸ್ತ ಮಂಡಳಿಯು ಉಡುಪಿಯಿಂದ ಇಪ್ಪತ್ತು ಕಿ.ಮೀ. ದೂರದ ನೀಲಾವರದಲ್ಲಿ ಇಪ್ಪತ್ತೆಂಟು ಎಕರೆ ಪ್ರದೇಶದಲ್ಲಿ ನಾಲ್ಕು ಹಟ್ಟಿಗಳುಳ್ಳ ಗೋಶಾಲೆಯೊಂದನ್ನು ತೆರೆದಿದೆ. ಈಗ ಅಲ್ಲಿ ಒಟ್ಟು ೬೫೦ಕ್ಕಿಂತ ಹೆಚ್ಚು ಗೋವುಗಳ ಸಂರಕ್ಷಣೆ ನಡೆದಿದೆ. ಅದಕ್ಕೆ ಪ್ರತಿ ತಿಂಗಳು ಸುಮಾರು ಎರಡು ಲಕ್ಷ ರುಪಾಯಿಗಳ ಖರ್ಚು ತಗಲುತ್ತಿದೆ. ಅದನ್ನು ನಿರ್ವಹಿಸಲು ನಮ್ಮ ವಿಶ್ವಸ್ತ ಮಂಡಳಿಯು ಯೋಜನೆಯೊಂದನ್ನು ರೂಪಿಸಿದ್ದು ಅದರ ಸದುಪಯೋಗ ಪಡೆಯಲು ಆಸ್ತಿಕರನ್ನು ವಿನಂತಿಸಿಕೊಳ್ಳಲಾಗಿದೆ. ಗೋವುಗಳಲ್ಲಿ ಸಮಸ್ತ ದೇವತೆ-ಗಳ ಸನ್ನಿಧಾನ ಹಾಗೂ ಶ್ರೀಲಕ್ಷ್ಮೀನಾರಾಯಣರ ವಿಶೇಷ ಸನ್ನಿಧಾನ. ಈ ಗೋಸೇವೆಯ ಅವಕಾಶ ಜನ್ಮಜನ್ಮಾಂತರದ ಸುಕೃತದ ಫಲ.

| | |
|---|---|
| **೧. ಮಹಾಪೋಷಕರು (ಆಜೀವ ಸದಸ್ಯರು)** | **ರೂ. ೧,೦೦,೦೦೦** |
| **೨. ಪೋಷಕರು (೧೦ ವರ್ಷಗಳ ಸದಸ್ಯತ್ವ)** | **ರೂ. ೫೦,೦೦೦** |
| **೩. ವಾರ್ಷಿಕ ಸದಸ್ಯರು** | **ಪ್ರತಿವರ್ಷ ರೂ. ೧೦,೦೦೦** |
| **೪. ಸಾಮಾನ್ಯ ಸದಸ್ಯರು** | **ಪ್ರತಿವರ್ಷ ರೂ. ೨,೫೦೦** |

ವಿ.ಸೂ. : ಆಸಕ್ತರು 'ಗೋವರ್ಧನಗಿರಿ ವಿಶ್ವಸ್ತ ಮಂಡಳಿ', ಶ್ರೀಪೇಜಾವರಮಠ, ಉಡುಪಿ – ಇವರಿಗೆ ನಗದು, ಚೆಕ್, ಡಿಡಿ ಮೂಲಕ ಸೇವೆ ಸಲ್ಲಿಸಬಹುದು.

# ಬಲರಾಮ ಜಯಂತಿ - ಧನ್ವಂತರಿ ಜಯಂತಿ - ವರಾಹ ಜಯಂತಿ

## (೧೭.೦೯.೧೨-ಬಲರಾಮ,ಧನ್ವಂತರೀ ಹಾಗೂ ವರಾಹಜಯಂತಿ)

-ವಿಪ್ರ

## ಬಲರಾಮ ರೂಪ

ಬಲರಾಮರೂಪವು ಮತ್ಸ್ಯಕೂರ್ಮಾದಿರೂಪಗಳಂತೆ ಶ್ರೀಹರಿಯ ಸಾಕ್ಷಾದ್ರೂಪ-ವಲ್ಲ. ಶುಕ್ಲಕೇಶ ಎಂಬ ರೂಪದ ಆವೇಶವನ್ನು ಹೊಂದಿದ ಆವೇಶಾವತಾರ ಇದು. ಆದಿಶೇಷನ ಅವತಾರವಾದ ಬಲರಾಮನಲ್ಲಿ ವಿಷ್ಣುವಿನ ಈ ಶುಕ್ಲಕೇಶದ ಆವೇಶದಿಂದಾಗಿ ವಿಶೇಷ ಮಹತ್ತ್ವ. ಕೆಲವು ಪುರಾಣಗಳಲ್ಲಿ ದಶಾವತಾರಗಳಲ್ಲಿ ಬಲರಾಮನನ್ನು ಗಣನೆ ಮಾಡಿರುವುದು ಉಂಟು. ಅದಕ್ಕೆ ಕಾರಣ ಮೇಲೆ ಹೇಳಿದಂತೆ ಒಳಗಿನ ಆವೇಶದ ಹಿನ್ನೆಲೆ ಮಾತ್ರ. ಅಸುರಮೋಹನವೆಂದು ಅದನ್ನು ಭಾವಿಸಬಹುದು. ಲಕ್ಷ್ಮಣನಾಗಿ ಶ್ರೀರಾಮ-ರೂಪದ ಶ್ರೀಹರಿಯನ್ನು ಸೇವಿಸಿದ ಶೇಷದೇವರೇ ಶ್ರೀಕೃಷ್ಣರೂಪದ ಶ್ರೀಹರಿ ಸೇವೆಗಾಗಿ ಬಲರಾಮನಾಗಿ ಅವತರಿಸಿದರು. ರಾಮರೂಪದ ತಮ್ಮನಾಗಿದ್ದರೆ ಕೃಷ್ಣರೂಪದ ಅಣ್ಣ ಎನಿಸಿದರು. ಶ್ರೀಭೀಮಸೇನ ಲೋಕಶಿಕ್ಷಣಕ್ಕಾಗಿ ಇವರ ಬಳಿ ಗದಾವಿದ್ಯೆಯ ಅಭ್ಯಾಸವನ್ನು ಮಾಡಿದ ವಿವರ ಮಹಾಭಾರತದಲ್ಲಿದೆ. ದುರ್ಯೋಧನನೂ ಸಹ ಇವರ ಬಳಿಯೇ ಗದಾವಿದ್ಯೆಯನ್ನು ಕಲಿತ. ಹೀಗೆ ಜೀವೋತ್ತಮ ಹಾಗೂ ಜೀವಾಧಮ ಇಬ್ಬರ ಸಂಪರ್ಕಕ್ಕೂ ಬಂದದ್ದು ಇವರ ವಿಶೇಷ. ಜೀವೋತ್ತಮನ ಅನುಗ್ರಹ ಸಂಪಾದನೆಗೆ ಇದು ಕಾರಣವಾದಂತೆ, ಜೀವಾಧಮನಾದ ಕಲಿಯ ಆವೇಶಕ್ಕೂ ಕಾರಣವಾಗಿ ಕೆಲವು ಸಲ ಭಗವಂತನೇ ಆದ ಕೃಷ್ಣನಿಗೆ ಸಮ್ಮತವಾಗದಂತೆ ನಡೆಯಲು ಕಾರಣವಾಯಿತು. ಸ್ಯಮಂತಕಮಣಿಯ ಪ್ರಸಂಗದಲ್ಲಿ ಶ್ರೀಕೃಷ್ಣನನ್ನೇ ಆ ಮಣಿಯನ್ನು ತೆಗೆದುಕೊಂಡವನೆಂದು ತಪ್ಪಾಗಿ ತಿಳಿದದ್ದು ಅಂತಹ ಒಂದು ಪ್ರಸಂಗ ಎಂಬ ವಿವರ ಮಹಾಭಾರತತಾತ್ಪರ್ಯ-ನಿರ್ಣಯದಲ್ಲಿದೆ : ಸ್ಯಮಂತಕಾರ್ಥೇ ರಾಮೋಽಪಿ ಕೃಷ್ಣಸ್ಯ ವಿಮನಾ ಅಭೂತ್ ॥ ಶ್ರೀಭೀಮಸೇನನಂತೆ ಶುದ್ಧಭಾಗವತಧರ್ಮರಾಗದಿರಲು ಇದು ಕಾರಣವಾಯಿತು.

ಇವರಿಗೆ ನಾಮಕರಣದ ಹೆಸರು ರಾಮ ಎಂದು. ಅದು ರಾಮರೂಪದ ಶ್ರೀಹರಿಯನ್ನು ಸೇವಿಸಿದ್ದರ ಫಲಶ್ರುತಿ ಎನ್ನಬಹುದು. ಪ್ರಲಂಬಾಸುರನಂತಹ ಪ್ರಬಲ ದೈತ್ಯನನ್ನು ಶ್ರೀಕೃಷ್ಣಾನು-ಗ್ರಹದ ಹಿನ್ನೆಲೆಯಲ್ಲಿ ಸಂಹರಿಸಿದಾಗ ಬಲರಾಮ ಎಂಬ ವಿಶಿಷ್ಟ ಪ್ರಶಸ್ತಿ ಇವರದಾಯಿತು.

## ಧನ್ವಂತರಿ ರೂಪ

ಧನ್ವಂತರಿ — ಧನ್ವಂತರಿ ಶ್ರೀಹರಿಯ ಸಾಕ್ಷಾದ್ರೂಪಗಳಲ್ಲೊಂದು. ಸಮುದ್ರಮಥನ ಕಾಲದಲ್ಲಿ ಅಮೃತಕಲಶವನ್ನು ಕೈಯಲ್ಲಿ ಹಿಡಿದುಬಂದ ರೂಪ ಎಂಬುದು ಇದರ ಹಿರಿಮೆ. ಹಾಗೆ ಬಂದ ಧನ್ವಂತರಿಯ ಕೈಯಿಂದ ಅಮೃತಕಲಶವನ್ನು ದೈತ್ಯರು ಕಿತ್ತಿಕೊಂಡು ಓಡಿದರು ಎಂಬುದು ಮೇಲ್ನೋಟದ ಕಥೆ. ಸರ್ವಸಮರ್ಥನಾದ ಶ್ರೀಹರಿಯಾದ ಧನ್ವಂತರಿಯಿಂದ ಹಾಗೆ ಕಿತ್ತಿಕೊಳ್ಳುವ ಶಕ್ತಿ ಬ್ರಹ್ಮಾದಿ ದೇವತೆಗಳಿಗೂ ಇರದು ಎಂಬುದು

ಶಾಸ್ತ್ರಪ್ರಮೇಯ. ದೈತ್ಯರ ದುರ್ಬುದ್ಧಿಯನ್ನು ಪ್ರಕಟಗೊಳಿಸಿ ಅವರಿಗೆ ಅಮೃತ ಸಿಕ್ಕದ್ದಕ್ಕೆ ಕಾರಣವನ್ನು ಸೂಚಿಸುವ ಸಲುವಾಗಿ ಧನ್ವಂತರಿ ದೈತ್ಯರಿಗೆ ಕಿತ್ತಿಕೊಳ್ಳಲು ಅವಕಾಶ ನೀಡಿದ ಎಂಬುದು ಶ್ರೀಮದಾಚಾರ್ಯರು ನೀಡಿರುವ ನಿರ್ಣಯ.

ಧನ್ವಂತರಿರೂಪದ ಚಿಂತನೆ ಸಕಲರೋಗಹರ, ಭವಪರಿಹಾರಕ ಎಂಬುದು ಶಾಸ್ತ್ರಗಳ ಸಂದೇಶ. ಆಯುರ್ವೇದವನ್ನು ಪ್ರವರ್ತನೆ ಮಾಡಿದ ರೂಪ ಎಂಬುದು ಇದರ ಮತ್ತೊಂದು ಹಿರಿಮೆ. ವೇದವ್ಯಾಸರೂಪದಿಂದ ಚತುರ್ವೇದಗಳ ಆವಿಷ್ಕಾರ; ಪರಶುರಾಮರೂಪದಿಂದ ಧನುರ್ವೇದದ ಪ್ರಸಾರ ನಡೆದರೆ, ಆಯುರ್ವೇದದ ಪ್ರಸಾರದಿಂದಾಗಿ ಸಾಧನೆಗೆ ಅಗತ್ಯವಾದ ದೇಹಾರೋಗ್ಯದ ಉಪಾಯವನ್ನು ನಿರೂಪಿಸಿದ ಕರುಣೆ ಈ ರೂಪದ್ದು.

ಅಮೃತವನ್ನು ಹಾಗೆ ಸುವರ್ಣಕಲಶದಲ್ಲಿ ಕೈಗಳಲ್ಲಿ ತರುವ ಮೂಲಕ ತಾನು ಜ್ಞಾನಾಮೃತ, ಮೋಕ್ಷಾಮೃತಗಳನ್ನು ಸುವರ್ಣಾಕ್ಷರಗಳ ಶಾಸ್ತ್ರಕಲಶಗಳಲ್ಲಿ ತರುವ ವೇದವ್ಯಾಸರೂಪದ ಸಾಕ್ಷಾದ್ಭಗವಂತನ ಅವತಾರ ಎಂದು ಸೂಚಿಸಿರುವನು ಎಂದು ತಿಳಿಯಬಹುದು.

ಶ್ರೀಮದಾಚಾರ್ಯರು ತಂತ್ರಸಾರಸಂಗ್ರಹದಲ್ಲಿ ಕೊನೆಯದಾಗಿ ಉಲ್ಲೇಖಿಸಿರುವ ಮಂತ್ರವೆಂದರೆ ಈ ಧನ್ವಂತರಿಮಂತ್ರವೇ. ಈ ಮಂತ್ರವನ್ನು ಮಂತ್ರರಾಜ, ಅಲ್ಲಿ ಉಕ್ತವಾಗಿರುವ ಮಂತ್ರಗಳಿಗೆಲ್ಲಾ ನಾಯಕಮಣಿಯಾದ ಮಂತ್ರ, ಸಂಸೃತಿವ್ಯಾಧಿಹರವಾದ ದಿವ್ಯಮಂತ್ರ ಮೊದಲಾಗಿ ವರ್ಣಿಸಿರುವರು. ಧನ್ವಂತರಿಮಂತ್ರವು 'ಧಂ ಧನ್ವಂತರಯೇ ನಮಃ' ಎಂದು ಒಂದು ಬಗೆಯದಾದರೆ, ಮತ್ತೊಂದು 'ಅಯಂ ಮೇ ಹಸ್ತೋ ಭಗವಾನ್' ಎಂಬ ಋಙ್ಮಂತ್ರರೂಪವಾದದ್ದು. ಇವುಗಳ ಜಪ, ಹೋಮಗಳಿಂದ ಸಕಲವಿಧರೋಗಗಳ ಪರಿಹಾರವಾಗಿ ನಿರ್ವಿಘ್ನವಾಗಿ ಸಾಧನೆ ನಡೆದು ಮೋಕ್ಷವು ಲಭಿಸುವುದು ಎಂದು ಅದರ ಬಗ್ಗೆ ಅಪೂರ್ವವಿವರಗಳನ್ನು ಶ್ರೀಮದಾಚಾರ್ಯರು ನೀಡಿರುವರು.

ಶ್ರೀವಿಜಯದಾಸರ ಧನ್ವಂತರಿ ಸುಳಾದಿ ಕನ್ನಡದಲ್ಲಿ ಧನ್ವಂತರಿರೂಪದ ಬಗ್ಗೆ ಅನೇಕ ವಿವರಗಳನ್ನು ನೀಡುವ ವಿಶಿಷ್ಟಕೃತಿ.

'ಎನ್ನ ಬಿನ್ನಪ ಕೇಳೋ ಧನ್ವಂತ್ರಿ ದಯಮಾಡೋ', ಎಂಬ ಕೀರ್ತನೆಯನ್ನು ರಚಿಸಿ ಶ್ರೀಗೋಪಾಲದಾಸರು ಶ್ರೀಜಗನ್ನಾಥದಾಸರ ಅಪಮೃತ್ಯುವನ್ನು ಪರಿಹರಿಸಿದ್ದು ಇತಿಹಾಸ. ಅಮೃತ ತಂದ ಆ ರೂಪದ ಮಂತ್ರದ ಸಿದ್ಧಿಯ ಫಲವೋ ಎಂಬಂತೆ 'ಹರಿಕಥಾಮೃತ-ಸಾರ'ದಂತಹ ಅಪೂರ್ವಕೃತಿ ಅವರಿಂದ ರೂಪುಗೊಂಡಿತು. 'ಆವ ರೋಗವೋ ಎನಗೆ ದೇವ ಧನ್ವಂತ್ರಿ' ಎಂಬ ಮತ್ತೊಂದು ಕೃತಿಯಲ್ಲಿ ಶ್ರೀಗೋಪಾಲದಾಸರು ಶ್ರೀಧನ್ವಂತರಿ-ಯನ್ನು ಸ್ತುತಿಸಿರುವರು.

## ವರಾಹರೂಪ

ವರಾಹರೂಪವು ದಶಾವತಾರದ ಕ್ರಮದಲ್ಲಿ ಮೂರನೆಯದು. ಆದರೆ ಅಭಿವ್ಯಕ್ತಿಯ ಕ್ರಮದಲ್ಲಿ ಇದೇ ಮೊದಲನೆಯದು ಎಂಬುದು ವಿಶೇಷ. ವರಾಹರೂಪದಿಂದ ಶ್ರೀಹರಿ ಪ್ರಳಯೋದಕದಲ್ಲಿ ಮುಳುಗಿದ್ದ ಭೂಮಿಯನ್ನು ಬ್ರಹ್ಮದೇವರ ಪ್ರಾರ್ಥನೆಯಂತೆ ಮೇಲೆತ್ತಿ ತಂದದ್ದು ಒಮ್ಮೆಯಾದರೆ ಮತ್ತೊಮ್ಮೆ ಹಿರಣ್ಯಾಕ್ಷನೆಂಬ ದೈತ್ಯ ಮುಳುಗಿಸಿದ್ದಾಗ ಅದನ್ನು

ಎತ್ತಿ ತಂದದ್ದು. ಎರಡು ಬಾರಿಯೂ ಸಹ ಹಿರಣ್ಯಾಕ್ಷನನ್ನು ಸಂಹರಿಸಿದ್ದು ಈ ರೂಪವೇ. ಮೊದಲನೆಯವನು ಆದಿಹಿರಣ್ಯಾಕ್ಷನಾದರೆ ಎರಡನೆಯವನು ದೈತ್ಯ ಹಿರಣ್ಯಾಕ್ಷ. ಮೊದಲನೆಯವನನ್ನು ಕೊಂದದ್ದು ಕೋರೆದಾಡೆಯಿಂದ. ಎರಡನೆಯವನನ್ನು ಕೊಂದದ್ದು ಕರ್ಣಮೂಲದಲ್ಲಿ ಹೊಡೆಯುವ ಮೂಲಕ. ಇಬ್ಬರು ಹಿರಣ್ಯಾಕ್ಷರೂ ಮೂಲತಃ ಒಬ್ಬ ಹಿರಣ್ಯಾಕ್ಷನೇ ಆದರೂ ಮೊದಲನೆಯವನು ಬ್ರಹ್ಮಪುತ್ರ. ಎರಡನೆಯವನು ದಿತಿ–ಕಶ್ಯಪರ ಪುತ್ರ. ಮೊದಲನೆಯವನು ಕೇವಲ ದೈತ್ಯನಾದರೆ ಎರಡನೆಯವನಲ್ಲಿ ವಿಷ್ಣು–ದ್ವಾರಪಾಲಕನಾದ ವಿಜಯನ ಆವೇಶವೂ ಇದ್ದಿತು. ಮೊದಲನೆಯವನು ಭೂಮಿಯನ್ನು ಎತ್ತುವಾಗ ಅಡ್ಡಿಮಾಡಿದರೆ, ಎರಡನೆಯವನು ಭೂಮಿಯನ್ನು ತಾನೇ ಮುಳುಗಿಸಿದ್ದವನು. ಹಿರಣ್ಯಾಕ್ಷವಧದ ಶ್ರವಣದಿಂದ ಬ್ರಹ್ಮಹತ್ಯ ಪರಿಹಾರವಾಗುವುದು ಎಂಬ ಫಲಶ್ರುತಿ ಶ್ರೀಮದ್ಭಾಗವತದಲ್ಲಿ ಉಕ್ತವಾಗಿದೆ. ಹಿರಣ್ಯಾಕ್ಷ ಇಂದು ಇಲ್ಲವಾದರೂ ಹಿರಣ್ಯಾಕ್ಷ ಪ್ರವೃತ್ತಿ ಸಾಧಕರಲ್ಲಿಯೂ ಸಾಮಾನ್ಯವಾಗಿ ಒಂದು ಹಂತದಲ್ಲಿ ಇದ್ದೇ ಇರುತ್ತದೆ. ಹಾಗೆಂದರೆ 'ಹಿರಣ್ಯೇ ಅಕ್ಷಿಣೀ ಯಸ್ಯ ಸಃ ಹಿರಣ್ಯಾಕ್ಷಃ' ಎಂದರೆ ಚಿನ್ನ ಮೊದಲಾದವುಗಳ ಮೇಲೆ ಕಣ್ಣು ಹಾಕುವ ಪ್ರವೃತ್ತಿ ಎಂದರ್ಥ. ಅದರ ಪರಿಹಾರಕ್ಕೆ ವರಾಹರೂಪದ ಚಿಂತನೆಯೇ ವಿಹಿತ ಉಪಾಯ ಎಂದು ಇದರ ತತ್ತ್ವ. ಭೂಮಿಯನ್ನು ಎತ್ತಿದ್ದರಿಂದಾಗಿ ಭೂವರಾಹ ಎಂದೇ ಪ್ರಸಿದ್ಧ. ಭೂದೇವಿಯ ಪತಿಯೂ ಈ ರೂಪವೇ. ಮುಖ್ಯವಾಗಿ ಭೂದೇವಿಯಲ್ಲಿನ ಭೂರೂಪದ ಮಹಾಲಕ್ಷ್ಮಿಯ ಪತಿ ಎಂಬುದು ವಸ್ತುಸ್ಥಿತಿ. ನರಕಾಸುರ ವರಾಹ–ಭೂಮಿಯರ ಪುತ್ರ. ಅವನನ್ನು ಶ್ರೀಕೃಷ್ಣರೂಪದಿಂದ ಶ್ರೀಹರಿ ಸಂಹರಿಸಿದ.

ವರಾಹಪುರಾಣ ಎಂಬುದು ಹದಿನೆಂಟು ಮಹಾಪುರಾಣಗಳಲ್ಲಿ ಒಂದಾದ ಪುರಾಣ. ಇದು ವರಾಹರೂಪದ ಶ್ರೀಹರಿ ತನ್ನ ಪತ್ನಿಯಾದ ಭೂದೇವಿಗೆ ಉಪದೇಶಿಸಿದ ಧರ್ಮ–ಸ್ವರೂಪವನ್ನು ವಿವೇಚಿಸುವ ವಿಶಿಷ್ಟಪುರಾಣ. ಸಾತ್ವಿಕಪುರಾಣಗಳಲ್ಲಿ ಒಂದು ಎಂಬುದು ಇದರ ಖ್ಯಾತಿ. ಇದರಲ್ಲಿ ಬರುವ ಚಾತುರ್ಮಾಸ್ಯಮಹಾತ್ಮ್ಯ ಭಾಗವು ಚಾತುರ್ಮಾಸ್ಯ–ದೊಂದಿಗೆ ಇನ್ನೂ ಅನೇಕ ಬಗೆಯ ವಿಶಿಷ್ಟವೈಷ್ಣವಧರ್ಮಗಳನ್ನು ನಿರೂಪಿಸುವ ತಾತ್ತ್ವಿಕಭಾಗ. ಮಹಾವರಾಹ ಎಂಬುದು ಹದಿನೆಂಟು ಉಪಪುರಾಣಗಳಲ್ಲಿ ಒಂದು. ಹೀಗೆ ವರಾಹರೂಪದ ಎರಡು ಪುರಾಣಗಳೂ ಪ್ರಚಲಿತವಾಗಿವೆ ಎಂಬುದು ವಿಶೇಷ. ಈ ಎರಡು ಪುರಾಣ–ಗಳಿಂದಲೂ ಶ್ರೀಮದಾಚಾರ್ಯರು ಅನೇಕ ವಾಕ್ಯಗಳನ್ನು ತಮ್ಮ ಸರ್ವಮೂಲಗ್ರಂಥಗಳಲ್ಲಿ ಉದಾಹರಿಸಿರುವರು.

**'ತ್ವಂ ಚ ರುದ್ರ ಮಹಾಬಾಹೋ ಮೋಹಶಾಸ್ತ್ರಾಣಿ ಕಾರಯ ।**
**ಅತಥ್ಯಾನಿ ವಿತಥ್ಯಾನಿ ದರ್ಶಯಸ್ವ ಮಹಾಭುಜ ॥**
**ಪ್ರಕಾಶಂ ಕುರು ಚಾತ್ಮಾನಂ ಅಪ್ರಕಾಶಂ ಚ ಮಾಂ ಕುರು ।'**

–ಇತ್ಯಾದಿಯಾಗಿ ರುದ್ರದೇವರಿಗೆ ಮೋಹಕಶಾಸ್ತ್ರವನ್ನು ರಚಿಸಲು ಶ್ರೀಹರಿ ನೀಡಿದ ಆದೇಶದ ವಿವರ ಬರುವುದು ವರಾಹಪುರಾಣದಲ್ಲಿ. ಈ ವಾಕ್ಯಗಳು ಮುದ್ರಿತ–ವರಾಹಪುರಾಣದಲ್ಲೂ ಕಾಣಸಿಗುತ್ತವೆ ಎಂಬುದು ಗಮನಾರ್ಹ.

**ಸೂಕರರೂಪಕದಾನವಶತ್ರೋ ಭೂಮಿವಿಧಾರಕ ಯಜ್ಞವರಾಂಗ।,**
**ಸಗಿರಿಧರಧರಾತಲವಹ ಸುಸೂಕರ ಪರಮವಿಬೋಧ ಹೇ ಭವ ಮಮ ಶರಣಮ್।**
**ಶುಭತಮಕಥಾಶಯ ಪರಮಸದೋದಿತ ಜಗದೇಕಕಾರಣ ರಾಮ ರಮಾರಮಣ॥**

**– ದ್ವಾದಶಸ್ತೋತ್ರ**

*****

# ಋಷಿಪಂಚಮೀ ವ್ರತ

## (ಋಷಿಪಂಚಮೀ ೨೦.೦೯.೧೨ ನಿಮಿತ್ತ ಲೇಖನ)

ಋಷಿಪಂಚಮಿಯು ಸ್ತ್ರೀಯರ ರಜೋದೋಷದ ಪರಿಹಾರಕ್ಕಾಗಿ ವಿಹಿತವಾಗಿರುವ ವಿಶಿಷ್ಟವಾದ ವ್ರತ. ಸ್ತ್ರೀಯು ರಜಸ್ವಲೆಯಾಗಿದ್ದಾಗ ಇಂದ್ರದೇವರು ಮಾಡಿದ ವೃತ್ರ ಹತ್ಯೆಯ ನಿಮಿತ್ತವಾದ ಬ್ರಹ್ಮಹತ್ಯೆಯ ಒಂದು ಭಾಗದಿಂದ ಕೂಡಿರುವಳು ಎಂಬುದು ಶ್ರೀಮದ್ಭಾಗವತ ಮಹಾಭಾರತಗಳಲ್ಲಿ ಬಂದಿರುವ ವಿವರ. ಆ ಕಾಲದಲ್ಲಿ ಮನೆಯಲ್ಲಿ ಬಟ್ಟೆ ಪಾತ್ರೆ ಮೊದಲಾದವುಗಳ ಸಂಪರ್ಕವನ್ನು ತೊರೆದು ದೂರ ಇರಬೇಕು ಎಂಬುದು ಶಾಸ್ತ್ರವಿಧಿ. ಅದು ಸಕಲ ವರ್ಣದವರಿಗೂ ಸಹ ವಿಹಿತವಾಗಿದ್ದ ವಿಶಿಷ್ಟವಾದ ವಿಧಿ ಎಂಬುದು ಮತ್ತೊಂದು ಅಂಶ. ಆಗ ಯಾವುದೇ ರೀತಿಯಲ್ಲೂ ನಿಯಮಗಳನ್ನು ಉಲ್ಲಂಘಿಸುವುದು ನರಕಾದ್ಯನರ್ಥಕ್ಕೆ ಸಾಧನ. ಋಷಿಪಂಚಮೀ ಕಥೆಯಲ್ಲಿ ಬಂದಿರುವಂತೆ ಅಂತಹ ತಪ್ಪಿನಿಂದಾಗಿ ಒಬ್ಬ ಋಷಿಕನ್ಯೆ ವಿಧವೆಯಾದುದಲ್ಲದೇ ಕ್ರಿಮಿಗಳ ರಾಶಿಯಂತೆ ಕಾಣುತ್ತಿದ್ದ ವಿವರ ಮತ್ತು ಅಜ್ಞಾತವಾಗಿ ಒಮ್ಮೆ ತಪ್ಪನ್ನೆಸಗಿದ್ದರ ಫಲವಾಗಿ ಗಂಡಹೆಂಡತಿ ಕ್ರಮವಾಗಿ ನಾಯಿ, ಎತ್ತುಗಳಾಗಿ ಜನಿಸಿ ಶಿಕ್ಷೆ ಅನುಭವಿಸಿದ ವಿವರ ಬಂದಿದೆ.

ಜ್ಞಾತವಾಗಿ ಮಾತ್ರವಲ್ಲದೆ ಅಜ್ಞಾತವಾಗಿ ನಡೆಯುವ ಅಪಚಾರವೂ ಸಹ ಅನರ್ಥಕ್ಕೆ ಕಾರಣ ಎಂದು ಇದರ ಭಾವ. ಅಂತಹ ದೋಷದ ಪರಿಹಾರಕ್ಕಾಗಿ ವಿಹಿತವಾಗಿರುವ ವ್ರತವೇ ಈ ಋಷಿಪಂಚಮೀ ವ್ರತ. ಒಟ್ಟು ೮ ವರ್ಷಗಳ ಕಾಲ ಆಚರಿಸಬೇಕಾದದ್ದು ಇದರ ವಿಧಿ. ವಸಿಷ್ಠ, ಅತ್ರಿ, ಕಶ್ಯಪ, ಜಮದಗ್ನಿ ಮೊದಲಾದ ೭ ಋಷಿಗಳನ್ನೂ ವಸಿಷ್ಠ ಪತ್ನಿ ಅರುಂಧತಿಯನ್ನೂ ಆರಾಧಿಸಬೇಕಾದದ್ದು ಇದರ ಮುಖ್ಯವಾದ ಅಂಶ. ಅದರ ವಿಧಿವಿಧಾನಗಳನ್ನು ಸೂಕ್ತರೀತಿಯಲ್ಲಿ ತಿಳಿದುಕೊಂಡು ಇದನ್ನಾಚರಿಸಿದರೆ ಮೇಲೆ ಹೇಳಿದ ದೋಷ ಪರಿಹಾರವಾಗಿ ಸದ್ಗತಿ ಲಭಿಸುವುದು.

ಇತ್ತೀಚಿನ ದಿನಗಳಲ್ಲಿ ರಜಸ್ವಲಾಧರ್ಮವನ್ನು ಆಚರಿಸುವವರ ಸಂಖ್ಯೆ ತುಂಬಾ ಕ್ಷೀಣಿಸುತ್ತಿರುವುದು ಅತ್ಯಂತಶೋಚನೀಯ ಸಂಗತಿ. ಇದು ಅನೇಕ ಬಗೆಯ ಅನಿಷ್ಟಗಳಿಗೆ ಆಸ್ಪದವಾಗುತ್ತಿದೆ. ಈ ವ್ರತ ಅದರ ಬಗ್ಗೆ ಜಾಗೃತಿ ಹುಟ್ಟಿಸುವ ವಿಶಿಷ್ಟ ಸಾಧನವಾಗಿದೆ. ಯಾವುದೇ ಕಾರಣದಿಂದ ಒಬ್ಬ ಸ್ತ್ರೀ ಇದನ್ನು ಮಾಡಲಾಗದಿದ್ದಲ್ಲಿ ಅವಳ ಪರವಾಗಿ ಅವರ ಗಂಡ ಅಥವಾ ಮಕ್ಕಳು ಇದನ್ನಾಚರಿಸಿ ಪುಣ್ಯವನ್ನು ಅವರಿಗೆ ಧಾರೆ ಎರೆಯಬಹುದು. ಈ ವ್ರತಕ್ಕೆ ಉದ್ಯಾಪನೆಯೂ ವಿಹಿತ. ಅದನ್ನು ೮ ವರ್ಷಗಳಲ್ಲಿ ಯಾವುದೇ ವರ್ಷವಾದರೂ ಪೂರೈಸುವ ಅವಕಾಶವುಂಟು. ಈ ಬಾರಿ ಋಷಿಪಂಚಮೀ ವ್ರತವನ್ನು ಆರಂಭಿಸಲೂ ಹಾಗೂ ಉದ್ಯಾಪನೆ ಮಾಡಲೂ ಸಹ ಅವಕಾಶವಿರುವುದು ವಿಶೇಷ.

# ಗಣೇಶನ ಹಿರಿಮೆ

## (ಗಣೇಶಚತುರ್ಥೀ - ೧೯.೦೯.೧೨ರ ನಿಮಿತ್ತ ವಿಶೇಷಲೇಖನ)

**– ಡಾ ॥ ವ್ಯಾಸನಕೆರೆ ಪ್ರಭಂಜನಾಚಾರ್ಯ**

ಗಣೇಶ ತತ್ತ್ವಾಭಿಮಾನಿದೇವತೆಗಳಲ್ಲಿ ಪರಿಗಣಿತವಾಗಿರುವ ವಿಶಿಷ್ಟ ದೇವತೆ. ಪಂಚಭೂತಗಳಲ್ಲಿ ಒಂದಾದ ಭೂತಾಕಾಶದ ಅಭಿಮಾನಿ ದೇವತೆ ಎಂಬುದು ಈತನ ಹಿರಿಮೆ.

ಶಿವಪಾರ್ವತಿಯರ ಮಗನಾಗಿ ಗಣೇಶನ ಜನನ; ಆತನ ಹುಟ್ಟಿನ ಕಥೆಯೂ ವಿಚಿತ್ರ. ಒಮ್ಮೆ ಗೌರೀದೇವಿ ಅಭ್ಯಂಜನಕ್ಕೆಂದು ಸ್ನಾನಗೃಹಕ್ಕೆ ತೆರಳುತ್ತಾ ಕಾವಲಿಗಾಗಿ ತನ್ನ ಶರೀರದ ಪೃಥಿವಿಯ ಅಂಶದಿಂದ ಒಂದು ದೇಹವನ್ನು ನಿರ್ಮಿಸಿ ಅದಕ್ಕೆ ಜೀವ ತುಂಬಿದಳು. ಸ್ನಾನಗೃಹವನ್ನು ದ್ವಾರಪಾಲಕನಾಗಿ ಕಾಯಲು ಆದೇಶಿಸಿದಳು. ಮುಂದೆ ಶಿವ ಅಲ್ಲಿಗೆ ಆಗಮಿಸಿದಾಗ ತನ್ನ ಕರ್ತವ್ಯವಾಗಿ ತಡೆದ. ಕೋಪಗೊಂಡ ಶಿವ ತನ್ನ ತ್ರಿಶೂಲದಿಂದ ಅವನ ತಲೆಯನ್ನು ತರಿದ. ಬಳಿಕ ಪಾರ್ವತಿಯಿಂದ ವಿಷಯ ತಿಳಿದ ಶಿವ ಅವರ ಅಪೇಕ್ಷೆಯಂತೆ ಅದನ್ನು ಬದುಕಿಸಲು ಸಂಕಲ್ಪಿಸಿದ. ಅಮೋಘವಾದ ತ್ರಿಶೂಲ- ದಿಂದ ಶಿರಸ್ಸು ನಾಶವಾಗಿದ್ದರಿಂದ ಅದಕ್ಕೆ ಪ್ರತಿಯಾಗಿ ಬೇರೊಂದು ಶಿರಸ್ಸನ್ನು ಜೋಡಿಸಲು ನಿರ್ಧರಿಸಿ, ಉತ್ತರದಿಕ್ಕಿಗೆ ತಲೆ ಮಾಡಿ ಮಲಗಿದ ಪ್ರಾಣಿಯ ತಲೆಯನ್ನು ಕತ್ತರಿಸಿ ತರಲು ತಿಳಿಸಿದ. ಉತ್ತರದಿಕ್ಕಿಗೆ ತಲೆ ಮಾಡಿ ಮಲಗುವುದು ನಿಷಿದ್ಧ. ಧರ್ಮ ಪೂರ್ಣಪ್ರಮಾಣದಲ್ಲಿ ಅನುಷ್ಠಾನದಲ್ಲಿದ್ದ ಆ ಕಾಲದಲ್ಲಿ ಒಂದೇ ಒಂದು ಆನೆ ಮಾತ್ರ ಹಾಗೆ ಉತ್ತರದಿಕ್ಕಿಗೆ ತಲೆ ಮಾಡಿ ಮಲಗಿದ್ದು ಕಣ್ಣಿಗೆ ಬಿತ್ತು. ಅದನ್ನು ಕತ್ತರಿಸಿ ತಂದು ಜೋಡಿಸಿದಾಗ ಮಗು ಜೀವಂತವಾಗಿ ಎದ್ದಿತು. ಆ ಮಗುವೇ ಗಜಮುಖನೆಂದು ಪ್ರಸಿದ್ಧನಾದ ವಿನಾಯಕ.

ಪಾರ್ವತಿಯು ತನ್ನ ದೇಹದ ಮಣ್ಣಿನಿಂದ ಗಣೇಶನನ್ನು ಸೃಷ್ಟಿಸಿದ್ದು ತಾತ್ತ್ವಿಕಮಹತ್ವದ ವಿಷಯ. ಸತೀರೂಪದಲ್ಲಿದ್ದಾಗ ತನ್ನ ದೇಹದಲ್ಲಿನ ಅಗ್ನಿಯಿಂದಲೇ ದೇಹ ತೊರೆದು ತಾನು ಯೋಗಸಿದ್ಧಳು ಎಂದು ತೋರಿಸಿದ್ದ ಪಾರ್ವತಿ ಈ ಪ್ರಸಂಗದಲ್ಲಿ ತನ್ನ ದೇಹದಲ್ಲಿನ ಪೃಥಿವೀ ಅಂಶವನ್ನು ಹೊರತೆಗೆದು ಅದರಿಂದ ಗಣೇಶನನ್ನು ನಿರ್ಮಿಸಿದ್ದು ಅವರ ಯೋಗಸಿದ್ಧಿಯ ಮತ್ತೊಂದು ಮುಖ.

ಪಾರ್ವತಿಯು ಶಿವನ ಮಡದಿಯಾಗಿ ಈ ಕಾರ್ಯ ಮಾಡಿರುವುದರಿಂದ ಅದು ಕೇವಲ ಸ್ತ್ರೀಯಿಂದ ನಡೆದ ಸೃಷ್ಟಿ ಎನ್ನಿಸುವುದಿಲ್ಲ. ಬ್ರಹ್ಮಸೂತ್ರಗಳ ಉತ್ಪತ್ತ್ಯಧಿಕರಣದ ಸಮರ್ಥನೆಯಾಗಿ ಈ ಪ್ರಸಂಗವನ್ನು ಕಾಣಬಹುದು. ಶ್ರೀಜಗನ್ನಾಥದಾಸರ 'ಪಿನಾಕಿ-ಭಾರ್ಯಾತನುಜ ಮೃದ್ಭವ' ಎಂಬ ಮಾತುಗಳಲ್ಲಿ ಈ ವಿವರವನ್ನು ಕಾಣಬಹುದು.

ಉತ್ತರ ವೈಕುಂಠದ ದಿಕ್ಕು. ಅದಕ್ಕೆ ತಲೆ ಮಾಡಿ ಮಲಗುವುದು ಶ್ರೀಹರಿಗೆ ವಿಮುಖನಾಗಿ ಬದುಕುವುದು ಎಂದರ್ಥ. ಅಂತಹವರ ತಲೆ ತೆಗೆಯುವುದು ಎಂದರೆ ಅವರು ವಿವೇಕರಹಿತರಾಗುವುದು ಎಂದರ್ಥ. ಅಂತಹವರ ಬದುಕಿಗೆ ಅರ್ಥವಿರದು

ಎಂದೂ ಅದರ ಭಾವ. ಅಂತಹವರನ್ನು ಮನೋನಿಯಾಮಕನಾದ ಶಿವ ಹಾಗೆ ತಲೆ ಕತ್ತರಿಸಿ ಯೋಗ್ಯಸಾಧಕನಿಗೆ ಜೋಡಿಸಿದ ಎಂಬುದು ಇಲ್ಲಿಯ ತಾತ್ತ್ವಿಕ ಆಶಯ.

ಶ್ರೀಮನ್ಮಹಾಭಾರತದ ಪ್ರಥಮಪ್ರತಿಕಾರ ಎಂಬುದು ಗಣೇಶನ ಮತ್ತೊಂದು ಹಿರಿಮೆ. ಸಾಕ್ಷಾತ್ ಭಗವಂತನೇ ಆದ ಶ್ರೀವೇದವ್ಯಾಸದೇವರು ಮಹಾಭಾರತವನ್ನು ರಚಿಸಲು ಸಂಕಲ್ಪಿಸಿ ಅದರ ಪ್ರತಿಕಾರನನ್ನಾಗಿ ಆರಿಸಿಕೊಂಡಿದ್ದು ಗಣೇಶನನ್ನು. ಗಣೇಶ ಆಕಾಶತತ್ತ್ವದ ಅಭಿಮಾನಿ. ಶಬ್ದ ಆಕಾಶತತ್ತ್ವದ ವಿಶೇಷಗುಣ. ಜ್ಞಾನಕಾರ್ಯ ಶಬ್ದಜನ್ಯ. ಅದರಿಂದಾಗಿಯೇ ಗಣೇಶನ ಮೂಲಕವೇ ಶ್ರೀವೇದವ್ಯಾಸರು ಮಹಾಭಾರತವನ್ನು ಲೇಖನ ಮಾಡಿಸಿದರು ಎಂಬುದೂ ಸಹ ತಾತ್ತ್ವಿಕ ಹಿನ್ನೆಲೆಯ ಸಂಗತಿ.

ಗಣೇಶನು ವೇದವ್ಯಾಸರನ್ನು ಪ್ರಾರ್ಥಿಸಿಕೊಂಡನಂತೆ : 'ನಾನು ತಮ್ಮ ಗ್ರಂಥದ ಲೇಖಕನಾಗಲು ಸಿದ್ಧ. ಆದರೆ ತಾವು ನನ್ನ ಲೇಖನಿಗೆ ಬಿಡುವು ದೊರೆಯದಂತೆ ಹೇಳುವ ಕೃಪೆ ತೋರಿಸಬೇಕು'. ಗಣೇಶನ ಈ ಮಾತಿನಲ್ಲಿ ಜ್ಞಾನಕಾರ್ಯವು ಎಡೆಬಿಡದೆ ನಡೆಯಬೇಕು ಎಂಬ ಸಾಧಕನ ದೀಕ್ಷೆಯನ್ನು ಗುರುತಿಸಬಹುದು : 'ಶ್ರವಣಾದಿ ವಿನಾ ನೈವ ಕ್ಷಣಂ ತಿಷ್ಠೇದಪಿ ಕ್ವಚಿತ್' (ಅನುವ್ಯಾಖ್ಯಾನ).

ಆಗ ಶ್ರೀವೇದವ್ಯಾಸರು ಪ್ರತಿಯಾಗಿ ನುಡಿದರು : 'ಅಗತ್ಯವಾಗಿ ಆಗಬಹುದು. ನೀನು ಅಪೇಕ್ಷಿಸಿದಂತೆ ನಿನಗೆ ಬಿಡುವು ದೊರೆಯದಂತೆ ನಾನು ಹೇಳುವೆ. ಆದರೆ ಅರ್ಥಮಾಡಿಕೊಳ್ಳದೇ ಏನನ್ನೂ ನೀನು ಬರೆಯಕೂಡದು'. ಶ್ರೀವೇದವ್ಯಾಸರ ಈ ಮಾತು ಎಡೆಬಿಡದೆ ಜ್ಞಾನಕಾರ್ಯ ನಡೆಯಬೇಕು ಎಂಬ ಆದೇಶದ ಹಿನ್ನೆಲೆಯನ್ನು ತೆರೆದಿಡುವ ಶಾಸ್ತ್ರವಾಣಿ. ಜ್ಞಾನಕಾರ್ಯವನ್ನು ಅರ್ಥಜ್ಞಾನಪೂರ್ವಕವಾಗಿ ಮಾಡಬೇಕೇ ಹೊರತು ಕೇವಲ ಯಾಂತ್ರಿಕವಾಗಿ ಅಲ್ಲ ಎಂಬ ಎಚ್ಚರಿಕೆಯನ್ನು ಇಲ್ಲಿ ಕಾಣಬಹುದು.

ವೇದವ್ಯಾಸರು ಹೇಳಿದ ಶ್ಲೋಕಗಳಲ್ಲಿ ೮೮೦೦ ಶ್ಲೋಕಗಳನ್ನು ಅರ್ಥಮಾಡಿಕೊಳ್ಳಲು ಗಣೇಶನಿಗೆ ಶ್ರಮವೆನ್ನಿಸಿತು ಎಂಬ ಮಾತೂ ಮಹಾಭಾರತದಲ್ಲಿದೆ. ಇದು ಗಣೇಶನ ಇತಿಮಿತಿಗಳೊಂದಿಗೆ ಹಿರಿಮೆಯನ್ನೂ ಸಾರುವ ಮಾತು.

ಗಣೇಶನ ಲೇಖನಕಾರ್ಯದ ಪ್ರಸ್ತಾಪ ಶ್ರೀಜಗನ್ನಾಥದಾಸರ ಹರಿಕಥಾಮೃತಸಾರದಲ್ಲಿ ಬಂದಿದೆ : 'ಶ್ರೀಶವೇದವ್ಯಾಸಕರುಣಾಪಾತ್ರ : ವ್ಯಾಸಕೃತಗ್ರಂಥಗಳ ಆಯಾಸವಿಲ್ಲದೆ ಬರೆದು ವಿಸ್ತರಿಸಿದೆಯೊ ಲೋಕದೊಳು' .

ಗಣೇಶನ ಆಕೃತಿಯು ಸಹ ಅತ್ಯಂತ ರೋಚಕ. ಆನೆಯ ಮುಖ. ಅದರಿಂದಾಗಿಯೇ ಮೊರದಗಲದ ಕಿವಿ; ಚಿಕ್ಕ ಕಣ್ಣು; ಸೊಂಡಿಲು; ಏಕದಂತ; ಕೈಗಳಲ್ಲಿ ಪಾಶ,ದಂತ, ಅಂಕುಶ, ಅಭಯ ಎಂಬುದಾಗಿ ನಾಲ್ಕು ಹಸ್ತಗಳು; ಲಂಬೋದರ; ಅದರ ಮೇಲೆ ಬಿಗಿದ ಸರ್ಪ; ಗಣೇಶನ ವಾಹನವಂತೂ ಇಲಿ; ದೊಡ್ಡ ದೇಹಕ್ಕೆ ಅತ್ಯಂತ ಚಿಕ್ಕ ವಾಹನ.

ವಿಶಾಲವಾದ ಕಿವಿಗಳು ಅಪಾರವಾಗಿ ಶಾಸ್ತ್ರಶ್ರವಣ ಮಾಡಬೇಕು ಎಂಬ ತತ್ತ್ವಕ್ಕೆ ಸೂಚಕ. ಬಹುಶ್ರುತ ಎಂಬ ಜ್ಞಾನಿಗಳ ಹೆಸರು ಇದಕ್ಕೆ ಗಮಕ. ಶಬ್ದಗ್ರಾಹಕವಾದ

ಇಂದ್ರಿಯ ಕಿವಿ. ಗಣೇಶ ಶಬ್ದಗುಣದ ಆಕಾಶಕ್ಕೆ ಅಭಿಮಾನಿ ಎಂಬುದಕ್ಕೂ ಈ ವಿಶಾಲ–ಕರ್ಣಗಳು ದ್ಯೋತಕ ಎಂದೂ ತಿಳಿಯಬಹುದು.

ಚಿಕ್ಕ ಕಣ್ಣುಗಳು ಜಗತ್ತಿನ ನೋಟದ ಬಗ್ಗೆ ಮಿತಿಯನ್ನು ಸೂಚಿಸುವ ಸಂಕೇತ : 'ತದಲಂ ಬಹುಲೋಕವಿಚಿಂತನಯಾ'; ಅದರಂತೆ ಧ್ಯಾನ, ಏಕಾಗ್ರತೆಗಳ ಸಂಕೇತ ಕೂಡ.

ಕೈಯಲ್ಲಿನ ಪಾಶ ಬೇಕುಗಳ ನಿಯಂತ್ರಣಕ್ಕೂ, ದಂತ ಶುಭ್ರವಾದ ಬರವಣಿಗೆಗೂ, ಅಂಕುಶ ಬುದ್ಧಿಯ ನಿಯಂತ್ರಣಕ್ಕೂ, ಅಭಯ ಭಗವಂತನ ಬಗ್ಗೆ ಭಯಭೀತಿಗಳ ಎಚ್ಚರಿಕೆಗೂ ಸಂಕೇತ.

ಆತನ ವಿಶಾಲ ಉದರವೂ ಸಹ ಬಹುಭೋಜನಕ್ಕೆ ಸಂಕೇತದಂತೆ ಕಂಡರೂ ಅದರ ಮೇಲೆ ಬಿಗಿದ ಸರ್ಪ ಅದರ ನಿಯಂತ್ರಣಕ್ಕೆ ಸೂಚಕ. ಸರ್ಪ ವಾತಾಶನ; ಎಲರುಣಿ ಎಂದರೆ ಭೋಜನಕ್ಕೆ ವಾತಾಶನದ ನಿಯಂತ್ರಣವಿರಲಿ ಎಂಬ ಎಚ್ಚರಿಕೆ. ವಾತಾಶನ ಎಂದರೆ ಬರೀ ಗಾಳಿ ಕುಡಿದು ಬದುಕುವ ದಿನ ಎಂದರೆ ಏಕಾದಶೀ ವ್ರತ ಎಂದು ತಿಳಿಯಬಹುದು.

ಇನ್ನು ಗಣೇಶನ ಕೈಯಲ್ಲಿನ ಮೋದಕ. ಮಾದಕವಸ್ತುವನ್ನು ಕೈಯಲ್ಲಿ ಹಿಡಿಯುವ ಜನತೆಗೆ ಗಣೇಶ ಅದನ್ನು ತೊರೆದು ಮೋದಕವನ್ನು ಹಿಡಿಯಲು ಉಪದೇಶಿಸುತ್ತಿರುವನು. ಮೋದಕ ಎಂದರೆ ಮೋದ – ಆನಂದ; ಕ – ಎಂದರೆ ತೀರ್ಥ ಎಂದರೆ ಆನಂದತೀರ್ಥ. ಕೈಯಲ್ಲಿ ಆನಂದತೀರ್ಥ(ಮಧ್ವಶಾಸ್ತ್ರ)ವಿದ್ದರೆ ಲೋಕದಲ್ಲಿ ಅಗ್ರಪೂಜೆ ದೊರೆಯುವುದು ಎಂಬ ವಿಶೇಷಸಂದೇಶವನ್ನು ಗಣೇಶ ಹೀಗೆ ನೀಡುತ್ತಿರುವನು. ಏಕವಿಂಶತಿ ಮೋದಕಪ್ರಿಯ ಎಂಬುದು ಸಹ ಗಣೇಶ ಏಕವಿಂಶತಿಕುಭಾಷ್ಯಗಳನ್ನು ಖಂಡಿಸಿದ ಆನಂದತೀರ್ಥಪ್ರಿಯ ಎಂಬ ವಿಶೇಷಾರ್ಥವನ್ನೇ ಧ್ವನಿಸುತ್ತದೆ ಎಂಬುದನ್ನು ಗಮನಿಸಬೇಕು.

ಇನ್ನು ಮೂಷಿಕ ವಾಹನ. ಮೂಷಿಕ ಎಂದರೆ ಕದ್ದು ಆಹಾರ ಪದಾರ್ಥಗಳನ್ನು ತಿನ್ನುವ ಪ್ರಾಣಿ. ಎಂದರೆ ಕಳ್ಳತನದ ಮೇಲೆ ಸವಾರಿ ಮಾಡುವುದು ಎಂದರೆ ದುರ್ಗುಣಗಳನ್ನೆಲ್ಲ ಮೆಟ್ಟಿ ನಿಲ್ಲುವುದು ಎಂದರ್ಥ. ಹೀಗೆ ಗಣೇಶ ತನ್ನ ಆಕೃತಿಯಿಂದಲೇ ಬಗೆ ಬಗೆಯ ತತ್ತ್ವನಿಧಿ ಎನ್ನಿಸಿರುವುದು ವಿಶೇಷ.

ಗಣೇಶನಿಗೆ ಅಗ್ರಪೂಜೆ ಇನ್ನೊಂದು ವಿಶೇಷ. ಕೃಷ್ಣನಿಗೆ ರಾಜಸೂಯಯಾಗದಲ್ಲಿ ಅಗ್ರಪೂಜೆ ನಡೆದದ್ದು ಸುಪ್ರಸಿದ್ಧ. ಈ ಎರಡು ಅಗ್ರಪೂಜೆಗಳಿಗೂ ವ್ಯತ್ಯಾಸವಿದೆ. ಗಣೇಶನದು ಮೊದಲಿಗೆ ಸಲ್ಲುವ ಪೂಜೆ. ಸರ್ವೋತ್ಕೃಷ್ಟ ಪೂಜೆ ಎಂದರ್ಥವಲ್ಲ. ಕೃಷ್ಣನಿಗೆ ಸಂದಿದ್ದು ಅವನು ಸರ್ವೋತ್ಕೃಷ್ಟ ಎಂದು ಸೂಚಿಸುವ ಅಗ್ರಪೂಜೆ. ಆದ್ದರಿಂದ ಅಗ್ರಪೂಜೆ ಎಂಬ ಪದಸಾಮ್ಯದಿಂದ ಗಣೇಶ ಸರ್ವೋತ್ತಮದೇವತೆ ಎಂದು ಭ್ರಮಿಸಬೇಕಾಗಿಲ್ಲ.

ಗಣೇಶನ ಪೂಜೆ ಸಾರ್ಥಕವಾಗಲು ಕೇವಲ ಅವನನ್ನು ಮಾತ್ರ ಪೂಜಿಸಿದರೆ ಸಾಲದು. ರಮಾಬ್ರಹ್ಮಾದಿ ಇತರ ಸಕಲದೇವತೆಗಳನ್ನು ಭಗವಂತನಾದ ಶ್ರೀಹರಿಯ ಪರಿವಾರದೇವತೆ–ಗಳೆಂದೇ ಆರಾಧಿಸಬೇಕಾದದ್ದು ಶಾಸ್ತ್ರವಿಧಿ : **ರಮಾಬ್ರಹ್ಮಾದಯಸ್ತಸ್ಯ ಪರಿವಾರತ ಏವ ತು** (ಸದಾಚಾರಸ್ಮೃತಿ). ಆದ್ದರಿಂದ ಗಣೇಶನನ್ನು ಶ್ರೀಹರಿಯ ಪರಿವಾರದೇವತೆಯೆಂದೇ ಆರಾಧಿಸಬೇಕು.

ಗಣೇಶನಿಗೆ ಗಜಮುಖ ಬರಲು ಆಧ್ಯಾತ್ಮಿಕ ಕಾರಣವನ್ನು ಶ್ರೀಮದಾಚಾರ್ಯರು ಮಾಂಡೂಕೋಪನಿಷದ್ಭಾಷ್ಯದಲ್ಲಿ ತಿಳಿಸಿರುವರು. ಅದರಂತೆ ಗಣೇಶ ಶ್ರೀಹರಿಯ 'ವಿಶ್ವ, ತೈಜಸ' ಎಂಬ ರೂಪಗಳ ಆರಾಧಕ. ಅವೆರಡೂ ಜಾಗ್ರತ್ ಮತ್ತು ಸ್ವಪ್ನಾವಸ್ಥೆಗಳ ನಿಯಾಮಕರೂಪಗಳು. ಅವುಗಳಿಗೆ ಒಟ್ಟು ೧೯ತಲೆಗಳು. ಮಧ್ಯದ ತಲೆ ಗಜಮುಖ–ವಾದರೆ ಇತರ ೧೮ತಲೆಗಳು ಮಾನವ ಮುಖದವು. ಗಣೇಶ ಈ ರೂಪವನ್ನು ಆರಾಧಿಸುತ್ತಾ ಸಹಜವಾಗಿಯೇ ಮಧ್ಯದ ತಲೆಯ ಮೇಲೆ ಗಮನವನ್ನು ಕೇಂದ್ರೀಕರಿಸಿದ್ದರಿಂದ ಅವನು ಗಜಮುಖನೆನ್ನಿಸಿದ : ಯಥೋಪಾಸತೇ ತಥೈವ ಭವತಿ.

ಆದ್ದರಿಂದ ಗಣೇಶನನ್ನು ಆರಾಧಿಸುವಾಗ ಶ್ರೀಗಣೇಶಾಂತರ್ಗತ ಶ್ರೀಭಾರತೀರಮಣ–ಮುಖ್ಯಪ್ರಾಣಾಂತರ್ಗತ ಶ್ರೀವಿಶ್ವಮೂರ್ತಯೇ ನಮಃ ಎಂಬುದಾಗಿ ಮುಖ್ಯವಾಗಿ ಅಂತರ್ಯಾಮಿಯಾದ ಶ್ರೀಹರಿಯನ್ನೇ ಚಿಂತಿಸಬೇಕು. ಆಗ ಗಣೇಶನಿಂದ ನಮ್ಮ ಆಧ್ಯಾತ್ಮಿಕ ಸಾಧನೆ ನಿರ್ವಿಘ್ನವಾಗಿ ಸಾಗುವ ಅನುಗ್ರಹವನ್ನು ಪಡೆಯಬಹುದು.

ಗಣೇಶ ವಿಘ್ನಪರಿಹಾರದೇವತೆ ಆಗಿರುವಂತೆ ವಿಘ್ನಪ್ರದಾಯಕ ದೇವತೆಯೂ ಆಗಿರುವನು ಎಂಬ ವಿಶೇಷಾಂಶವನ್ನು ತೀರ್ಥಪ್ರಬಂಧದಲ್ಲಿ ಶ್ರೀವಾದಿರಾಜಸ್ವಾಮಿಗಳು ತಿಳಿಸಿರುವರು. ನಿದರ್ಶನವನ್ನಾಗಿ ಅವರು ರಾವಣನ ಉಲ್ಲೇಖವನ್ನು ಮಾಡುತ್ತಾ ತಪ್ಪಾಗಿ ಆರಾಧನೆ ಮಾಡಿದ್ದರಿಂದ ರಾವಣನಿಗೆ ಗಣೇಶ ವಿಘ್ನವನ್ನೇ ನೀಡಿದ. ಸುರರಿಗೆ ವಿಘ್ನ ಪರಿಹಾರ ಮಾಡಿದ ಎಂಬುದು ಅಲ್ಲಿಯ ಭಾವ :

**ದುಷ್ಟಾನಾಂ ವಿಘ್ನಕರ್ತಾ ಸುಚರಿತಸುಜನಸ್ತೋಮವಿಘ್ನಾಪಹರ್ತಾ**
**ತಸ್ಮಾದ್ವಿಘ್ನಾಧಿಪೋಽಹಂ ಮತ ಇತಿ ಸುಧಿಯಾಂ ಸ್ಪಷ್ಟಮಾಜ್ಞಾಪನಾಯ ।**
**ಪೌಲಸ್ತ್ಯೇಚ್ಛಾಂತರಾಯಃ ಸುರಮುನಿನಿಕರಾಭೀಷ್ಟಸಂಪ್ರಾಪ್ತ್ಯುಪಾಯಃ**
**ಶ್ರೇಯೋ ವಿಘ್ನಾಧಿರಾಜಃ ಪ್ರದಿಶತು ಸತತಂ ಭೂರಿ ಗೌರೀತನೂಜಃ ॥**

ವೇದವ್ಯಾಸಾವತಾರಕ್ಕೆ ಕಾರಣವಾದ ಗೌತಮರ ಶಾಪದಲ್ಲೂ ಗಣೇಶನ ಪಾತ್ರ–ವಿರುವುದು ಸುಪ್ರಸಿದ್ಧ. ಗಣೇಶ ಪಾರ್ವತಿಯ ಆದೇಶದಂತೆ ಗೌತಮರನ್ನು ಆಶ್ರಯಿಸಿಕೊಂಡಿದ್ದ ಮುನಿಗಳಿಗೆ ಮಾಯಾಗೋವೊಂದನ್ನು ನಿರ್ಮಿಸಲು ತಿಳಿಸಿ ಅದು ಗೌತಮರ ಜಲಪ್ರೋಕ್ಷಣೆ ಮಾತ್ರದಿಂದಲೇ ಮೃತವಾಗುವಂತೆಯೂ, ಶಿವನ ತಲೆಯ ಮೇಲಿನ ಗಂಗೆಯ ಮತ್ತೊಂದು ಕವಲು ಅದರ ಮೇಲೆ ಹರಿದಾಗ ಮಾತ್ರ ಅದು ಪುನಃ ಬದುಕಿ ಮುನಿಗಳು ಗೋಹತ್ಯಾಪಾಪದಿಂದ ಬಿಡುಗಡೆಕಾಣಲು ಸಾಧ್ಯ ಎಂಬುದಾಗಿಯೂ ತಿಳಿಸಿದ ಎಂಬ ಉಲ್ಲೇಖ ವರಾಹಪುರಾಣ ಮೊದಲಾದವುಗಳಲ್ಲಿ ಬಂದಿದೆ. ಹೀಗೆ ವೇದವ್ಯಾಸಾವತಾರಕ್ಕೆ ಒಂದು ರೀತಿಯಲ್ಲಿ ಕಾರಣನಾದ ಗಣೇಶ ಶ್ರೀವೇದವ್ಯಾಸರ ಕೃತಿಗಳ ಲೇಖಕನೂ ಆದದ್ದು ವಿಶೇಷ.

ಮುಖ್ಯವಾಗಿ ಗಣೇಶನನ್ನು ವಿದ್ಯಾಗಣೇಶ ಎಂಬುದಾಗಿ ಆರಾಧಿಸುವುದು ವಿದ್ಯಾಪ್ರಾಪ್ತಿಗೆ ಸಾಧನ. ಹರಿದಾಸಸಾಹಿತ್ಯದಲ್ಲಿ ಅನೇಕ ಬಗೆಯಲ್ಲಿ ಗಣೇಶನ ಸ್ತೋತ್ರಗಳು

ಬಂದಿವೆ. ಶ್ರೀಜಗನ್ನಾಥದಾಸರ ತತ್ತ್ವಸುವ್ವಾಲಿಯಲ್ಲೂ ಪ್ರತ್ಯೇಕವಾಗಿ ವಿನಾಯಕನ ಸ್ತುತಿ ಬಂದಿರುವುದು ವಿಶೇಷ. ಅವರ ಹರಿಕಥಾಮೃತಸಾರದ ೨೮ನೆ ಸಂಧಿ ವಿಶೇಷವಾಗಿ ಗಣೇಶನ ಸ್ತೋತ್ರಕ್ಕೇ ಮೀಸಲಾಗಿದೆ.

ಶ್ರೀಮದಾಚಾರ್ಯರ ತಂತ್ರಸಾರದಲ್ಲಿ ಗಣೇಶನ ಬಗ್ಗೆ ಮಾಹಿತಿ ನೀಡುತ್ತಾ ಆತ ರಕ್ತಾಂಬರ, ರಕ್ತತನು, ರಕ್ತಮಾಲ್ಯಾನುಲೇಪನ ಎಂದಿರುವರು. ಎಂದರೆ ಗಣೇಶನ ದೇಹ ಕೆಂಬಣ್ಣದ್ದು. ಅವನು ತೊಟ್ಟಿರುವ ವಸ್ತ್ರವೂ ಮಾಲೆಗಂಧಗಳೂ ಸಹ ಕೆಂಪುವರ್ಣದವು. ಗಣೇಶನಿಗೆ ಕೆಂಪು ಹೀಗೆ ಬಹಳ ಪ್ರಿಯವಾದ ಬಣ್ಣ. ಗಣೇಶ ಚಾರುದೇಷ್ಣ ಎಂಬ ಹೆಸರಿನಿಂದ ಶ್ರೀಕೃಷ್ಣರುಗ್ಮಿಣಿಯರ ಪುತ್ರನಾಗಿಯೂ ಅವತರಿಸಿದ್ದ ಎಂಬುದು ಮತ್ತೊಂದು ಗಮನಿಸಬೇಕಾದ ಸಂಗತಿ.

‘ಓಂ ಕ್ಷಿಪ್ರಪ್ರಸಾದಾಯ ನಮಃ’ ಎಂಬುದು ತಂತ್ರಸಾರೋಕ್ತವಾದ ಗಣೇಶ ಮಂತ್ರ-ವಾಗಿದೆ.

*****


# ನಮ್ಮ ನವಪ್ರಕಾಶನಗಳು

**೧. ಅಧಿಕಮಾಸ – ಪುಟಗಳು : ६४ ; ಬೆಲೆ : ರೂ. ೨೫/-**
**(ಅಧಿಕ ಭಾದ್ರಪದ ಮಾಸದ ನಿಮಿತ್ತ ಅಧಿಕಮಾಸದ ಮಾಹಾತ್ಮ್ಯ, ಆಚರಣೆಯ ವಿಧಿವಿಧಾನಗಳು, ಅಪೂಪ ದಾನವಿಧಿ, ಶ್ರೀಪುರುಷೋತ್ತಮಸ್ತೋತ್ರಗಳು ಹಾಗೂ ಪುರಾಣೋಕ್ತ ಅಧಿಕಮಾಸ ಮಾಹಾತ್ಮ್ಯದ ಕಥೆಗಳ ಸಮೇತ).**

*****

**೨. ಚಾತುರ್ಮಾಸ್ಯವ್ರತ – ಪುಟಗಳು : ೮೦, ಬೆಲೆ : ೩೦/-**
**(ಚಾತುರ್ಮಾಸ್ಯದ ಸಮಗ್ರ ಪರಿಚಯ, ಪುರಾಣೋಕ್ತ ಕಥೆಗಳು ಹಾಗೂ ನಾರಾಯಣಾಷ್ಟೋತ್ತರ ಶತನಾಮಸ್ತೋತ್ರ ಮೊದಲಾದವುಗಳೊಂದಿಗೆ)**

*****

**೩. ವಿವಾಹಚಂದ್ರಿಕಾ (ವಿವಾಹ ಸಂಸ್ಕಾರದ ಸಮಗ್ರ ಕೈಪಿಡಿ) ರೂ. ೬೦/-**
**(ವಿವಾಹಸಂಸ್ಕಾರದ ಸಮಗ್ರ ಪರಿಚಯ ನೀಡುವ ಕೃತಿ. ವಿವಾಹ ಶಬ್ದದ ಅರ್ಥ, ವಿವಾಹದ ವಿಧಿ-ವಿಧಾನಗಳು, ವಿವಾಹದ ಪ್ರಮುಖ ಅಂಗಗಳು, ಸಮಾವರ್ತನ ಮೊದಲಾದ ಸಂಸ್ಕಾರಗಳು, ಜಾತಕಗಳ ಹೊಂದಾಣಿಕೆ, ಮುಹೂರ್ತನಿಶ್ಚಯ, ವಾಗ್ದಾನ, ನಿರೀಕ್ಷಣ,ಮಾಂಗಲ್ಯಧಾರಣ, ಸಪ್ತಪದೀ ಮೊದಲಾದವುಗಳ ಬಗ್ಗೆ ವಿವರಗಳು ಹಾಗೂ ಮಂತ್ರಗಳು, ಸುಮಂಗಲಿಯರಿಗೆ ವಿಹಿತವಾದ ಮಂಗಲದ್ರವ್ಯಗಳು ಹಾಗೂ ಮಂಗಲಾಷ್ಟಕಗಳು, ಹರಿದಾಸರ ಕೃತಿಗಳು ಮೊದಲಾಗಿ ವಿವಾಹದ ಬಗ್ಗೆ ಸಮಗ್ರ ಮಾಹಿತಿ ನೀಡುವ ಕೃತಿ).**

# ಶ್ರೀಮದಾಚಾರ್ಯರ ಕಾಲನಿರ್ಣಯದಲ್ಲಿ ಸೂರ್ಯಗ್ರಹಣದ ಪಾತ್ರ

(... ಹಿಂದಿನ ಸಂಚಿಕೆಯಿಂದ ಮುಂದುವರೆದುದು) - ಜಯಂತ ವ್ಯಾಸನಕೆರೆ

## ಪೂಜ್ಯರಾದ ಶ್ರೀಶ್ರೀವಿಶ್ವನಂದನತೀರ್ಥಶ್ರೀಪಾದರ ಲೇಖನಕ್ಕೆ ಮರುಪ್ರತಿಕ್ರಿಯೆ[1]

● [ವಿ2]ದಲ್ಲಿ ''ಆಚಾರ್ಯರು ತಮ್ಮ ದೇಹದ ಕಾಂತಿಯಿಂದ ಬೆಳಕು ಚೆಲ್ಲುತ್ತಾ ಸಮುದ್ರಸ್ನಾನಕ್ಕೆ ಹೋದರು ಎಂಬುದು ಕೇವಲ ಊಹೆ'' ಎಂಬುದಾಗಿ [ಜ]ದಲ್ಲಿ ಹೇಳಿರುವುದೆಂದು ಅನುವಾದಿಸಿ ಅದನ್ನೇ ವಿಮರ್ಶಿಸಲಾಗಿದೆ. ಆದರೆ, [ಜ]ದಲ್ಲಿ ಎಲ್ಲಿಯೂ ದೇಹದ ಕಾಂತಿಯ ಬಗ್ಗೆ ಹೇಳಿಯೇ ಇಲ್ಲ. ಅಲ್ಲಿ ಹೇಳಿರುವುದು ಚಂದ್ರನ ಕಾಂತಿ ಮಾಯವಾದಾಗ ಮಾರ್ಗಕ್ಕೆ ಶೋಭೆ ನೀಡಿದ್ದು ಶ್ರೀಮದಾಚಾರ್ಯರೆಂದು. ಅದು ದೇಹಕಾಂತಿಯಿಂದೆಂದಲ್ಲ, ಶಿಷ್ಯರ ಶಾಸ್ತ್ರವಿಷಯಕ ಚರ್ಚೆಗಳಿಂದ ಎಂದು – '**ಅಧಿಕಥನೈಃ**'. ಇದು ಅಂದಿನ ಗ್ರಹಣವು ಗ್ರಸ್ತೋದಯವೆಂದು ಸೂಚಿಸುವುದನ್ನು [ಜ]ದಲ್ಲಿ ಸಮರ್ಥಿಸಲಾಗಿದೆ.

● ಇನ್ನು ಚಾತುರ್ಮಾಸ್ಯವಿಚಾರ. ಗೂಢಭಾವಪ್ರಕಾಶಿಕೆಯ 'ಸ್ನಾತ್ವಾ ಗಮನಸಮಯೇ' ಎಂಬುದು ಉತ್ತರಕಾಲವನ್ನಷ್ಟೇ ಸೂಚಿಸುತ್ತದೋ ಅಥವಾ ಅವ್ಯವಹಿತ ಉತ್ತರಕಾಲವನ್ನೋ ಎಂಬುದು ವಿಷಯ. 'ಕಾವೇರಿಯಲ್ಲಿ ಸ್ನಾನ ಮಾಡಿ ಹೋಗುವಾಗ ರಂಗನಾಥನನ್ನು ಕಂಡನು' ಎಂಬಲ್ಲಿ ಅಂದೇ ದರ್ಶನವಾಯಿತೆಂಬುದು ವಿವಕ್ಷಿತವಾದರೆ, 'ಗಂಗೆಯಲ್ಲಿ ಸ್ನಾನ ಮಾಡಿ ಹೋಗುವಾಗ ಶ್ರೀನಿವಾಸನನ್ನು ಕಂಡನು' ಎಂಬಲ್ಲಿ ಬಹುಕಾಲದ ನಂತರ ದರ್ಶನವಾಯಿತೆಂಬುದು ವಿವಕ್ಷಿತವಾಗುತ್ತದೆ. ಹೀಗೆ ಎರಡೂ ರೀತಿಯ ಪ್ರಯೋಗಗಳು ರೂಢಿಯಲ್ಲಿರುವುದರಿಂದ ರಾಯರ ಮಾತು ಸಾವಕಾಶ ಎಂಬುದು [ವಿ2]ದ ಅಭಿಪ್ರಾಯ.

ಆದರೆ, ಮೇಲಿನ ಈ ಎರಡು ಪ್ರಯೋಗಗಳನ್ನು ಸೂಕ್ಷ್ಮವಾಗಿ ನೋಡಿರಿ. ಅವೆರಡನ್ನು ವಿಭಿನ್ನವಾಗಿ ಅರ್ಥೈಸಿದ್ದು ಸ್ವೇಚ್ಛಾನುಸಾರವಾಗಲ್ಲ. ಮೊದಲನೆಯದರಲ್ಲಿ ಸ್ನಾನಮಾಡಿದ ಜಾಗದಲ್ಲೇ ದರ್ಶನವನ್ನೂ ಮಾಡಿದ್ದು. ಮತ್ತೊಂದರಲ್ಲಿ ಸಾವಿರಾರು ಕಿ.ಮಿ. ದೂರವಿದೆ. ಎಂದರೆ, ಆ ವಾಕ್ಯಗಳಲ್ಲಿ ಸ್ನಾನದ ಜಾಗಕ್ಕೂ ದರ್ಶನದ ಜಾಗಕ್ಕೂ ನಡುವಿನ ದೇಶಾವಧಿಯನ್ನು ವಿವಕ್ಷಿತ–ಕಾಲಾವಧಿಯು ಅವಲಂಬಿಸಿರುತ್ತದೆ. ಇಲ್ಲವಾದಲ್ಲಿ ಕಾವೇರಿ–ರಂಗನಾಥನ ದೃಷ್ಟಾಂತದಲ್ಲೇಕೆ 'ಮುಂದಿನ ವರ್ಷ' ಎಂಬ ಅರ್ಥ ಮಾಡದೇ 'ಅಂದೇ' ಎಂಬ ಅರ್ಥ ಮಾಡಬೇಕು?

---

1. ಈ ಲೇಖನದಲ್ಲಿ ಬಳಸಿರುವ ಆಕರಗಳ ಸಂಜ್ಞೆಗಳು ಹೀಗಿವೆ :

[N]=[N]ಆಕರ = http://eclipse.gsfc.nasa.gov. Eclipse Predictions by Fred Espenak (NASA's GSFC).

[ಜ]=[ಜ]ಆಕರ = ಜಯಂತ ವ್ಯಾಸನಕೆರೆ, ಶ್ರೀವ್ಯಾಸಮಧ್ವ, ಮೇ-ಜೂನ್ 2012.

[ವಿ1]=[ವಿ1]ಆಕರ = ಶ್ರೀಶ್ರೀವಿಶ್ವನಂದನತೀರ್ಥಶ್ರೀಪಾದರು, ''ಶ್ರೀಮದಾಚಾರ್ಯರ ಕಾಲದ ಬಗ್ಗೆ ಹೊಸ ಬೆಳಕು'', 2012.

[ವಿ2]=[ವಿ2]ಆಕರ = ಶ್ರೀಶ್ರೀವಿಶ್ವನಂದನತೀರ್ಥಶ್ರೀಪಾದರು, ಶ್ರೀವ್ಯಾಸಮಧ್ವ, ಆಗಸ್ಟ್ 2012.

ಪ್ರಸ್ತುತ ಸ್ನಾನ ಮಾಡಿದ್ದು ಕಣ್ವತೀರ್ಥದಲ್ಲಿ. ಅಲ್ಲಿಂದ ಲಘಿಮಾದಿಗಳನ್ನು ತೋರಿಸಿದ ನೃಸಿಂಹದೇವಾಲಯವು 25 ಕಿ.ಮಿ. ದೂರದಲ್ಲಿದೆ.[1] ಈ ದೇಶಾವಧಿಗೆ ಅನುರೂಪವಾದಂತಹ ಕಾಲಾವಧಿಯೆಂದರೆ ಸಾಮಾನ್ಯ ಮನುಷ್ಯರ ಲೆಕ್ಕದಲ್ಲೂ 5-6 ಘಂಟೆ ಮಾತ್ರ. ಆದರೆ 1296ರ ಗ್ರಹಣದ ನಂತರ ಚಾತುರ್ಮಾಸ್ಯಸಮಾಪ್ತಿಗೆ ಕನಿಷ್ಠ 11 ದಿನಗಳು ಬೇಕಾಗುವುದರಿಂದ ಆ ಗ್ರಹಣವು ಸರ್ವಥಾ ಅಸಂಭಾವಿತ. ಸಾವಿರಾರು ಕಿ.ಮಿ. ಅಷ್ಟು ದೇಶವ್ಯವಧಾನವಿರುವ ಪ್ರಯೋಗವು ಇಲ್ಲಿ ಅಪ್ರಸಕ್ತ. ಇನ್ನು, ಕೋಷ್ಟಕದಲ್ಲಿರುವ, ಚಾತುರ್ಮಾಸ್ಯದಲ್ಲಿ ಕಂಡ ಉಳಿದೆಲ್ಲ ಗ್ರಹಣಗಳಿಗಂತೂ ಕನಿಷ್ಠಪಕ್ಷ 40 ದಿನಗಳಾದರೂ ಕಾಲವ್ಯವಧಾನವಿರುವುದರಿಂದ ಅವು ಅಸಂಭಾವಿತವಾಗುವುದು ಕೈಮುತ್ಯಸಿದ್ಧ.

ಸುಮಧ್ವವಿಜಯ, ಅಣುಮಧ್ವವಿಜಯಗಳಲ್ಲಿನ ನಿರೂಪಣೆಯ ಆನುಪೂರ್ವಿಯೇ ಗ್ರಹಣಪ್ರಸಂಗದ ನಂತರವೇ ಲಘಿಮಾದಿಗಳು ನಡೆದದ್ದೆಂದು ಸ್ಪಷ್ಟ ತಿಳಿಸುತ್ತದೆ. ಅವ್ಯವಹಿತ-ಉತ್ತರಕಾಲವಲ್ಲದೇ ಉತ್ತರಕಾಲಮಾತ್ರವು ವಿವಕ್ಷಿತವಾಗಿದ್ದಲ್ಲಿ, ರಾಯರ ಮಾತಿಗೆ ವಯ್ಯರ್ಥ್ಯ ಬರುತ್ತಿತ್ತು.

''ಪ್ರಯಾಣ ಮಾಡುವಾಗ ಅಲ್ಲಲ್ಲಿ ಲಘಿಮಾದ್ಯೈಶ್ವರ್ಯವನ್ನು ತೋರಿಸಿದರು ಎಂದರ್ಥ'' ಎಂದು [ವಿ2] ಹೇಳುತ್ತದೆ. ಆದರೆ, ರಾಯರ ಮಾತಿನಲ್ಲಿ '**ತತ್ರ**' (ಅಲ್ಲಿ) ಎಂಬುದಾಗಿದೆಯೇ ಹೊರತು '**ತತ್ರತತ್ರ**' (ಅಲ್ಲಲ್ಲಿ) ಎಂಬುದಾಗಿಲ್ಲ. ಆದ್ದರಿಂದ ಗಂಡವಾಟ-ವಟು-ಪೂರ್ವವಾಟ ಮೊದಲಾದ ಪ್ರಸಂಗಗಳು ಏಕತ್ರ ನಡೆದವೆಂದು ಸಿದ್ಧವಾಗುತ್ತದೆ. ಶ್ರೀರಘುವರ್ಯತೀರ್ಥರ ಸೌರಭಪ್ರಕಾಶಿಕೆಯಲ್ಲಿ ''ಅನೇನ **ಗಂಡವಾಟ-ಪರಾಭವಾನಂತರಂ ತಯೋರಪಮಾನಾತಿಶಯಾರ್ಥಂ** ಲಘಿಮಾನಂ ದರ್ಶಯಿತುಂ ಚ ಕಂಚನ **ವಟುಮಧಿರುಹ್ಯ** ಕಂಚನ ದೇವಾಲಯಂ ಪರಿತೋ ಜಗಾಮ । **ಪೂರ್ವವಾಟ-ಜಯಾನಂತರಂ** ಬಹುಭಿರ್ಬಲಿಷ್ಠೈರ್ಲೇಖಿನ್ಯಾಂ ವೇಷ್ಟಯಿತ್ವಾ ಕೃಷ್ಯಮಾಣಮಪ್ಯಸ್ಯ ಲೋಮ 'ನಾಪ್ಯೇಕಂ ತನುರುಹಮಸ್ಯ ತೂದಪಾಟಿ' ಇತ್ಯುಕ್ತರೀತ್ಯಾ ನೋತ್ಪಾಟಿತಮಿತಿ ಕಥೇ ಸೂಚಿತೇ'' ಎಂಬುದಾಗಿರುವುದು ಇದಕ್ಕೇ ಸಂವಾದಿಯಾಗಿದೆ.

ಗಂಡವಾಟಾದಿ ಪ್ರಸಂಗಗಳು ಅಂದೇ ನಡೆದವೋ ಮರುದಿನವೇ ನಡೆದವೋ ಅಥವಾ ಇನ್ನು ಯಾವತ್ತೋ ನಡೆದವೋ ... ಕಣ್ವತೀರ್ಥದಿಂದ ಹೊರಟಿದ್ದಂತೂ ತತ್ಕ್ಷಣವೇ. 11ಕ್ಕೂ ಹೆಚ್ಚು ದಿನಗಳ ನಂತರ ಹೊರಟಿದ್ದರೆ 'ಸೂರ್ಯಗ್ರಹಣದಲ್ಲಿ ಸಮುದ್ರದಲ್ಲಿ ಸ್ನಾನಮಾಡಿ ಹೋಗುವಾಗ' ಎಂಬ ರೇಖೋಪರೇಖೆಯಾದ ವಿವರಣೆ ಸಂಗತಿಸುತ್ತಿರಲಿಲ್ಲ. ಅಂದಿನ ಗ್ರಹಣವು ಚಾತುರ್ಮಾಸ್ಯದಲ್ಲಲ್ಲ ಎನ್ನುವುದಕ್ಕೆ ಇಷ್ಟು ಸಾಕು.

ಇದೆಲ್ಲದರಿಂದ ಚಾತುರ್ಮಾಸ್ಯದಲ್ಲಿ ಒದಗುವ 1282, 1289 (ಸೆಪ್ಟೆಂಬರ್), 1290, 1293 (ಜುಲೈ), 1296, 1300 (ಆಗಸ್ಟ್) ಹಾಗೂ 1317 ರ ಗ್ರಹಣಗಳು ಸಂದೇಹಾತೀತವಾಗಿ ನಿರಾಕೃತವಾಗುವವು. ಇವುಗಳಲ್ಲಿ 1296ರ ಗ್ರಹಣವೂ ಒಂದು.

---

1. ಸಾಲೆತ್ತೂರಿನ ಬಳಿ ಈ ನೃಸಿಂಹದೇವಾಲಯವಿದೆ. ಸ್ಥಳೀಯರಲ್ಲಿ 'ಜಟ್ಟಿ'ಯ (ಗಂಡವಾಟಾದಿಗಳು) ಹಾಗೂ 'ಮಾಣಿ'ಯ (ವಟು) ಪ್ರಸಂಗಗಳ ಪ್ರತೀತಿಯು ಇನ್ನೂ ಜೀವಂತವಾಗಿದೆ. ಮಿಗಿಲಾಗಿ, ಶ್ರೀಮದಾಚಾರ್ಯರು ಕಣ್ವತೀರ್ಥದಿಂದ ಪಾರಂತಿಗೆ ಹೋಗುವಾಗ ಮಾರ್ಗಮಧ್ಯದಲ್ಲಿ ಈ ಪ್ರಸಂಗಗಳು ನಡೆದದ್ದು. **ಆ ದಾರಿಯಲ್ಲೇ** ಬರುವುದು ಈ ಸ್ಥಳದ ವಿಶೇಷ (ಚಿತ್ರ-3 ನೋಡಿ). ಕಾಂತಾವರದಲ್ಲಿಯಾದರೂ ನೃಸಿಂಹದೇವಾಲಯ ಇಲ್ಲದಿರುವುದರಿಂದ, ಬಳಿಯಿರುವ ನೃಸಿಂಹಪ್ರತೀಕವಿರುವ ಪಲಿಮಾರು ಮಠದಲ್ಲಿ ಆ ಪ್ರತೀತಿಯಿಲ್ಲದಿರುವುದರಿಂದ ಹಾಗೂ ಕಣ್ವತೀರ್ಥ-ಪಾರಂತೀ ದಾರಿಯಲ್ಲಿ ಬಾರದಿರುವುದರಿಂದ ಆ ಪ್ರಸಂಗಗಳು ಕಾಂತಾವರದಲ್ಲಿ ನಡೆದಿರುವ ಸಂಭವವಿಲ್ಲ.

[ವಿ2] ವಿವರಿಸಿರುವಂತೆ 'ಸಪದಿ ಪಾರಂತೀಶಾಭಿನಂದೀ' ಎಂಬಲ್ಲಿನ 'ಸಪದಿ'ಯು ಸಂಪ್ರೋಕ್ಷಣೆಯ ಶೀಘ್ರತ್ವಕ್ಕೇ ಹೆಚ್ಚು ಹೊಂದಾಣಿಕೆಯಾಗುವುದು. ಆದರೂ, ಗೂಢಭಾವಪ್ರಕಾಶಿಕೆಯಲ್ಲಿ 'ಸಮುದ್ರೇ ಸ್ನಾತ್ವಾ ಗಮನ**ಸಮಯೇ**' ಎಂದಿದೆ. ಅದರ ಅರ್ಥ 'ಸಮುದ್ರದ ಸ್ನಾನಾನಂತರ ಹೋಗುವ ಸಮಯದಲ್ಲಿ' ಎಂದು. ಹೋದ ಮೇಲೆ ಎಂದಲ್ಲ. ಎಂದರೆ, ಮಾರ್ಗಮಧ್ಯದಲ್ಲಿ ನಡೆದದ್ದು ನೃಸಿಂಹದೇವಾಲಯದ ಲಘಿಮಾ ಹಾಗೂ ಶಾರೀರಬಲದ ಪ್ರಸಂಗಗಳು. ಹೋದದ್ದಾದರೂ ಎಲ್ಲಿಗೆ? ಮುಂದಿನ ಶ್ಲೋಕದಲ್ಲೇ ಮೊದಲು ಹೇಳಿರುವ ಪಾರಂತಿಗೆ – '**ಪಾರಂತೀಶಾಭಿನಂದೀ**'. ಆದ್ದರಿಂದ ಕಣ್ವತೀರ್ಥದಿಂದ ಪಾರಂತಿಗೇ ಸೀದ ಹೋದದ್ದು.

1296ರ ಚಾತುರ್ಮಾಸ್ಯ ಮುಗಿಯುವುದು ಗ್ರಹಣವಾಗಿ 11ಕ್ಕೂ ಹೆಚ್ಚು ದಿನಗಳಾದ ಮೇಲೆ. ಆದ್ದರಿಂದ, ''ಗ್ರಸ್ತೋದಯ ಗ್ರಹಣದಲ್ಲಿ ನಂತರ 3 ದಿನಗಳು ಶುಭಕರ್ಮಗಳಿಗೆ ವರ್ಜ್ಯ'' ಎಂಬ ಅನಿಷ್ಟಾಪತ್ತಿಯು ಸಂಗತವಲ್ಲ. ಗ್ರಹಣವಾಗಿ ನಾಲ್ಕನೇ ದಿನವೇ ಸಂಪ್ರೋಕ್ಷಣೆ ಮಾಡಿಸಿರಬಹುದಲ್ಲವೇ?

ಗ್ರಹಣದ ದಿನದಂದೇ ಪಾರಂತೀಸಂಪ್ರೋಕ್ಷಣೆಯೆಂದು [ಜ]ದಲ್ಲಿ ಹೇಳಿಲ್ಲ. ಅಲ್ಲಿನ ವಿಕಲ್ಪಗಳನ್ನು ಸರಿಯಾಗಿ ಗಮನಿಸಿ. ಅಲ್ಲಿರುವುದು ನೃಸಿಂಹಗೇಹವು ಒಂದು ವೇಳೆ ಕಣ್ವ-ತೀರ್ಥಕ್ಕೆ ಸಮೀಪದಲ್ಲೇ ಇದ್ದದ್ದಾದರೆ ಗಂಡವಾಟಾದಿಪ್ರಸಂಗಗಳು ಅಂದೇ ನಡೆದವೆಂದು.

- ಭಾವಪ್ರಕಾಶಿಕೆಯ ಕೊನೆಯಲ್ಲಿ ಪಂಡಿತಾಚಾರ್ಯರು ಸುಮಧ್ವವಿಜಯದ ಘಟನೆಗಳ ಸಂಗ್ರಹದಲ್ಲಿ ತಾವು ವಹಿಸಿದ ಕಾಳಜಿಗಳನ್ನು ಹೇಳಿದ್ದಾರೆ. ಒಬ್ಬ ಇತಿಹಾಸಕಾರನಿಗೆ ಇರಬೇಕಾದ ಎಲ್ಲ ಜವಾಬ್ದಾರಿಯೂ ಅವರಿಗಿತ್ತೆಂದು ಇದರಿಂದ ತಿಳಿಯುತ್ತದೆ. ಆದ್ದರಿಂದ 'ನಿರೂಪಣೆಯಲ್ಲಿ ಹಿಂದುಮುಂದಾಗಿದ್ದರೆ ಕ್ಷಮಿಸಬೇಕು' (1/8) ಎಂಬ ಅವರ ಮಾತು ವಿನಯೋಕ್ತಿಯಾದೀತೇ ಹೊರತು ವಸ್ತುಸ್ಥಿತಿಯಲ್ಲ. 'ಸ್ಖಲನ್ನಪ್ಯೇತಸ್ಮಾತ್ ಜಗತಿ ನ ಹಿ ನಿಂದ್ಯೋऽಸ್ಮಿ ವಿದುಷಾಮ್' ಎಂಬ ನ್ಯಾಯಸುಧೆಯ ಮಾತಿನಂತೆ. ಆದ್ದರಿಂದ ನಿರವಕಾಶವಾದ ಬಾಧಕ**ವಿರ**ದಿದ್ದಾಗಲೂ ಕುತೂಹಲವಶಾತ್ ಪೂರ್ವಾಪರೀಕಾರವಾಗಿದೆ ಎನ್ನುವುದು ಸುಮಧ್ವವಿಜಯದ ಐತಿಹಾಸಿಕತೆಗೇ ಧಕ್ಕೆ ತಂದೀತು. ಪ್ರಸಕ್ತ 16ನೆಯ ಸರ್ಗದ ಘಟನೆಗಳು ಕೊನೆಯಲ್ಲಿ ನಡೆದದ್ದೆನ್ನುವುದಕ್ಕೆ ಅಂತಹ ಯಾವ ಬಾಧಕವೂ ಇಲ್ಲ.

ಗೋಮತೀತೀರದ ಘಟನೆಯು 10ನೇ ಸರ್ಗದ ಉತ್ತರಭಾರತಯಾತ್ರೆಯ ಸಂದರ್ಭದಲ್ಲಿ ನಡೆದದ್ದೆನ್ನುವ [ವಿ2]ದ ಊಹೆಗೆ ಯಾವ ಪ್ರಮಾಣವೂ ಇಲ್ಲ. ಅದು ಮಹಾನದಿಯೂ, ತೀರ್ಥಪ್ರಬಂಧದಲ್ಲಿ ವರ್ಣಿಸಲ್ಪಟ್ಟದ್ದೂ ಆದ ದ್ವಾರಕೆಯ ಬಳಿ ಇರುವ ಗೋಮತಿ ಏಕಾಗಿರಬಾರದು? ಉತ್ತರಭಾರತದ್ದೆಂದಾದರೂ ಅದು 10ನೆಯ ಸರ್ಗದ ಯಾತ್ರೆಯಲ್ಲಿಯೇ ಏಕೆ ನಡೆದಿರಬೇಕು? ಸ್ವತಃ ರಾಜನೇ ವೇದದ್ವೇಷಿಯೆಂದರಿತು ಅದೊಂದೇ ಕಾರಣಕ್ಕಾಗಿಯೇ ಗೋಮತೀತೀರಕ್ಕೆ ಹೋಗಿರಬಹುದು. ಒಟ್ಟಾರೆ, ಗ್ರಂಥದ ಕೊನೆಯಲ್ಲಿ ಬರುವ ಪ್ರಸಂಗಗಳು ಕೊನೆಯಲ್ಲಿ ನಡೆದವೆನ್ನುವುದಕ್ಕೆ ಬೇರಾವ ಪ್ರಮಾಣದ ಅಪೇಕ್ಷೆಯೂ ಇಲ್ಲ. ನಡೆದದ್ದಲ್ಲವೆನ್ನುವುದಕ್ಕೆ ನಿರವಕಾಶ ಪ್ರಮಾಣ ಬೇಕು. ಈ ಪ್ರಸಂಗದಲ್ಲಿ ಅಂತಹುದಿಲ್ಲ.

ಬದಲಾಗಿ ಸಾಧಕಪ್ರಮಾಣಗಳೇ ಇವೆ : ''**ಕ್ರಮವಾಗಿ** ಶಿಷ್ಯನು ಒಂದೊಂದೇ ಮಹಿಮೆಯನ್ನು ಹೇಳಿದನು ಎನ್ನುತ್ತಾರೆ – 'ಗೋಮತ್ಯಾಃ' ಎಂಬ ಶ್ಲೋಕದಿಂದ'' ಎಂಬುದಾಗಿ ಶ್ರೀಗಳವರೇ ತಮ್ಮ ಅನುವಾದದಲ್ಲಿ ಅವತಾರಿಕೆಯನ್ನು ನೀಡಿರುವರು. 16ನೆಯ ಸರ್ಗದ ನಿರೂಪಣೆಯನ್ನು ನೋಡಿದಾಗ ಹಾಗೆನ್ನಿಸುವುದು ಸಹಜ. ಅಲ್ಲಿ ಗ್ರಹಣದ ಪ್ರಸಂಗದ ನಂತರ ಸುತ್ತಮುತ್ತಲೇ ನಡೆದ ಕೆಲವು ಪ್ರಸಂಗಗಳು ನಿರೂಪಿತವಾಗಿವೆ. ಅವುಗಳಲ್ಲಿ

ಕೃಷ್ಣಾಮೃತಮಹಾರ್ಣವ ಹಾಗೂ ಕರ್ಮನಿರ್ಣಯ ಗ್ರಂಥಗಳ ರಚನೆಗಳು ಬಹಳ ಪ್ರಧಾನವಾದಂಥದ್ದು. 15ನೆಯ ಸರ್ಗದಲ್ಲಿ ಶ್ರೀತ್ರಿವಿಕ್ರಮಪಂಡಿತಾಚಾರ್ಯರು ಶ್ರೀಮದಾಚಾರ್ಯರಿಂದ ರಚಿತವಾದ ಅನೇಕ ಗ್ರಂಥಗಳನ್ನು ಸ್ತುತಿಸುವಾಗ ಇವೆರಡನ್ನು ವರ್ಣಿಸುವುದೇ ಇಲ್ಲ. **ದಶೋ**ಪನಿಷದ್ಭಾಷ್ಯವೆಂದವರು **ದಶ**ಪ್ರಕರಣವೆನ್ನುವುದಿಲ್ಲ. ಎಂದರೇನರ್ಥ? 16ನೆಯ ಸರ್ಗದಲ್ಲಿ ವ್ಯಕ್ತವಾಗಿ ರಚಿಸಿದರೆಂದ ಆ ಎರಡೂ ಕೃತಿಗಳು 15ನೆಯ ಸರ್ಗದ ಪ್ರಸಂಗದಲ್ಲಿನ್ನೂ ರಚಿತವಾಗಿರಲಿಲ್ಲವೆಂದು. ಕರ್ಮನಿರ್ಣಯವಂತೂ ಬದರಿಕಾಶ್ರಮಗಮನಕ್ಕೆ ಹತ್ತಿರ ಸಮಯದಲ್ಲೇ ನಡೆದದ್ದು. ಆಗಲೇ ದುಷ್ಟನೊಬ್ಬನು **'ಸರ್ವಜ್ಞೋಽಪಿ'** (16/42) ಎಂಬುದಾಗಿ ಸರ್ವಜ್ಞತ್ವವನ್ನು ಅಂಗೀಕರಿಸಿ ಕೊನೆಯ ಪ್ರಯತ್ನವೆಂಬಂತೆ ಪ್ರಶ್ನಿಸುವುದು ಸಂಗತಿಸುವುದು. ಗ್ರಹಣದ ಪ್ರಸಂಗಕ್ಕೂ ಈ ಎರಡು ಗ್ರಂಥಗಳ ಪ್ರಸಂಗಗಳಿಗೂ ದಶಕಗಳ ಗಟ್ಟಲೆ ಅಂತರವಿರಲು ಸಾಧ್ಯವೇ?

16ನೇ ಸರ್ಗದ ಮಧ್ವಶಿಷ್ಯನ ಪ್ರವಚನದಲ್ಲಿ ಬದರಿಕಾಶ್ರಮಗಮನಕ್ಕೆ ಹತ್ತಿರ**ವಲ್ಲ**ವೆಂದು ಸರ್ವಸಿದ್ಧವಾದ ಭಾಷ್ಯಾದಿರಚನೆ ಕೃಷ್ಣಪ್ರತಿಷ್ಠೆ ಇತ್ಯಾದಿ ಪ್ರಮುಖ ಘಟನೆಗಳು ಕಾಣುವುದಿಲ್ಲ. ಏನಿದರರ್ಥ? ಕೊನೆಯಲ್ಲಿ ಶಿಷ್ಯತ್ವ ಸ್ವೀಕರಿಸಿದ ಶಿಷ್ಯನು ತಾನು ಪ್ರತ್ಯಕ್ಷ ಕಂಡದ್ದನ್ನು ಮಾತ್ರ ವರ್ಣಿಸುತ್ತಿದ್ದರೆ 16ನೇ ಸರ್ಗದ ಘಟನೆಗಳು ಕೊನೆಯಲ್ಲೇ ನಡೆದದ್ದೆಂದು ಸಿದ್ಧ. ಒಂದು ವೇಳೆ ಪಂಡಿತಾಚಾರ್ಯರು ಮುಂಚೆ ವರ್ಣಿತವಾಗದ್ದನ್ನು ಮಾತ್ರ ಆತನ ಸಮಗ್ರ ಪ್ರವಚನದಿಂದ ಆಯ್ಕೆ ಮಾಡಿದ್ದಾರೆಂದರೆ ಆ ಘಟನೆಗಳು ಕ್ರಮವಾಗಿ ನಡೆದದ್ದೋ ಅಲ್ಲೊಂದಿಲ್ಲೊಂದಾಗಿಯೋ? ಅಲ್ಲೊಂದಿಲ್ಲೊಂದಾಗಲು ಸಾಧ್ಯವಿಲ್ಲ. ಯಾರೇ ಆದರೂ ಘಟನೆಗಳು **ನಡೆದ** ಕ್ರಮವನ್ನು ಪ್ರಧಾನ ಮಾಡಿ 16ನೇ ಸರ್ಗದ ಘಟನೆಗಳನ್ನು ಉಳಿದ ಸರ್ಗಗಳಲ್ಲಿ ಅಂತರ್ಭಾವಮಾಡುತ್ತಿದ್ದರು. ರಾಜನೊಂದಿಗೆ ನಡೆದ ಪ್ರಸಂಗ, ಸಾವಿರಾರು ಜನ ಸೇರಿದ ಗ್ರಹಣ ಪ್ರಸಂಗ, ಮುಂತಾದವುಗಳು ಆ ಒಬ್ಬ ಶಿಷ್ಯನಿಗಷ್ಟೇ ತಿಳಿದಿರಬೇಕೆಂಬುದೂ ಯುಕ್ತವಲ್ಲ. ಇನ್ನು ಕ್ರಮವಾಗಿ ನಡೆದದ್ದೆಂದರೆ ಆ ಘಟನೆಗಳ ಸಮೂಹವು ಕೊನೆಯಲ್ಲಿ ನಡೆದದ್ದೋ ಅಥವಾ 10ನೇ ಸರ್ಗದ ಘಟನೆಗಳಾದ ತತ್ಕ್ಷಣವೇ ನಡೆದದ್ದೋ? ಎರಡನೆಯ ಪಕ್ಷದಲ್ಲಿ , ಅದು 16ರ ಬದಲು 11ನೇ ಸರ್ಗವಾಗುತ್ತಿತ್ತು. ಆದ್ದರಿಂದ ಆ ಘಟನೆಗಳು ಕೊನೆಯಲ್ಲೇ ನಡೆದದ್ದೆಂದು ಸಿದ್ಧ.

● ಭೀಮನ ಕಲ್ಲನ್ನು ತಂದದ್ದು ತರುಣರ ವಿಷಯದಲ್ಲಿ ಅಪೂರ್ವವಲ್ಲವೆಂದು [ಜ]ದಲ್ಲಿ ಹೇಳಿಲ್ಲ. ತರುಣರ ವಿಷಯಕ್ಕಿಂತಲೂ ಅಜರತ್ವಾದಿಗಳನ್ನು ಸಮರ್ಥಿಸುವುದರಿಂದ ವೃದ್ಧರ ವಿಷಯದಲ್ಲಿ ಹೆಚ್ಚು 'ಅಪೂರ್ವ'ವೆಂದು ಹೇಳಲಾಗಿದೆ. ಅಪೂರ್ವತೆಯು ಪ್ರಾಮಾಣ್ಯ-ಸಾಧಕವೆಂದೂ ಹೇಳಲಾಗಿಲ್ಲ. ಹಿಂದಿನ ಯುಕ್ತಿಗಳಂತೆ ಈ ಯುಕ್ತಿಯು ನಿರ್ಣಾಯಕ-ವಾಗದಿದ್ದರೂ ವಿಶ್ವಾಸಜನಕವಾಗಿದೆ. ಅದೇ ರೀತಿ ಭೀಮಾವತಾರ ಮಧ್ವಾವತಾರಗಳಲ್ಲಿ ಒಂದೇ ಬಗೆಯಾಗಿ ಮಹಿಮೆಗಳಿರಬೇಕೆಂಬ ನಿಯಮವೇನಿಲ್ಲ. ಆ ನಿಯಮವಿದೆಯೆಂದು ಹೇಳಿಯೂ ಇಲ್ಲ. ಆದರೆ, ಹಾಗೆ ಸಾಮ್ಯಾಂಶವಿರುವುದು ಸಂಭಾವನೆಯನ್ನು ಹೆಚ್ಚಿಸುವುದಿಲ್ಲವೇ? node-antinodeಗಳಿಗೆ ರಾಹು-ಕೇತುಗಳೆಂದು ಪ್ರಾಚೀನ ಭಾರತೀಯರೂ ವ್ಯವಹರಿಸಿದ್ದಾರೆ. ಇಂದಿನ ಅನೇಕ ಮಾಧ್ವ ಪಂಚಾಂಗಗಳಲ್ಲೂ ಗ್ರಹಣವು ರಾಹುಗ್ರಸ್ತವೋ ಕೇತುಗ್ರಸ್ತವೋ ಎಂಬ ವಿವರವಿರುತ್ತದೆ. ಆದ್ದರಿಂದ ರಾಹುಗ್ರಸ್ತವಾಗುವುದು ನಿರ್ಣಾಯಕವಾಗದಿದ್ದರೂ ದೈತ್ಯರಾಹುವಿನಿಂದ ಸ್ವಸ್ಥಾನದಲ್ಲೇ ಗ್ರಸ್ತವಾಗುವುದು ಗ್ರಹಣದ ಮಹತ್ತ್ವವನ್ನು ಸ್ವಲ್ಪವೂ ಹೆಚ್ಚಿಸುವುದಿಲ್ಲವೇ? ನಿರವಕಾಶವಾದ ಯುಕ್ತಿಗೆ ಸಾವಕಾಶವಾದರೂ ಸಂಭಾವನೆಯನ್ನು ಹೆಚ್ಚಿಸುವ ಮತ್ತೊಂದು ಸಹಾಯಕಯುಕ್ತಿಯನ್ನು ನೀಡಿದಾಗ ಆ ಯುಕ್ತಿಯು ಸಂಭಾವನೆಯನ್ನು

ನಿಜವಾಗಲೂ ಹೆಚ್ಚಿಸುತ್ತದೋ? ಸಹಾಯಕವಾಗಿದೆಯೋ? ಎಂಬುದಾಗಿ ವಿಮರ್ಶಿಸಬೇಕೇ ಹೊರತು ಸಹಾಯಕಯುಕ್ತಿಯ ಮತ್ತೊಂದು ಪಕ್ಷವನ್ನು ಪ್ರತಿಪಾದಿಸಬಾರದು.

● ಗ್ರಹಣಗಳ ಬಗ್ಗೆ ವಿಷಯಗಳನ್ನು ಯಥಾರ್ಥವಾಗಿ ಸಂಪಾದಿಸುವುದರಲ್ಲಾಗಲೀ ಅವುಗಳ ವ್ಯಾಖ್ಯಾನದಲ್ಲಾಗಲೀ [ವಿ1] ಹಾಗೂ [ವಿ2] ಸಮರ್ಪಕವೆನಿಸುವುದಿಲ್ಲ. ಆದ್ದರಿಂದ [ಜ]ದಲ್ಲಿರುವುದು ಸಾಧಾರ ಸಂಭಾವನೆಗಳೇ ಹೊರತು ನಿರಾಧಾರ ಊಹಾಪೋಹಗಳಲ್ಲ.

## ಸುಮಧ್ವವಿಜಯದಲ್ಲಿನ ಸೂರ್ಯಗ್ರಹಣವು 1275ರದ್ದು ಎಂಬುದಕ್ಕೆ ಮತ್ತಷ್ಟು ಪುರಾವೆಗಳು

● ಕಣ್ವತೀರ್ಥದಿಂದ ಸೀದ ಹೋದದ್ದು ಪಾರಂತಿಗೆ. ಮಾರ್ಗಮಧ್ಯದಲ್ಲಿ ನೃಸಿಂಹದೇವಾಲಯದ ಪ್ರಸಂಗಗಳು ಎಂಬುದಾಗಿ ಗೂಢಭಾವಪ್ರಕಾಶಿಕೆಯ ಆಧಾರದ ಮೇಲೆ ಹಿಂದೆ ಸಮರ್ಥಿಸಲಾಗಿದೆ. ಪಾರಂತಿಯಲ್ಲಾದರೂ ದಿನಾರ್ಧದಲ್ಲಿಯೇ ಸಂಪ್ರೋಕ್ಷಣೆ ಮಾಡಿಸಿದರು. ಸರಿದಂತರ (ಎರ್ಕಿಮಠ) ಎಂಬ ಜಾಗದಲ್ಲಿ ಮಳೆ ತರಿಸಿದ ಪ್ರಸಂಗ ಪಾರಂತಿಯ ಪ್ರಸಂಗದ ನಂತರವೇ ವರ್ಣಿತವಾಗಿರುವುದರಿಂದ ಪಾರಂತಿಯಿಂದ ಸೀದ ಬಂದದ್ದು ಸರಿದಂತರಕ್ಕೆ. ಛಲಾರೀ ಆಚಾರ್ಯರ ವ್ಯಾಖ್ಯಾನದಲ್ಲೂ (16/38) – 'ಇಹ ಅಸ್ಮಿನ್ **ಪಾರಂತೀದೇವಾಲಯಗ್ರಾಮೇ** ತಟಾಕಂ ಪದ್ಮಾಕರಂ ನಿರ್ಜಲಂ ಜಲರಹಿತಂ **ಶುಶ್ರುವಾನ್** ಸನ್' ಎಂದಿದೆ.[1] ವಸ್ತುತಃ ಆ ತಟಾಕವಿರುವುದು ಸರಿದಂತರದಲ್ಲಿ , ಪಾರಂತಿಯಲ್ಲಲ್ಲ. ಆದ್ದರಿಂದ, (ಪಾರಂತಿಯಿಂದ) ಸರಿದಂತರಕ್ಕೆ ಬರುವಾಗ ಹಾಗೂ ಇನ್ನೂ **ಪಾರಂತಿಯಲ್ಲಿರುವಾಗಲೇ** ಆ ತಟಾಕ ನಿರ್ಜಲವಾಗಿದೆಯೆಂದು **ಕೇಳಿದರು** ಎಂದರ್ಥ.

ಒಟ್ಟಾರೆ, ಕಣ್ವತೀರ್ಥ – ನೃಸಿಂಹಗೇಹ – ಪಾರಂತೀ – ಸರಿದಂತರ ಎಂಬ ಕ್ರಮದಲ್ಲಿ ಅವ್ಯವಹಿತವಾಗಿ ಸಂಚರಿಸಿದರು ಎಂದಾಗುವುದು. ಇವೆಲ್ಲ ಜಾಗಗಳನ್ನೂ ಕ್ರಮವಾಗಿ A, B, C, D ಎಂಬುದಾಗಿ ಚಿತ್ರ-3 ರಲ್ಲಿ ತೋರಿಸಲಾಗಿದೆ.[2] **ಕಾಲ್ನಡುಗೆಯಲ್ಲಿ** ಅಂದಾಜು A-B ಪ್ರಯಾಣಕ್ಕೆ 25 ಕಿ.ಮಿ. ದೂರವಿದ್ದು 5 ಘಂಟೆ ಸಮಯ; B-C ಪ್ರಯಾಣಕ್ಕೆ 35 ಕಿ.ಮಿ. ದೂರವಿದ್ದು 7.5 ಘಂಟೆ ಸಮಯ; C-D ಪ್ರಯಾಣಕ್ಕೆ 20 ಕಿ.ಮಿ. ದೂರವಿದ್ದು 4 ಘಂಟೆ ಸಮಯ ಎಂದು 'Google maps' ತಿಳಿಸುತ್ತದೆ. ಈ ಚಿತ್ರವು ಕಣ್ವತೀರ್ಥದಿಂದ ಸರಿದಂತರದವರೆಗಿನ ಸಂಚಾರವನ್ನು ನಿರಂತರವೆಂದು ದೃಢಪಡಿಸುತ್ತದೆ. ಚಾತುರ್ಮಾಸ್ಯದ ಹೊರತು ಯತಿಗಳು ಒಂದೇ ಕಡೆ ವಾಸಿಸಲೂಕೂಡದು.[3] ಆದ್ದರಿಂದ ಈ ಸಂಚಾರಕ್ಕೆ ಪರಮಾವಧಿಯೆಂದರೂ 7-8 ದಿನಗಳು ಹಿಡಿಸಿರಬಹುದು.

ಸರಿದಂತರದಲ್ಲಿ ಮಳೆ ತರಿಸಿದ್ದನ್ನು ಹೇಳುವ ಸುಮಧ್ವವಿಜಯದ ಶ್ಲೋಕ **'ಆಯಾಸ್ಯನ್ ಕಿಲ ಸರಿದಂತರಾಖ್ಯದೇಶಂ ಗ್ರೀಷ್ಮೇ ನಿರ್ಜಲಮಿಹ ಶುಶ್ರುವಾಂಸ್ತಟಾಕಮ್'** (16/38) ಎಂದು. ಗ್ರೀಷ್ಮೇ ಎಂಬುದಕ್ಕೆ ಗ್ರೀಷ್ಮಋತುವಿನಲ್ಲಿ ಎಂದು ವ್ಯಾಖ್ಯಾನಿಸಲಾಗಿದೆ. ಆದ್ದರಿಂದ ವೈಶಾಖ ಹಾಗೂ ಜ್ಯೇಷ್ಠಮಾಸದ ಅಮಾವಾಸ್ಯೆಯಂದು ಸಂಭವಿಸಿದ 1267, **1275**, 1304 ಹಾಗೂ 1315 ರ ಗ್ರಹಣಗಳನ್ನು ಹೊರತುಪಡಿಸಿದ ([ಜ]ದ ಕೋಷ್ಟಕದಲ್ಲಿ ನೀಡಿರುವ) ಎಲ್ಲ ಗ್ರಹಣಗಳೂ ಈ ಯುಕ್ತಿಯಿಂದ ನಿರಾಕೃತವಾಗುವವು.

---

1. ಶ್ರೀಗಳವರೂ ತಮ್ಮ ಅನುವಾದದಲ್ಲಿ ಈ ವ್ಯಾಖ್ಯಾನವನ್ನೇ ಅನುಸರಿಸಿದ್ದಾರೆ.
2. ಇಲ್ಲಿ ಅನೇಕ **ನದೀತರಣ**ಗಳನ್ನು ಕಾಣಬಹುದು.
3. '**ಏಕರಾತ್ರಂ** ವಸೇತ್ ಗ್ರಾಮೇ ನಗರೇ ಪಂಚರಾತ್ರಕಮ್ । ವರ್ಷಾಭ್ಯೋಽನ್ಯತ್ರ'
– ತರಂಗಿಣೀ ರಾಮಾಚಾರ್ಯರ ಯತಿಪ್ರಣವಕಲ್ಪಟೀಕಾ.




ಚಿತ್ರ – 3. ಆಕರ : Google maps.


● 1275ರದ್ದು ಗ್ರಸ್ತೋದಯ ಸೂರ್ಯಗ್ರಹಣ. ಯಾವುದೇ ಗ್ರಸ್ತೋದಯ ಸೂರ್ಯಗ್ರಹಣವಾದರೂ ಗ್ರಾಸವು ನಿಯಮೇನ ಸೂರ್ಯನ **'ಮೇಲ್ಭಾಗದಿಂದ' 'ಕೆಳಭಾಗಕ್ಕೆ'** ಹಾದುಹೋಗುವುದು ಎಂಬುದು ಎಲ್ಲ ಜ್ಯೋತಿಷ್ಕರಿಗೂ ತಿಳಿದಿರುತ್ತದೆ. ಗ್ರಸ್ತೋದಯ ಗ್ರಹಣವಾದಾಗ ಸ್ಪರ್ಶಸ್ನಾನವು ಸೂರ್ಯೋದಯದ ವೇಳೆಗೆ. ಆಗ 1275ರ ಗ್ರಹಣ ಆರಂಭವಾಗಿ ಆಗಲೇ 20 ನಿಮಿಷಗಳೇ ಕಳೆದಿರುತ್ತವೆ. ಆದ್ದರಿಂದ ಅಂದು ಸ್ಪರ್ಶಸ್ನಾನದ ವೇಳೆ ಮಂದಬೆಳಕಿತ್ತೆಂಬುದಕ್ಕೆ ಇನ್ನೂ ಹೆಚ್ಚಿನ ಪುಷ್ಟಿ ದೊರಕುತ್ತದೆ.

● ಐತರೇಯಶ್ರುತಿಯ ವ್ಯಾಖ್ಯಾನವನ್ನು ಗ್ರಹಣ ಹಿಡಿದ ಸಂದರ್ಭದಲ್ಲೇ, ಗ್ರಹಣ ಸಮಯದ ಬಹುಭಾಗ ಮಾಡಿದ್ದೆಂಬುದಾಗಿ ಹಿಂದೆ ಸಮರ್ಥಿಸಲಾಗಿತ್ತು. ಈ ವ್ಯಾಖ್ಯಾನದ ಬಗ್ಗೆ ಸುಮಧ್ವವಿಜಯವು ಮತ್ತೊಂದು ಅಪೂರ್ವ ಮಾಹಿತಿಯನ್ನು ನೀಡುತ್ತದೆ : **'ಅಂಭೋಧೇಃ ತ್ವರಿತತರೋರ್ಮಿಪಾಣಿಮೃಷ್ಟೇ ಸ್ವಚ್ಛೇಽಸೌ ವಿಕಟತಟಾಸನೇ ನಿಷಣ್ಣಃ । ವ್ಯಾಚಖ್ಯೌ ...** ' (16/16). ಎಂದರೆ, 'ಸಮುದ್ರದ ವೇಗಯುಕ್ತವಾದ ಅಲೆಗಳೆಂಬ ಕೈಗಳಿಂದ ತೊಳೆದು ಸ್ವಚ್ಛಮಾಡಲ್ಪಟ್ಟ ವಿಶಾಲ ಹಾಗೂ ಸುಂದರವಾದ ತೀರದಲ್ಲಿ ಕುಳಿತವರಾಗಿ ವ್ಯಾಖ್ಯಾನ ಮಾಡಿದರು' ಎಂದು.

ಸುಮಧ್ವವಿಜಯದಲ್ಲಿ ಕೇವಲ ಕಾವ್ಯಸೌಂದರ್ಯಕ್ಕೆಂದು ಯಾವುದನ್ನೂ ಹೇಳಿಲ್ಲವಾದ್ದ–ರಿಂದ ಇದರ ಅರ್ಥ ಏನೆಂಬುದನ್ನು ಸೂಕ್ಷ್ಮವಾಗಿ ಗಮನಿಸಬೇಕಾಗುತ್ತದೆ. ಇಲ್ಲಿ 'ಅಲೆಗಳಿಂದ ಸ್ವಚ್ಛ ಮಾಡಲ್ಪಟ್ಟ ತೀರದಲ್ಲಿ ಕುಳಿತವರಾಗಿ' ಎಂಬುದಾಗಿದೆ. 'ತೀರ' ಎಂದರೆ ಅಲ್ಲಿ ನೀರಿಲ್ಲ ಎಂದರ್ಥ. ಹಾಗೆಯೇ ನೀರು ಬರುತ್ತಿದ್ದರೆ ಆ ಪ್ರದೇಶವನ್ನು ತೀರ ಎನ್ನಲೂ ಸಾಧ್ಯವಿಲ್ಲ. ಹೀಗೆ ಸಾಮಾನ್ಯವಾದ ಜಲಾಶಯವಾಗಿದ್ದರೆ ಆ ಮಾತು ಕೂಡುತ್ತಿರಲಿಲ್ಲವೇನೋ. ಆದರೆ, ಅದು ಸಮುದ್ರ. ಚಂದ್ರಸೂರ್ಯರ ಗುರುತ್ವಾಕರ್ಷಣೆಗೊಳಗಾಗಿ ಗೋಳಾಕಾರವಾದ ಭೂಮಿಯ ಮೇಲಿರುವ ಸಮುದ್ರದ ಮಟ್ಟದಲ್ಲಿ ದೈನಂದಿನ ಏರಿಳಿತ ಉಂಟಾಗುತ್ತದೆ. ಇದರಿಂದಾಗಿ ಸಮುದ್ರ–ಭೂಪ್ರದೇಶಗಳ ನಡುವಿನ ಗಡಿಯು ಮುಂದು–ಹಿಂದಾಗುವುದು. ಇದನ್ನು ಭರತ–ಇಳಿತ (tides) ಎನ್ನುವರು. ಎಂದರೆ, ಹಿಂದಿನ ಭರತವಿದ್ದ ಕಾಲದಲ್ಲಿ ಬಂದ ಅಲೆಗಳಿಂದ ಸ್ವಚ್ಛವಾಗಿದ್ದ ಹಾಗೂ ಗ್ರಹಣಕಾಲದಲ್ಲಿ (ಇಳಿತವಿದ್ದದ್ದರಿಂದ) ತೀರವಾಗಿದ್ದ ಜಾಗವೇ ಸುಮಧ್ವವಿಜಯದಲ್ಲಿ ವಿವಕ್ಷಿತವೆಂದಾಗುವುದು. ಇದು ಗ್ರಹಣ ನಡೆದ ಸಮಯದ ಮೇಲೆ ಕಠಿಣ ನಿರ್ಬಂಧವನ್ನು ವಿಧಿಸುವುದರಿಂದ ಅಂದಿನ ಗ್ರಹಣವನ್ನು ಗುರುತಿಸಲು ಅನುವಾಗುವುದು.

ಭರತ-ಇಳಿತಗಳ ಬದಲು ಕೇವಲ ಕೆಲವು ಕ್ಷಣಗಳಿಗೊಮ್ಮೆ ಬಂದು ಹೋಗುವ ತೆರೆಗಳಿಂದಲೇ ಸ್ವಚ್ಛವಾಗುವ ಜಾಗವೂ ವಿವಕ್ಷಿತವಾಗಲಾರದು. ಏಕೆಂದರೆ, ಅವು ಮಾತ್ರ ಸೃಷ್ಟಿಸುವ ಅಂತಹ ಜಾಗವು ವಿಶಾಲವೂ ಆಗಿರುವುದಿಲ್ಲ, ಅಲ್ಲಿಗೆ ಬರುವಷ್ಟರಲ್ಲಿ ಅಲೆಗಳಿಗೆ ವೇಗವೂ ಇರುವುದಿಲ್ಲ. ಪುನಃ ಕೆಲವೇ ಕ್ಷಣಗಳಲ್ಲಿ ಬರುವ ಮತ್ತಷ್ಟು ಅಲೆಗಳಿಂದ ಶ್ರೋತೃಗಳಿಗೆ ಬಾಧೆಯಷ್ಟೇ ಉಂಟಾದೀತು.

● ಭರತ-ಇಳಿತಗಳು ಮನಬಂದಾಗ ಬರುವಂತಹುದಲ್ಲ. ಅವುಗಳಿಗೊಂದು ಶಿಸ್ತಿದೆ. ಉದಾಹರಣೆಗೆ, ಸೂರ್ಯಗ್ರಹಣವಾಗುವುದು ಅಮಾವಾಸ್ಯೆ. ಅಮಾವಾಸ್ಯೆಯಂದು ಸಾಮಾನ್ಯವಾಗಿ ಸೂರ್ಯೋದಯ ಹಾಗೂ ಸೂರ್ಯಾಸ್ತದ ಸಮಯಕ್ಕೆ ಇಳಿತವಿರುತ್ತದೆ.[1] ನಾನಾವಿಧ ಸಂಘರ್ಷಗಳು, ಕರಾವಳಿಯ ರಚನೆ, ಸಮುದ್ರದ ಆಳದ ವಿನ್ಯಾಸ ಮುಂತಾದ ಕಾರಣಗಳಿಂದ ಒಂದು ಸ್ಥಳದಿಂದ ಮತ್ತೊಂದು ಸ್ಥಳಕ್ಕೆ ಸ್ವಲ್ಪ ವ್ಯತ್ಯಾಸಗಳಿರಬಹುದಾದರೂ ಒಂದು ನಿರ್ದಿಷ್ಟ ಸ್ಥಳದಲ್ಲಿ ಅಮಾವಾಸ್ಯೆಗಳಂದು ಯಾವ ಸಮಯಕ್ಕೆ ಭರತವಿರಬೇಕು, ಇಳಿತವಿರಬೇಕೆನ್ನುವುದು ಹೆಚ್ಚು ಬದಲಾಗುವುದಿಲ್ಲ.





ಚಿತ್ರ - 4.
Data courtesy : Indian National Centre for Ocean Information Services.

1. Newton ನಿಯಮಗಳನ್ನಾಧರಿಸಿದ ಸಮತೋಲನ ಭರತ-ಇಳಿತಗಳ ಸುಂದರ ವಿವರಣೆಗೆ John R. Taylor, "Classical Mechanics', University Science Books, 2005 ನೋಡಿ.

ಕಣ್ವತೀರ್ಥದಿಂದ ಕೇವಲ 20 ಕಿ.ಮಿ. ದೂರದಲ್ಲಿರುವ ಮಂಗಳೂರಿನ ಸಮುದ್ರದಲ್ಲಿ ಕಳೆದ ಖರನಾಮಸಂವತ್ಸರದ (2011–12) ಪ್ರತಿಮಾಸದ ಅಮಾವಾಸ್ಯೆಗಳಂದು **ಪ್ರತ್ಯಕ್ಷ** ಅಳೆದ ಭರತ–ಇಳಿತಗಳನ್ನು ಚಿತ್ರ–4(a) ರಲ್ಲಿ ಕೊಡಲಾಗಿದೆ. ಅದರಂತೆ ಅಲ್ಲಿ ಮುಂಜಾನೆ ಹಾಗೂ ಸಂಜೆ ಇಳಿತವಿದ್ದರೆ ಹಿಂದಿನ ಮಧ್ಯರಾತ್ರಿ ಹಾಗೂ ಮಧ್ಯಾಹ್ನಕ್ಕೆ ಭರತ. ಒಂದು ಮಾಸದ ಅಮಾವಾಸ್ಯೆಯಿಂದ ಮತ್ತೊಂದಕ್ಕೆ ಭರತ–ಇಳಿತಗಳ ಸಮಯದಲ್ಲಿ ಹೆಚ್ಚು ವ್ಯತ್ಯಾಸವಾಗಿಲ್ಲ.

ಭರತ–ಇಳಿತಗಳ ಸಮಯವನ್ನು ನಿರ್ಧರಿಸುವ ಕರಾವಳಿಯ ವಿನ್ಯಾಸ ಮುಂತಾದವುಗಳು ಬದಲಾಗುವ ಕಾಲಮಾನಕ್ಕೆ ಹೋಲಿಸಿದರೆ ಕಳೆದ 750 ವರ್ಷಗಳು ಯಾವ ಲೆಕ್ಕವೂ ಅಲ್ಲ. ಉದಾಹರಣೆಗೆ ಚಿತ್ರ–4(b)ನ್ನು ನೋಡಿ. ಕಳೆದ 5 ದಶಕಗಳಲ್ಲಿ ಒಂದೊಂದು ದಶಕಗಳಿಂದ ಪ್ರತಿನಿಧಿಯಾಗಿ ಒಂದರಂತೆ ಕಣ್ವತೀರ್ಥದಲ್ಲಿ (ಹಾಗೂ ಮಂಗಳೂರಿನಲ್ಲಿ) ಕಂಡ 5 ಸೂರ್ಯಗ್ರಹಣದ ದಿನಗಳಂದು ಮಂಗಳೂರಿನ ಸಮುದ್ರದ ಭರತ–ಇಳಿತಗಳು **ಪ್ರತ್ಯಕ್ಷ**ವಾಗಿ ಕಂಡಿದ್ದನ್ನು ತೋರಿಸಲಾಗಿದೆ. ಭರತ–ಇಳಿತಗಳ ಸಮಯದಲ್ಲಿ ಈ ಅವಧಿಯ ನಿಮಿತ್ತದಿಂದ ಉಂಟಾದ ಯಾವ ವ್ಯತ್ಯಾಸವೂ ಗಮನಕ್ಕೆ ಬರುವುದಿಲ್ಲ.




ಚಿತ್ರ – 5

ಕಣ್ವತೀರ್ಥದಲ್ಲಿ ಕಳೆದ ಅಮಾವಾಸ್ಯೆ (ಆಗಸ್ಟ್ 17, 2012) ಕಂಡ ಭರತ–ಇಳಿತಗಳನ್ನು ಚಿತ್ರ–5 ರಲ್ಲಿ ಕೊಡಲಾಗಿದೆ. ಅಂದು ಮುಂಜಾನೆ 04:15 ರಿಂದ ಸಂಜೆ 16:30 ರ ವರೆಗೆ ಸಮಾನ ಇಳಿಜಾರಿನ ಪ್ರದೇಶವೊಂದರ ಮೇಲೆ ಕೆಲವು ಕ್ಷಣಗಳಿಗೊಮ್ಮೆ ಬರುವ ಅಲೆಗಳು ಎಲ್ಲಿಯವರೆಗೆ ಬಂದು ನಿಲ್ಲುವವು ಎಂಬುದನ್ನು **ಪ್ರತ್ಯಕ್ಷವಾಗಿ ಅಳೆದದ್ದನ್ನು** (ಎಡ y-axis) ಆಧುನಿಕ ಉಪಕರಣಗಳಿಂದ ಅಳೆದ ಮಂಗಳೂರಿನ[1] ಭರತ–ಇಳಿತಗಳೊಂದಿಗೆ ಹೋಲಿಸಲಾಗಿದೆ (ಬಲ y-axis). ಇದರಿಂದ ಕಣ್ವತೀರ್ಥ ಹಾಗೂ ಮಂಗಳೂರಿನ

1. Data courtesy : Indian National Centre for Ocean Information Services.

ಸಮುದ್ರಗಳಲ್ಲಿ ಗಮನಾರ್ಹವಾದ ವ್ಯತ್ಯಾಸವಿಲ್ಲ ಎನ್ನುವುದು ಸ್ಫುಟಪಡುವುದು. ಚಿತ್ರ-4 ಮತ್ತು 5ರಲ್ಲಿ 1275ರ ಹಾಗೂ 1296ರ ಗ್ರಹಣಗಳ ಸಮಯಗಳನ್ನು ಎತ್ತಿ ತೋರಿಸಲಾಗಿದೆ.

ಆದ್ದರಿಂದ ಅಂದಿನ ಭರತ-ಇಳಿತಗಳನ್ನು ಇಲ್ಲಿಯ ಚಿತ್ರಗಳು ಚೆನ್ನಾಗಿ ಅನುಕರಿಸುವುದರಲ್ಲಿ ಸಂಶಯವಿಲ್ಲ.[1] ಅಮಾವಾಸ್ಯೆಯ ಭರತವು ಹಿಂದಿನ ದಿನಗಳ ಭರತಗಳಿಗಿಂತ ಹೆಚ್ಚಿನದ್ದಾಗಿರುವುದರಿಂದ ಯಾವತ್ತೋ ಅಲೆಗಳು ಬಂದು ಸ್ವಚ್ಛವಾಗಿದ್ದ ಜಾಗದಲ್ಲಿ ಇಂದು ಕುಳಿತರೆನ್ನುವುದೂ ಸರಿಯಲ್ಲ. ಒಟ್ಟಾರೆ ಈ ಎಲ್ಲ ಮಾಹಿತಿಗಳಿಂದ ತಿಳಿಯುವುದೇನೆಂದರೆ ಹಿಂದಿನ ಮಧ್ಯರಾತ್ರಿಯ ಅಥವಾ ಮಧ್ಯಾಹ್ನದ ಭರತದಲ್ಲಿ ಅಲೆಗಳಿಂದ ಸ್ವಚ್ಛವಾದ ಹಾಗೂ ಆಗ ಇಳಿತವಿದ್ದದ್ದರಿಂದ ತೀರವಾದ ಜಾಗದಲ್ಲಿ ಅಂದು ಪ್ರವಚನ ನಡೆಯಿತೆಂದು.

● ಆ ಜಾಗವು ವಿಶಾಲ(ವಿಕಟ)ವಿತ್ತೆಂದು ಹೇಳಿದ್ದಾರೆ. ಅಷ್ಟೇ ಅಲ್ಲದೇ **'ಜನಜಲಧಿಸ್ತಮಾಶು ಪರ್ಯೈತ್'** (16/17) ಎಂಬುದಾಗಿ, ಎಂದರೆ, 'ಜನಸಾಗರವು ಶ್ರೀಮದಾ-ಚಾರ್ಯರನ್ನು ಆವರಿಸಿತು' ಎಂದೂ ಹೇಳಿದ್ದಾರೆ. **'ನಿಷಣ್ಣಃ ವ್ಯಾಚಖ್ಯೌ'** ಎಂಬುದಕ್ಕೆ 'ಕುಳಿತವರಾಗಿ ವ್ಯಾಖ್ಯಾನಿಸಿದರು' ಎಂದರ್ಥ. ಎಂದರೆ ಸುದೀರ್ಘವ್ಯಾಖ್ಯಾನದ ಪೂರ್ಣಸಮಯಕ್ಕೂ ವಿಶಾಲವಾಗಿರುವಿಕೆಯು ಅನ್ವಯಿಸುತ್ತದೆ. ಆದ್ದರಿಂದ ಗ್ರಹಣದ ಸಮಯವು ಇಳಿತಸಮಯಕ್ಕೆ ಅತ್ಯಂತ ಸಮೀಪವಿರಬೇಕೆನ್ನುವುದು ಸ್ಪಷ್ಟ. ಆದ್ದರಿಂದ ಗ್ರಹಣ ಸಮಯದ ಅರ್ಧಕ್ಕೂ ಹೆಚ್ಚು ಭಾಗ ಭರತದ ಅರ್ಧದಲ್ಲಿ ಸಂಭವಿಸುವ 1260, 1268, 1292, 1293 (ಜನವರಿ), 1296, 1304 ಹಾಗೂ 1315 ರ ಗ್ರಹಣಗಳು ಸಂದೇಹಾತೀತವಾಗಿ ನಿರಾಕೃತವಾಗುವವು. ಇವುಗಳಲ್ಲಿ 1296ರ ಗ್ರಹಣವೂ ಒಂದು.

● ಸಮುದ್ರದ ಗಡಿ ಹಿಂದು-ಮುಂದಾಗುವುದು ಎರಡು ಬಗೆಯದು. ಕೆಲವು ಕ್ಷಣಗಳಿಗೊಮ್ಮೆ ಒದಗುವ ತರಂಗಗಳಿಂದ ಒಂದಾದರೆ ಭರತ-ಇಳಿತಗಳಿಂದಾಗುವುದು ಮತ್ತೊಂದು. **'ದ್ರುತಾಭಿಗಾಮೀ'** (16/14) ಎಂಬುದಕ್ಕೆ ವ್ಯಾಖ್ಯಾನಗಳಲ್ಲಿ ಸಮುದ್ರವು ಶ್ರೀಮದಾಚಾರ್ಯರ ಕಡೆ ಧಾವಿಸಿದ್ದು ತರಂಗರೂಪದಿಂದ ಎಂಬುದಾಗಿ ಅರ್ಥೈಸಿದ್ದಾರೆ. 1275ರ ಗ್ರಹಣವು ಸಮುದ್ರವು ಸತತವಾಗಿ ಮೇಲೇರುವ ಕಾಲದಲ್ಲಿ (ಇಳಿತದಿಂದ ಭರತ) ಸಂಭವಿಸಿರುವುದರಿಂದ ಎರಡನೆಯ ಬಗೆಯ ಅಭಿಗಮನವೂ ವಿವಕ್ಷಿತವೆಂದು ಭಾವಿಸಬಹುದು.

● ಸಮುದ್ರತೀರದಲ್ಲಿ ಮಾನವರ ಹಾಗೂ ಪ್ರಾಣಿಪಕ್ಷಿಗಳ ಒಡನಾಟವು ರಾತ್ರಿಕಾಲಕ್ಕಿಂತ ಸೂರ್ಯನಿರುವಾಗ ಹೆಚ್ಚು. ಆದ್ದರಿಂದ ಅದೇ ಮಧ್ಯಾಹ್ನದ ಭರತದಿಂದಾದ ಸಂಜೆಯ ತೀರದ ಸ್ವಚ್ಛತೆಗಿಂತ ಹಿಂದಿನ ಮಧ್ಯರಾತ್ರಿಯ ಭರತದಿಂದಾದ ಮುಂಜಾನೆಯ ತೀರದ ಸ್ವಚ್ಛತೆಯು ಹೆಚ್ಚಿರುತ್ತದೆ ಎಂಬುದನ್ನು ಪ್ರತ್ಯಕ್ಷ ಕಾಣಬಹುದು. ಈ ಕಾರಣದಿಂದಲೂ 1275ರ ಗ್ರಸ್ತೋದಯಗ್ರಹಣದ ಸಂಭಾವನೆಯು ಹೆಚ್ಚಾಗುವುದು.

● ಸಮುದ್ರದಲ್ಲಿನ ಭರತ-ಇಳಿತಗಳಿಗೆ ಚಂದ್ರಸೂರ್ಯರಿಬ್ಬರ ಗುರುತ್ವಾಕರ್ಷಣೆಯೂ ಕಾರಣ. ಆದರೂ ಭೂಮಿಗೆ ಚಂದ್ರನು ಸೂರ್ಯನಿಗಿಂತ ಬಹಳ ಸಮೀಪವಿರುವುದರಿಂದ ಚಂದ್ರನ ಪ್ರಭಾವವೇ ಹೆಚ್ಚು. ಚಂದ್ರನು ಭೂಮಿಯ ಸುತ್ತ ಸುತ್ತುವಾಗ ಭೂಮಿಯಿಂದ

---

1. 1000 ವರ್ಷಗಳಷ್ಟು ಹಿಂದಿನ ದಿನವೊಂದರಲ್ಲೂ ಭರತ-ಇಳಿತಗಳನ್ನು ಬಹಳ ನಿಖರವಾಗಿ ಲೆಕ್ಕ ಮಾಡಬಹುದೆಂಬುದು ಅಭಿಜ್ಞರ ಅಭಿಪ್ರಾಯ. ಇದು ಕಷ್ಟಸಾಧ್ಯವಾದರೂ ಈ ವಿಷಯದಲ್ಲಿ ಉಪಕಾರಿಯಾಗುವುದರಲ್ಲಿ ಸಂಶಯವಿಲ್ಲ.

ಆತನಿಗಿರುವ ದೂರದಲ್ಲಿ ಏರುಪೇರಾಗುತ್ತಿರುತ್ತದೆ. ಹಾಗೆ ಅತ್ಯಂತ ಸಮೀಪವಿರುವಾಗ ಭರತ–ಇಳಿತಗಳ ಪ್ರಮಾಣವು ಹೆಚ್ಚು. ಚಂದ್ರನು ದೂರ ಹೋಗುತ್ತಿದ್ದಂತೇ ಭರತ–ಇಳಿತಗಳ ಪ್ರಮಾಣ ಬಲು ಬೇಗ ಕ್ಷೀಣಿಸುವುದು. ಚಂದ್ರನು ಅತ್ಯಂತ ಸಮೀಪವಿರುವ ದಿನದಂದೇ ಅಮಾವಾಸ್ಯೆ / ಹುಣ್ಣಿಮೆಯೂ ಆಗಿದ್ದರೆ ಆಗ ಭಾರೀ ಪ್ರಮಾಣದ ಭರತ–ಇಳಿತಗಳು ಉಂಟಾಗುವವು.[1] ಅಂದು ಅಲೆಗಳಿಂದ ಸ್ವಚ್ಛವೂ ಆದ ಹಾಗೂ ಈಗ ತೀರವೂ ಆದ ಪ್ರದೇಶವು ಬಹಳ ವಿಶಾಲವಾಗಿ ಲಭಿಸುತ್ತದೆ. ವಿಶೇಷವೆಂದರೆ 1275ರ ಗ್ರಹಣದಿಂದ 21 ಘಂಟೆಗೂ ಕಡಿಮೆ ಅವಧಿಯಲ್ಲಿಯೇ ಚಂದ್ರನು ಭೂಮಿಗೆ ಅತ್ಯಂತ ಸಮೀಪ ಬಂದಿದ್ದನು ! ಅಂದು ಭೂಮಧ್ಯದಿಂದ ಚಂದ್ರನ ಮಧ್ಯಕ್ಕಿದ್ದ ದೂರ[2] ಕೇವಲ 358580 ಕಿ.ಮಿ. ಇದು ಸಾಮಾನ್ಯವಾಗಿ ಪ್ರತಿಬಾರಿ ಚಂದ್ರನು ಅತ್ಯಂತ ಸಮೀಪ ಬಂದಾಗ ಇರುವ ದೂರಕ್ಕಿಂತಲೂ ಕಡಿಮೆ ! [ಜ]ದಲ್ಲಿ ನೀಡಿರುವ ಗ್ರಹಣಗಳ ಪಟ್ಟಿಯಲ್ಲಿ ಬೇರೆ ಯಾವ ಗ್ರಹಣವೂ ಚಂದ್ರನು ಸಮೀಪವಾಗಿರುವ ಸಮಯಕ್ಕೆ ಇಷ್ಟು ಸಮೀಪವಿಲ್ಲ. ಆದ್ದರಿಂದ, ಅಂದಿನ ಗ್ರಹಣವು 1275ರದ್ದಾದಲ್ಲಿ ಸುಮಧ್ವವಿಜಯದ ನಿರೂಪಣೆ ಬಹಳ ಸೊಗಸಾಗಿ ಕೂಡುತ್ತದೆ.

● ಸೂರ್ಯಗ್ರಹಣದ ಪ್ರಮಾಣವನ್ನು ಸೂರ್ಯನ ವ್ಯಾಸದ (diameter) ಎಷ್ಟು ಪಾಲು ಚಂದ್ರನಿಂದ ಗ್ರಾಸಗೊಂಡಿದೆ ಎಂಬುದಾಗಿ ಅಳೆಯುತ್ತಾರೆ. ಈ ಅಳತೆಯಲ್ಲಿ 1257 ರಿಂದ 1796 ರ ನಡುವೆ (5 ಶತಮಾನಕ್ಕಿಂತಲೂ ಹೆಚ್ಚು) ಇಡೀ ಭೂಮಿಯ ಮೇಲೆ ಕಂಡ ಎಲ್ಲ ಸೂರ್ಯಗ್ರಹಣಗಳಲ್ಲೂ **ಅತ್ಯುತ್ತಮ ಪ್ರಮಾಣದ** ಸೂರ್ಯಗ್ರಹಣವೆಂದರೆ ಅದು 1275ರ ಗ್ರಹಣವೆಂದು [N] ತಿಳಿಸುತ್ತದೆ.

ಇವೆಲ್ಲ ಕಾರಣಗಳಿಂದಲೂ 1275ರ ಗ್ರಸ್ತೋದಯಗ್ರಹಣವೇ ಅತ್ಯಂತ ಸಂಭಾವಿತವೆಂದಾಗುವುದು. ಇದರಿಂದ 'ಶ್ರೀಮದಾಚಾರ್ಯರನ್ನು ನೋಡುತ್ತಲೇ ಸಜ್ಜನರ ಕಂಗಳು ಸಹಜವಾಗಿಯೇ ಅರಳಿದವು (**ಫುಲ್ಲಾಕ್ಷಾಃ**); ದುರ್ಜನರ ಕಂಗಳು ಹಾಗಾಗಲಿಲ್ಲ' (ಶ್ಲೋಕ 16/12) ಎನ್ನುವುದು ಪ್ರಸಂಗೋಚಿತವೂ ಆಗುವುದು. (ಸೂರ್ಯೋದಯದ ವೇಳೆ) ಸೂರ್ಯನನ್ನು ಕಂಡಾಕ್ಷಣ ಕೆಲವು ಹೂಗಳು ಸಹಜವಾಗಿಯೇ ಅರಳುವವು. ಕೆಲವು ಸಹಜವಾಗಿಯೇ ಮುದುಡುವವಲ್ಲವೇ !

## ಅಭ್ಯಧಿಕಾಶಂಕಾನಿರಾಸ

ಓದುಗರಲ್ಲಿರಬಹುದಾದ ಮತ್ತಷ್ಟು ಸಂದೇಹಗಳನ್ನು ಇಲ್ಲಿ ಆಶಂಕಿಸಿ ಅವುಗಳಿಗೆ ಸಮಾಧಾನವನ್ನು ನೀಡಲಾಗಿದೆ.

● ಶ್ರೀಮದಾಚಾರ್ಯರ ಚಾತುರ್ಮಾಸ್ಯ ಸಂಪೂರ್ಣ 4 ತಿಂಗಳದ್ದೋ ಅಲ್ಲವೋ? ಚಾತುರ್ಮಾಸ್ಯದಲ್ಲಾದ ಗ್ರಹಣಗಳನ್ನು ನಿರಾಕರಿಸುವುದಕ್ಕೆ ಇದು ಮುಖ್ಯ. ಶ್ರೀಮದಾಚಾರ್ಯರು ಕೈಗೊಂಡ ಇತರ ಚಾತುರ್ಮಾಸ್ಯಗಳ ಉಲ್ಲೇಖಗಳು ಸಂಪೂರ್ಣ 4 ತಿಂಗಳುಗಳದ್ದೆಂದು ಸೂಚಿಸುತ್ತವೆ : ರಾಮೇಶ್ವರದಲ್ಲಿ – 'ಉವಾಸ ಮಾಸಾಂ**ಶ್ಚತುರೋ** ಮಹಾಮನಾಃ' (5/46); ಏಕವಾಟದಲ್ಲಿ – 'ಚಕ್ರೇ ವಾಸಂ **ಶೇಷಶಯ್ಯೇ ಶಯಾನೇ**' (15/140). ಯತಿಧರ್ಮದ ಬಗೆಗಿನ ಅನೇಕ ಪ್ರಮಾಣಗಳು ಇದನ್ನು ಸಮರ್ಥಿಸುತ್ತವೆ. ಉದಾಹರಣೆಗೆ, ಯತಿಪ್ರಣವಕಲ್ಪದ ತರಂಗಿಣೀ ರಾಮಾಚಾರ್ಯರ ವ್ಯಾಖ್ಯಾನದಲ್ಲಿ –

---

1. www.wikipedia.org/wiki/Perigean_spring_tide
2. Occult 4.1.0.0 ಹಾಗೂ www.caricoos.org/drupal/lunar_perigee

'ಮಾಸಾಂಶ್ಚ ಚತುರೋ ವಸೇತ್', 'ಅಷ್ಟೌ ಮಾಸಾನ್ ವಿಹಾರಃ ಸ್ಯಾತ್ ಯತೀನಾಂ ನಿಯತಾತ್ಮನಾಮ್ । ಏಕತ್ರ ಚತುರೋ ಮಾಸಾನ್ ವಾರ್ಷಿಕಾನ್ ನಿವಸೇತ್ ಪುನಃ ॥', 'ಸಮಾಸವ್ಯಾಸಯೋಗೇನ ಚಾತುರ್ಮಾಸ್ಯಂ ದ್ವಿಧಾ ಮತಮ್ । ಅಶಕ್ತಶ್ಚೇತ್ ಸಮಾಸಃ ಸ್ಯಾತ್ ವ್ಯಾಸಃ ಶಕ್ತಯತೇಃ ಸದಾ ॥' ಎಂದಿದೆ. ಆದ್ದರಿಂದ ಅಂದಿನ ಗ್ರಹಣವು ಚಾತುರ್ಮಾಸ್ಯದಲ್ಲಿ ಸಂಭವಿಸಿದ್ದಲ್ಲವೆಂಬುದು ಸಿದ್ಧ.

● 1275ರ ಗ್ರಹಣವು ಸಂಭವಿಸಿದ್ದು ಮಂಗಳವಾರ. 'ಭೃಗೌ ಭೌಮದಿನೇ ಸ್ನಾನಂ ನಿತ್ಯಮೇವ ವಿವರ್ಜಯೇತ್' ಎಂದು ಮಂಗಳವಾರ ಸಮುದ್ರಸ್ನಾನವನ್ನು ನಿಷೇಧಿಸಿರುವುದಕ್ಕೆ 'ಸೂರ್ಯಗ್ರಹಣಕಾಲೇ ತು ನಾನ್ಯದನ್ವೇಷಿತಂ ಭವೇತ್ । ಸೂರ್ಯಗ್ರಹಣಕಾಲೇನ ಸಮೋ ನಾನ್ಯಃ ಕದಾಚನ । ನ ಮಾಸತಿಥಿ**ವಾರಾ**ದಿಶೋಧನಂ ಸೂರ್ಯಪರ್ವಣಿ ॥' ಮುಂತಾದ ವಾಕ್ಯಗಳು ಸೂರ್ಯಗ್ರಹಣಕಾಲದಂದು ವಾರ ಮೊದಲಾದವುಗಳನ್ನು ನೋಡಬೇಕಿಲ್ಲವೆಂಬುದಾಗಿ ಅಪವಾದವನ್ನು ಹೇಳಿವೆ.

● ಗೂಢಭಾವಪ್ರಕಾಶಿಕೆಯಲ್ಲಿ 'ಸೂರ್ಯಗ್ರಹೇ **ವ್ಯಾಖ್ಯಾನಕಾಲೇ** ತರಂಗೈರುದ್ಘೋಷಯಂತಮಬ್ಧಿಮಂಗೇನ ದೃಷ್ಟ್ವಾ ತಟಾಕಜಲವನ್ನಿಶ್ಚಲಮಕರೋದಿತಿ ಭಾವಃ ।' ಎಂದಿದೆ. ಇದರ ಭಾವ 'ಸೂರ್ಯಗ್ರಹಣವಾದಾಗ ವ್ಯಾಖ್ಯಾನಸಮಯದಲ್ಲಿ ಅಲೆಗಳಿಂದ ಗರ್ಜಿಸುತ್ತಿದ್ದ ಸಮುದ್ರದ ಮೇಲೆ ಕಟಾಕ್ಷ ಬೀರಿ ಕೆರೆಯಂತೆ ನಿಶ್ಚಲವಾಗಿಸಿದರು' ಎಂದು. ಸುಮಧ್ವವಿಜಯ ಹಾಗೂ ಗೂಢಭಾವಪ್ರಕಾಶಿಕೆಯೇ ತಿಳಿಸುವಂತೆ ಸಮುದ್ರಸ್ತಂಭನವು ಗ್ರಹಣಮೋಕ್ಷಸ್ನಾನದ ವೇಳೆ ಎಂಬುದನ್ನು ಹಿಂದೆ ತಿಳಿಸಲಾಗಿತ್ತು. ಆ ಸ್ನಾನವಾದರೂ ವ್ಯಾಖ್ಯಾನದ ಬಳಿಕವೆಂಬುದು ಸರ್ವಸಂಪ್ರತಿಪನ್ನ. ಆದ್ದರಿಂದ 'ವ್ಯಾಖ್ಯಾನಕಾಲೇ' (ವ್ಯಾಖ್ಯಾನಸಮಯದಲ್ಲಿ) ಎಂಬುದು 'ಉದ್ಘೋಷಯಂತಂ' (ಘರ್ಜಿಸುತ್ತಿದ್ದ) ಎಂಬುದಕ್ಕೆ ಅನ್ವಯವಾಗುವುದೇ ಹೊರತು 'ನಿಶ್ಚಲಮಕರೋತ್' (ನಿಶ್ಚಲವಾಗಿಸಿದರು) ಎಂಬುದಕ್ಕಲ್ಲ.

ವ್ಯಾಖ್ಯಾನದ ವೇಳೆ ಸಮುದ್ರ ಗರ್ಜಿಸಿದ್ದಕ್ಕೂ ಮೋಕ್ಷಸ್ನಾನದ ವೇಳೆ ಅದನ್ನು ನಿಶ್ಚಲವಾಗಿಸಿದ್ದಕ್ಕೂ ಏನು ಸಂಬಂಧ? ಹೀಗೊಂದು ಸಂಭಾವನೆ : ಸಮುದ್ರತೀರದಲ್ಲೇ, ಗ್ರಹಣದ ಬಹುಭಾಗ ವ್ಯಾಖ್ಯಾನ ನಡೆದದ್ದು. ಆಗ ಭಾರೀ ಅಲೆಗಳಿಂದ ಸಮುದ್ರವು ಗರ್ಜಿಸುತ್ತಿತ್ತು. ಅಂದಿನ ಗ್ರಹಣವು 1275ರದ್ದಾದರಂತೂ ಸಮುದ್ರಮಟ್ಟವು ಇಳಿತದಿಂದ ಭರತದ ಕಡೆಗೆ ಏರುವ ಸಮಯವಾದ್ದರಿಂದ ತೀರದಲ್ಲೇ ಕುಳಿತ ಜನತೆಗೆ ಕ್ರಮೇಣ ಹತ್ತಿರವಾದದ್ದರಿಂದ ಸಮುದ್ರವು ಇನ್ನೂ ಘೋರವಾಗಿ ಕಂಡಿರುತ್ತದೆ. ಶ್ರೀಮದಾಚಾರ್ಯರ ಪರಿಚಯವಿಲ್ಲದ ದುರ್ಜನರು **ವ್ಯಾಖ್ಯಾನಸಮಯದಿಂದಲೇ** 'ಇಂತಹ ಅತ್ಯುತ್ಕಟವಾದ ಸಮುದ್ರದಲ್ಲಿ ಮೋಕ್ಷಸ್ನಾನ ಮಾಡುವಾಗ ವಯೋವೃದ್ಧರೂ ಆದ ಆಚಾರ್ಯರು ಖಚಿತವಾಗಿ ಬಿದ್ದಾರು' ಎಂಬುದಾಗಿ ಭಾವಿಸಿರಬೇಕು. ವ್ಯಾಖ್ಯಾನದ ನಂತರ ಸ್ನಾನದ ವೇಳೆ ಎಲ್ಲ ಜನರೂ ಬೀಳುವುದನ್ನು ಕಂಡು ಅಪಹಾಸ್ಯವನ್ನೂ ಮಾಡಿದ ದುಷ್ಟರು ದೊಡ್ಡ ಅಲೆಯೊಂದರಿಂದ ಶ್ರೀಮದಾಚಾರ್ಯರು ನಿಗೂಢರಾದಾಗ ಈಗ ಆಚಾರ್ಯರೂ ಬಿದ್ದರೆಂದು ನಕ್ಕೂ ಬಿಟ್ಟರು. ಆದರೆ ಶ್ರೀಮದಾಚಾರ್ಯರು ಅವರ ಎಣಿಕೆಯನ್ನು ಹುಸಿಯಾಗಿಸಿ ತಮ್ಮ ಕಟಾಕ್ಷಕ್ಷೇಪಮಾತ್ರದಿಂದಲೇ ಆ ಬಿರುಸಿನ ಕಡಲ ಸ್ತಂಭನ ಮಾಡಿದರು ಎಂಬರ್ಥದಲ್ಲಿ 'ವ್ಯಾಖ್ಯಾನಕಾಲೇ ಉದ್ಘೋಷಯಂತಂ ಅಬ್ಧಿಂ ನಿಶ್ಚಲಮಕರೋತ್' ಎಂಬುದು ಸಾಧು. ಇಲ್ಲಿ 'ಉದ್ಘೋಷಯಂತಂ' ಎಂಬಲ್ಲಿ ಧ್ವನಿಯಿಂದ ಅನುಮಿತವಾಗುವ ಅಲೆಗಳ ರಭಸವನ್ನು ಸ್ವೀಕರಿಸಬೇಕು.

## ಸಾರಾಂಶ

ಸೂರ್ಯಗ್ರಹಣ ಕುರಿತ ವಿಚಾರಗಳು ನಾಲ್ಕು ಸಂಚಿಕೆಗಳಲ್ಲಿ ವಿಕ್ಷಿಪ್ತವಾಗಿ ವರ್ಣಿತವಾಗಿರುವುದರಿಂದ ಓದುಗರ ಸುಲಭ ಅವಗಾಹನೆಗೆಂದು ಇಲ್ಲಿ ಅವುಗಳ ಮಥಿತಾರ್ಥವನ್ನು ನೀಡಲಾಗಿದೆ.

ಶ್ರೀಮದಾಚಾರ್ಯರ ಕಾಲವು ಕ್ರಿ.ಶ. 1200ರಿಂದ (ಸುಮಾರು) 1278-80 ಅಥವಾ ಕ್ರಿ.ಶ. 1238ರಿಂದ 1318 ಎಂಬುದರಲ್ಲಿ ಇಂದು ಬಹುತೇಕ ಎಲ್ಲ ಮಾಧ್ವರಲ್ಲೂ ಸಂಪ್ರತಿಪತ್ತಿ ಇದೆ. ಇವೆರಡರಲ್ಲಿ ಯಾವುದು ಶ್ರೀಮದಾಚಾರ್ಯರ ಕಾಲ ಎನ್ನುವುದರ ಬಗ್ಗೆ ಜಿಜ್ಞಾಸೆ. ಈ ವಿಚಾರದಲ್ಲಿ, ಅನೇಕ ಸಾಕ್ಷ್ಯಾಧಾರಗಳ ನಡುವೆ ಸುಮಧ್ವವಿಜಯದಲ್ಲಿ ಉಲ್ಲೇಖಿಸಿರುವ ಸೂರ್ಯಗ್ರಹಣದ ಪಾತ್ರ ಏನೆಂಬುದು ಈ ಲೇಖನಸರಣಿಯ ವಸ್ತು.

- ಈ ಗ್ರಹಣಪ್ರಸಂಗವು ಸಂಭವಿಸಿದ್ದು ಕಣ್ವತೀರ್ಥದಲ್ಲಿ - ಸುಮಧ್ವವಿಜಯ. ಕ್ರಿ.ಶ. 1260ರಿಂದ 1320ರ ನಡುವೆ ಕಣ್ವತೀರ್ಥದಲ್ಲಿ ಒಟ್ಟು 19 ಸೂರ್ಯಗ್ರಹಣಗಳು ಕಂಡಿವೆ. ಅವುಗಳಲ್ಲಿ ಯಾವೊಂದೂ ಕಣ್ವತೀರ್ಥದಲ್ಲಿ ಪೂರ್ಣಸೂರ್ಯಗ್ರಹಣವಾಗಿ ಕಂಡಿಲ್ಲ - [N].
- ಗ್ರಹಣ ಕಂಡದ್ದು ಚಾತುರ್ಮಾಸ್ಯದಲ್ಲಲ್ಲ - ಗೂಢಭಾವಪ್ರಕಾಶಿಕಾ. ಈ ಸುಳಿವಿನಿಂದ ಮೇಲಿನ 19 ಗ್ರಹಣಗಳಲ್ಲಿ 7 ಗ್ರಹಣಗಳು ಅಸಂಭಾವಿತವೆಂದಾಗುವುದು.
- ಗ್ರಹಣದ ನಂತರವೇ ಗ್ರೀಷ್ಮಋತು ಬರುವುದರಿಂದ ಗ್ರಹಣವು ವೈಶಾಖ ಅಥವಾ ಜ್ಯೇಷ್ಠ ಮಾಸದ ಅಮಾವಾಸ್ಯೆಯಂದೇ ಸಂಭವಿಸಿರಬೇಕು - ಸುಮಧ್ವವಿಜಯ ಹಾಗೂ ಗೂಢಭಾವಪ್ರಕಾಶಿಕಾ. ಈ ಸುಳಿವಿನಿಂದ ಉಳಿದ 12ರಲ್ಲಿ 8 ಗ್ರಹಣಗಳು ಅಸಂಭಾವಿತ.
- ಸುಮಧ್ವವಿಜಯದಲ್ಲಿ ಗ್ರಹಣಪ್ರಸಂಗದಲ್ಲಿ ಮಾಡಿದರೆಂದು ಹೇಳಿರುವ ಐತರೇಯಶ್ರುತಿಯ ವ್ಯಾಖ್ಯಾನವು ಗ್ರಹಣಹಿಡಿದ ಸಂದರ್ಭದಲ್ಲೇ ಮಾಡಿದ್ದು - ಗೂಢಭಾವಪ್ರಕಾಶಿಕಾ.
- ಆಗ ಸಮುದ್ರಮಟ್ಟದಲ್ಲಿ ಇಳಿತವಿತ್ತು (Low-tide) - ಸುಮಧ್ವವಿಜಯ. ಈ ಸುಳಿವಿನಿಂದ ಉಳಿದ 4 ಗ್ರಹಣಗಳಲ್ಲೂ ಭರತದ ಸಮಯದಲ್ಲಿ ಬರುವ 2 ಗ್ರಹಣಗಳು (1304 ಮತ್ತು 1315) ಅಸಂಭಾವಿತವೆಂದಾಗಿ 2 ಮಾತ್ರ ಉಳಿಯುವವು.
- 1296ರ ಗ್ರಹಣವು ಮೇಲಿನ ಮೂರೂ ಕಾರಣಗಳಿಂದ ಅಸಂಭಾವಿತ.
- ಕೋಷ್ಟಕ-2 ರಲ್ಲಿ ಯಾವ ಯಾವ ಗ್ರಹಣಗಳು ಎಷ್ಟು ಪರೀಕ್ಷೆಗಳಲ್ಲಿ ಉತ್ತೀರ್ಣವಾಗುತ್ತವೆ (✓) ಹಾಗೂ ಆಗುವುದಿಲ್ಲ (✗) ಎನ್ನುವುದನ್ನು ತೋರಿಸಲಾಗಿದೆ.
- ಒಟ್ಟಾರೆ, ಅಸಂಭಾವಿತವಾಗದ ಪಟ್ಟಿಯಲ್ಲಿರುವುದು ಕೇವಲ 2 ಗ್ರಹಣಗಳು : 1267 ಮೇ 25 ಹಾಗೂ 1275 ಜೂನ್ 25. ಇವೆರಡರಲ್ಲಿ ಅಂದಿನ ಗ್ರಹಣವು ಯಾವುದಾದರೂ 1238-1318 ಎನ್ನುವ ಪಕ್ಷಕ್ಕೆ ಬಾಧಕವೇ.
- ಬದರಿಕಾಶ್ರಮಗಮನಕ್ಕೆ ದಶಕಕ್ಕೂ ಹೆಚ್ಚು ಅಂತರವಿರುವ 1267ರ ಗ್ರಹಣವೂ ಅಸಂಭಾವಿತವೆನ್ನಬಹುದು. 1275 ರ ಗ್ರಹಣವು ಅನೇಕ ಗುಣಗಳನ್ನೂ ಹೊಂದಿದೆ :
- 1275ರ ಗ್ರಹಣದಂದು ಚಂದ್ರನು ಭೂಮಿಗೆ ಅತ್ಯಂತ ಸಮೀಪವಿರುವುದರಿಂದ ಸುಮಧ್ವವಿಜಯದಲ್ಲಿ ಹೇಳಿರುವ ಭರತ-ಇಳಿತಗಳು ಹೆಚ್ಚು ಅರ್ಥಪೂರ್ಣವಾಗುತ್ತವೆ.
- 1275ರ ಸೂರ್ಯಗ್ರಹಣವು ಗ್ರಸ್ತೋದಯವಾಗಿದ್ದು ಸುಮಧ್ವವಿಜಯದಲ್ಲಿ ಗ್ರಹಣಸ್ಪರ್ಶಕಾಲದ ಸ್ನಾನವನ್ನು ವರ್ಣಿಸದಿರುವುದಕ್ಕೆ ಸೂಕ್ತ ವಿವರಣೆ ನೀಡುತ್ತದೆ.

| ದಿನ | ಚಾತುರ್ಮಾಸ್ಯ ಆಗಬಾರದು | ವೈಶಾಖ/ ಜ್ಯೇಷ್ಠ | ಭರತದಲ್ಲಿ ಆಗಬಾರದು | ಒಟ್ಟು ಫಲಿತಾಂಶ |
|---|---|---|---|---|
| 12/04/1260 | ✓ | ✗ | ✗ | ✗ |
| 25/05/1267 | ✓ | ✓ | ✓ | ✓ |
| 06/11/1268 | ✓ | ✗ | ✗ | ✗ |
| 25/06/1275 | ✓ | ✓ | ✓ | ✓ |
| 05/08/1282 | ✗ | ✗ | ✓ | ✗ |
| 23/03/1289 | ✓ | ✗ | ✓ | ✗ |
| 16/09/1289 | ✗ | ✗ | ✓ | ✗ |
| 05/09/1290 | ✗ | ✗ | ✓ | ✗ |
| 21/01/1292 | ✓ | ✗ | ✗ | ✗ |
| 09/01/1293 | ✓ | ✗ | ✗ | ✗ |
| 05/07/1293 | ✗ | ✗ | ✓ | ✗ |
| 28/10/1296 | ✗ | ✗ | ✗ | ✗ |
| 21/02/1300 | ✓ | ✗ | ✓ | ✗ |
| 15/08/1300 | ✗ | ✗ | ✓ | ✗ |
| 09/12/1303 | ✓ | ✗ | ✓ | ✗ |
| 04/06/1304 | ✓ | ✓ | ✗ | ✗ |
| 03/04/1307 | ✓ | ✗ | ✓ | ✗ |
| 04/05/1315 | ✓ | ✓ | ✗ | ✗ |
| 06/09/1317 | ✗ | ✗ | ✓ | ✗ |

**ಕೋಷ್ಟಕ-2 : ಕ್ರಿ.ಶ. 1260 ರಿಂದ 1320ರ ವರೆಗೆ ಕಣ್ವತೀರ್ಥದಲ್ಲಿ ಗೋಚರಿಸಿದ ಸೂರ್ಯಗ್ರಹಣಗಳ 'ಅಂಕಪಟ್ಟಿ'.**

- ಅಂದು ಗ್ರಸ್ತೋದಯವಾಗಿರುವುದರಿಂದಲೇ "ಸಂಘಾತ್ಯೈಃ ..." ಎಂಬ ಶ್ಲೋಕದ ಪೂರ್ವೋತ್ತರಾರ್ಧಗಳಿಗೆ ವಿಶೇಷಾರ್ಥದ ಲಾಭವಾಗುತ್ತದೆ.
- 1275ರ ಸೂರ್ಯಗ್ರಹಣಕ್ಕೆ ಭೂಷಣವಾಗಿ ಹಿಂದಿನ ಹಾಗೂ ಮುಂದಿನ ಎರಡೂ ಹುಣ್ಣಿಮೆಗಳೂ ಚಂದ್ರಗ್ರಹಣವಾಗಿವೆ. ಅವೆರಡೂ ಕಣ್ವತೀರ್ಥದಲ್ಲಿ ಕಂಡಿವೆ. 1275ರ ಸೂರ್ಯಗ್ರಹಣದ ಹಿಂದಿನ ಅಮಾವಾಸ್ಯೆಯು ಶುಕ್ರಗ್ರಹ ನಿಮಿತ್ತವಾದ ಮತ್ತೊಂದು ಸೂರ್ಯಗ್ರಹಣವಾಗಿದೆ.

- 1275ರದ್ದು ಕಣ್ವತೀರ್ಥದಲ್ಲಿ ಪೂರ್ಣಸೂರ್ಯಗ್ರಹಣಕ್ಕೆ ಬಹಳ ಹತ್ತಿರವಾದ ಗ್ರಹಣ.
- ಇನ್ನೂ ಅನೇಕಾನೇಕ ಪೂರಕ ಸಂಭಾವನೆಗಳು ...
- ಸುಮಧ್ವವಿಜಯದ ಅಂತಿಮಭಾಗದಲ್ಲಿ ವರ್ಣಿತವಾದ ಈ ಪ್ರಸಂಗವು ಬದರಿಕಾಶ್ರಮ-ಪ್ರಸಂಗಕ್ಕೆ ಹತ್ತಿರವಿರಬೇಕೆನ್ನುವುದು ನ್ಯಾಯೋಚಿತ. ಇದಕ್ಕೆ ಯಾವುದೇ ಬಾಧಕವಿಲ್ಲ, ಅನೇಕ ಸಾಧಕಪ್ರಮಾಣಗಳಿವೆ. ಬದರಿಕಾಶ್ರಮಗಮನಕಾಲವು 1278-80 ಎನ್ನುವುದು ಹಾಗೂ ಅಂದಿನ ಗ್ರಹಣವು 1275ರದ್ದೆನ್ನುವುದು ಪರಸ್ಪರ ಪೋಷಕವಾಗಿದೆ.

ಆದ್ದರಿಂದ **1275**ರ ಗ್ರಹಣವೇ ಸುಮಧ್ವವಿಜಯದಲ್ಲಿ ಉಲ್ಲೇಖವಾಗಿರುವುದೆಂದು ಸಾಬೀತಾಗುವುದಲ್ಲದೇ ಶ್ರೀಮದಾಚಾರ್ಯರ ಕಾಲವು **1200** ರಿಂದ **1278-80** ಎನ್ನುವುದು **ನಿರವಕಾಶವಾಗಿ ಸಿದ್ಧ.** ಇದು ಶ್ರೀಮದಾಚಾರ್ಯರದೇ ವಾಕ್ಯಗಳನ್ನೊಳಗೊಂಡ ಇನ್ನೂ ಅನೇಕಾನೇಕ ಪ್ರಬಲಕಾರಣಗಳಿಂದ ಸಿದ್ಧವಾಗುವ ಅವರ ಕಾಲಕ್ಕೆ ಸಂವಾದಿಯಾಗಿದೆ.[1] ಅಷ್ಟೇ ಅಲ್ಲದೇ, ಸುಮಧ್ವವಿಜಯದ ಎಲ್ಲ ನಿರೂಪಣೆಗಳಿಗೂ ಹೊಂದುವ ಗ್ರಹಣವೊಂದು ಉಪಲಬ್ಧವಾಗಿರುವುದು ಅದರ ಐತಿಹಾಸಿಕತೆಗೆ ಸಾಕ್ಷಿಯಾಗಿದೆ.

ಉಪಯುಕ್ತ ಮಾಹಿತಿಗಳನ್ನು ನೀಡಿದವರು : Prof. Satish Shetye, National Institute of Oceanography, Goa; Prof. Shylaja B. S., Jawaharlal Nehru Planetarium, Bangalore; Prof. Philip L. Woodworth, Proudman Oceanographic Laboratory, Liverpool; Prof. Pranesh M. R. (Rtd.), Department of Ocean Engineering, IIT, Madras; Prof. Shankar, D., National Institute of Oceanography, Goa; Prof. Arindam Chakraborty, Centre for Atmospheric and Oceanic Sciences, IISc, Bangalore. ಕಣ್ವತೀರ್ಥದ ಭೀಕರ ಸಮುದ್ರದಲ್ಲಿ ಭರತ-ಇಳಿತಗಳನ್ನು ಅಳೆಯುವ ಅರ್ಧದಿನದ ಸತತ ಕಾರ್ಯಾಚರಣೆಯಲ್ಲಿ ಹಗಲಿರುಳೆನ್ನದೇ ಮಳೆಬಿಸಿಲೆನ್ನದೇ ಸಹಕರಿಸಿದವರು ಶ್ರೀ ಆರ್. ಸುಧೀಂದ್ರರವರು ಹಾಗೂ ನನ್ನ ಧರ್ಮಪತ್ನಿ ಶ್ರೀಮತಿ ಶೃತಿ. ಸೂಕ್ತವ್ಯವಸ್ಥೆಗಳನ್ನು ಕಲ್ಪಿಸಿದವರು ಶ್ರೀರಮೇಶ ಉಪಾಧ್ಯಾಯರು (ಕಣ್ವತೀರ್ಥಮಠ), ಶ್ರೀಗೋಪಾಲಶೆಟ್ಟಿಯವರು ಹಾಗೂ ಶ್ರೀಅರುಣಾಚಲಶಾಸ್ತ್ರಿಯವರು. ಈ ಯೋಜನೆಯು ಕಾರ್ಯರೂಪಕ್ಕೆ ಬರಲು ಅನೇಕ ಬಂಧುಮಿತ್ರರು ಸಲಹೆಗಳನ್ನು ನೀಡಿದ್ದಾರೆ. ಇವರೆಲ್ಲರಿಗೂ ಕೃತಜ್ಞನಾಗಿದ್ದೇನೆ.

ಸ್ಫೂರ್ತಿದಾಯಕ ಸ್ಪಂದನದಿಂದ ಈ ವಾದಕಥೆಯನ್ನು ಉಜ್ಜ್ವಲಗೊಳಿಸಿದ ಪೂಜ್ಯರಾದ ಶ್ರೀಶ್ರೀವಿಶ್ವನಂದನತೀರ್ಥಶ್ರೀಪಾದರಿಗೆ ಭಕ್ತಿಪೂರ್ವಕ ವಿಶೇಷ ಕೃತಜ್ಞತೆಗಳು.

*****

‘ತಿಥಿನಿರ್ಣಯಪ್ರಾಮಾಣ್ಯ (ಡಾ. ವ್ಯಾಸನಕೆರೆ ಪ್ರಭಂಜನಾಚಾರ್ಯರ ಲೇಖನಕ್ಕೆ ಪ್ರತಿಕ್ರಿಯೆ)’ ಎಂಬ ಶ್ರೀಶ್ರೀವಿಶ್ವನಂದನತೀರ್ಥಶ್ರೀಪಾದರ ಲೇಖನವು ಮುಂದಿನ ಸಂಚಿಕೆಯಲ್ಲಿ ಪ್ರಕಟವಾಗಲಿದೆ.

1. ಡಾ. ವ್ಯಾಸನಕೆರೆ ಪ್ರಭಂಜನಾಚಾರ್ಯ, ಶ್ರೀಮಧ್ವಾಚಾರ್ಯರ ಕಾಲನಿರ್ಣಯ, ಶ್ರೀವ್ಯಾಸಮಧ್ವ ಸಂಶೋಧನ ಪ್ರತಿಷ್ಠಾನ, 2004.

# ಕಣ್ವತೀರ್ಥದಲ್ಲೊಂದು ಅಪರೂಪದ ವಜ್ರದುಂಗುರ !

**- ಜಯಂತ ವ್ಯಾಸನಕೆರೆ**

ಭಗವಂತನ ವೈವಿಧ್ಯಮಯವಾದ ಸೃಷ್ಟಿಯಲ್ಲಿ ಸೂರ್ಯಚಂದ್ರಮಂಡಲಗಳು ಒಂದು ವಿಶಿಷ್ಟವಾದ ಸ್ಥಾನವನ್ನಲಂಕರಿಸಿವೆ. ಅವೆರಡಕ್ಕೂ ಸಂಬಂಧಪಟ್ಟ , ಸಾಧನೆಗೆ ಉತ್ತಮ ಅವಕಾಶವನ್ನೊದಗಿಸುವವು ಸೂರ್ಯಚಂದ್ರಗ್ರಹಣಗಳು. ಇಂತಹ ಸುವರ್ಣಾವಕಾಶವನ್ನು ಸದುಪಯೋಗಪಡಿಸಿಕೊಳ್ಳಬೇಕೆಂದು ತೋರಿಸಲು ಸ್ವತಃ ಶ್ರೀಮದಾಚಾರ್ಯರು ಕಣ್ವತೀರ್ಥದಲ್ಲಿ ಸೂರ್ಯಗ್ರಹಣವನ್ನು ಆಚರಿಸಿದ ವಿವರ ಸುಮಧ್ವವಿಜಯಾದಿಗಳಲ್ಲಿ ವರ್ಣಿತವಾಗಿದೆ. (ಆ ಸೂರ್ಯಗ್ರಹಣವು ಶ್ರೀಮದಾಚಾರ್ಯರ ಬದರಿಕಾಶ್ರಮಗಮನಕ್ಕೆ ಹತ್ತಿರವಾದ **1275**ರ **ಜೂನ್ 25**ರದ್ದೆಂದು ಈ ಹಿಂದೆ ಸಮರ್ಥಿಸಲಾಗಿದೆ).

ಅಂದಿನ ಘಟನೆಗಳನ್ನು ಸ್ಮರಿಸಿಕೊಳ್ಳುವ ಸುಯೋಗವೊಂದು ನಮಗೀಗ ಲಭ್ಯವಾಗಿದೆ. **2019**ರ **ಡಿಸೆಂಬರ್ 26**ರಂದು ಕೇತುಗ್ರಸ್ತ ಸೂರ್ಯಗ್ರಹಣವೊಂದು ಕಣ್ವತೀರ್ಥದಲ್ಲಿ **ಪೂರ್ಣವಾಗಿ** ಗೋಚರಿಸಲಿದೆ.[1] ಭಾರತೀಯ ಕಾಲಮಾನದಲ್ಲಿ (ಕಣ್ವತೀರ್ಥದಲ್ಲಿ) : ಗ್ರಹಣಸ್ಪರ್ಶ – **08:04**; ಉತ್ತುಂಗ – **09:25**; ಗ್ರಹಣಮೋಕ್ಷ – **11:04.**

ಚಂದ್ರನು ಸೂರ್ಯನ ಮೇಲ್ಭಾಗದಿಂದ ಆರಂಭಿಸಿ (ಗ್ರಹಣಸ್ಪರ್ಶ) ಕೆಳಭಾಗದವರೆಗೆ (ಗ್ರಹಣಮೋಕ್ಷ) ಹಾದುಹೋಗುವನು. ಈ ದಾರಿಯಲ್ಲಿ ಚಂದ್ರನು ಮಧ್ಯದಲ್ಲಿರುವಾಗ (ಗ್ರಹಣದ ಪೂರ್ಣಾವಸ್ಥೆ) ಸೂರ್ಯನ ಹೊರವಲಯವನ್ನು ಮಾತ್ರ ಬಿಟ್ಟು ಉಳಿದ ಮಂಡಲವನ್ನಷ್ಟೂ ಆವರಿಸುವನು. ಆದ್ದರಿಂದ ಆಗ ಸೂರ್ಯಮಂಡಲದ ಆ ಹೊರವಲಯವು ಮಾತ್ರ ಪ್ರಕಾಶಿಸುತ್ತಿದ್ದರೆ ಉಳಿದ ಮಂಡಲವೆಲ್ಲಾ (ಚಂದ್ರ ಅಡ್ಡಬಂದದ್ದರಿಂದ) ಕತ್ತಲಾಗಿ ಕಾಣುವುದು. ಆದ್ದರಿಂದ ಈ ದೃಶ್ಯವನ್ನು **ವಜ್ರದುಂಗುರ** (Diamond Ring) ಎಂದು ಕರೆಯುತ್ತಾರೆ.

ಗ್ರಹಣದ ಉತ್ತುಂಗದಲ್ಲಿ (ಸಾಮೀಪ್ಯದಿಂದ) ಚಂದ್ರನ ವಿಸ್ತಾರವು ಸೂರ್ಯನಿಗಿಂತ ಹೆಚ್ಚಿದ್ದರೆ ಪೂರ್ಣಸೂರ್ಯಗ್ರಹಣವಾಗುತ್ತದೆ (Total Eclipse); ಸೂರ್ಯನದೇ ಹೆಚ್ಚಿದ್ದರೆ ವಜ್ರದುಂಗುರವಾಗುತ್ತದೆ (Annular Eclipse) ಎಂಬುದಷ್ಟೇ ವ್ಯತ್ಯಾಸ. ಕಣ್ವತೀರ್ಥದಲ್ಲಿ ಪೂರ್ಣಸೂರ್ಯಗ್ರಹಣವು 1871ರಲ್ಲಿ ಕಂಡ ಮೇಲೆ ಮತ್ತೆ 2168ರಲ್ಲೇ ಕಾಣುವುದು. ವಜ್ರದುಂಗುರವು 1748ರಲ್ಲಿ ಕಂಡಮೇಲೆ 2019ರಲ್ಲಿ ಕಂಡು ಮತ್ತೆ 2064ರಲ್ಲೇ ಕಾಣುವುದು.

ಈ ಅನಂತ ಬೆಲೆ ಬಾಳುವ ವಜ್ರದುಂಗುರವನ್ನು ಮಧ್ವಾಂತರ್ಗತ ಭಗವಂತನಿಗೆ ಸಮರ್ಪಿಸಿ ಎಲ್ಲರೂ ಕೃತಕೃತ್ಯರಾಗಬಹುದು.

*****

---

1. http://eclipse.gsfc.nasa.gov. Eclipse Predictions by Fred Espenak (NASA's GSFC).

# ಶ್ರೀಕನಕದಾಸರ ಹರಿಭಕ್ತಿಸಾರ

**ಅನುವಾದ – ಡಾ ॥ ವ್ಯಾಸನಕೆರೆ ಪ್ರಭಂಜನಾಚಾರ್ಯ**

(ಹಿಂದಿನ ಸಂಚಿಕೆಯಿಂದ – ೧೧ನೆಯ ಪದ್ಯದ ಅನುವಾದ)

**ಪರಮವಿಲಾಸ :** ವಿಲಾಸ ಎಂದರೆ ಕ್ರೀಡೆ. ಶ್ರೀಹರಿಯ ಜಗತ್ತಿನ ಸೃಷ್ಟಿ, ಸ್ಥಿತಿ ಲಯ ಮೊದಲಾದ ಸಕಲ ಕಾರ್ಯಗಳೂ ಸಹ ತನ್ನ ಸ್ವಂತ ಪ್ರಯೋಜನಕ್ಕಾಗಿ ಅಲ್ಲದೆ, ಕೇವಲ ಲೋಕಹಿತಕ್ಕಾಗಿ ಮಾತ್ರ. ಅವನಿಗೆ ಮಾತ್ರ ಅದು ಕೇವಲ ಕ್ರೀಡೆಯಷ್ಟೆ ಎಂಬುದು ಶಾಸ್ತ್ರಗಳ ನಿರೂಪಣೆ. ಅವನ ಪ್ರತಿಯೊಂದ ಕಾರ್ಯವೂ ಸಹ ಅದರಂತೆ ಕೇವಲ ಕ್ರೀಡೆಯೇ ಆಗಿರುವುದರಿಂದ , ಆ ಕ್ರೀಡೆಯೂ ಸಹ ಸ್ವಾಭಾವಿಕವೇ ಆಗಿರುವುದರಿಂದ ಅವನ ವಿಲಾಸವು ಪರಮವಿಲಾಸ ಎನ್ನಿಸುವುದು. ಇತರರಿಗೆ ಆಗದ ಎಂತಹ ಮಹತ್ಕಾರ್ಯಗಳನ್ನು ಸಹ ಕೇವಲ ತನ್ನ ಭ್ರೂವಿಲಾಸದಿಂದಲೇ ಲೀಲಾಜಾಲವಾಗಿ ಮಾಡುವವನು ಎಂಬ ಧ್ವನಿಯೂ ಇಲ್ಲಿದೆ.

**ಹರಿ :** ಹರಿ ಎಂದರೆ ಪಾಪಗಳನ್ನು ಪರಿಹರಿಸುವವನು, ಸಂಸಾರದ ನೋವನ್ನು ಕಳೆಯುವವನು, ತನ್ನ ಭಕ್ತರಿಗೆ ಪುಣ್ಯದ ರಾಶಿಯನ್ನು ಭರಿಸಿಕೊಡುವವನು, ಮೊದಲಾದ ಅನೇಕ ಅರ್ಥಗಳು ಉಂಟು. ಮುಖ್ಯವಾಗಿ ಭಗವಂತನ ಸಕಲರಿಂದ ಉಪಾಸ್ಯವಾದ ಬಿಂಬರೂಪಕ್ಕೂ ಹರಿ ಎಂಬ ವಿಶೇಷ ಹೆಸರು ಶಾಸ್ತ್ರಗಳಲ್ಲಿ ಉಕ್ತವಾಗಿದೆ. ಹರಿಭಕ್ತಿಸಾರ ಎಂಬ ಹೆಸರನ್ನು ತಮ್ಮ ಕೃತಿಗೆ ಶ್ರೀಕನಕದಾಸರು ಇರಿಸಲು ಸಹ ಈ ಪದದ ವ್ಯಾಪ್ತಿ ಇಷ್ಟು ವಿಶಾಲವಾಗಿರುವುದೇ ಕಾರಣ. ಶ್ರೀಜಗನ್ನಾಥದಾಸರ ಶ್ರೀಹರಿಕಥಾಮೃತಸಾರ ಎಂಬ ಕೃತಿಯಲ್ಲಿನ ಹರಿ ಶಬ್ದವು ಸಹ ಇಂತಹ ವಿಶೇಷಾರ್ಥವನ್ನೇ ಹೊಂದಿದೆ.

ಸರ್ವೇಶ : ಸರ್ವರಿಗೂ ಒಡೆಯನಾದವನು. ಸರ್ವರಿಗೂ ಎಂದರೆ, ಜಗತ್ತಿನ ಸಕಲ ದೇವತೆಗಳಿಗೂ, ಜೀವಿಗಳಿಗೂ ಸರ್ವಸ್ವಾಮಿಯಾದವನು :

**ಯೇ ಚೈವ ಸಾತ್ತ್ವಿಕಾಭಾವಾ ರಾಜಸಾಸ್ತಾಮಸಾಶ್ಚ ಯೇ ।**
**ಮತ್ತ ಏವೇತಿ ತಾನ್ ವಿದ್ಧಿ ನ ತ್ವಹಂ ತೇಷು ತೇ ಮಯಿ ॥** –ಗೀತಾ (೭/೧೨ )

ಇದಕ್ಕೆ ಸರ್ವವಿಧದಲ್ಲೂ ಸ್ವಾಮಿ ಎಂಬ ಮತ್ತೊಂದು ಅರ್ಥವೂ ವಿವಕ್ಷಿತ. ತಂದೆ, ತಾಯಿ, ಗುರು, ರಾಜ ಮೊದಲಾದವರಿಗೆ ಇರುವುದು ತಮ್ಮ ಮಕ್ಕಳು, ತಮ್ಮ ಶಿಷ್ಯರು ಹಾಗೂ ತಮ್ಮ ಪ್ರಜೆಗಳ ಮೇಲೆ ಮಾತ್ರ. ಶ್ರೀಹರಿಯ ಒಡೆತನ ಅಂತಹುದಲ್ಲ. ಅವನು ಸಕಲ ಬಗೆಯಲ್ಲೂ ಸರ್ವರಿಗೂ ಸ್ವಾಮಿ ಎಂಬುದು ವಿಶೇಷ ಪ್ರಮೇಯ. ಸರ್ವೇಶ ಎಂಬುದನ್ನು ಸರ್ವ ಈಶ ಎಂದು ಬಿಡಿಸಿಯೂ ಓದಿಕೊಳ್ಳಬಹುದು; ಆಗ ಎಲ್ಲೆ ಸರ್ವನೇ, ಎಲ್ಲೆ ಈಶನೇ ಎಂದು ಅರ್ಥವಾಗುವುದು. ಸರ್ವ ಎಂಬುದು ವಿಷ್ಣುಸಹಸ್ರನಾಮದಲ್ಲಿ ಬಂದಿರುವ ಪದ: **ಸರ್ವಃ ಶರ್ವಃ ಶಿವಃ ಸ್ಥಾಣುಃ.** ಸರ್ವ ಎಂಬುದು ಸರ್ವಂ ಖಲ್ವಿದಂ ಬ್ರಹ್ಮ ಇತ್ಯಾದಿ ಉಪನಿಷತ್ತುಗಳಲ್ಲಿಯೂ ಬಂದಿದೆ. ಇದಕ್ಕೆ ಸರ್ವಸ್ವಾಮಿ, ಸರ್ವರ ಅಂತರ್ಯಾಮಿ, ಸರ್ವರ ನಿಯಾಮಕ ಮೊದಲಾದ ಅನೇಕ ಅರ್ಥಗಳು ಉಂಟು. ಇಂತಹ ಉಪಾಸನೆ ಮಾಡುವುದು ತನಗೆ ತುಂಬಾ ಪ್ರಿಯ ಎಂದು ಶ್ರೀಕೃಷ್ಣ ರೂಪದಿಂದ

ಶ್ರೀಹರಿಯು ಸ್ಪಷ್ಟಪಡಿಸಿರುವನು : **ವಾಸುದೇವಃ ಸರ್ವಮಿತಿ ಸ ಮಹಾತ್ಮಾ ಸುದುರ್ಲಭಃ** –ಗೀತೆ (೭/೧೯). ಈಶ ಎಂದರೆ ಒಡೆಯ ಎಂದರ್ಥ. ಈ ಒಡೆತನವು ಸಹ ಕೇವಲ ಇತರರ ಒಡೆತನದಂತೆ ಸೀಮಿತವಾಗಿರದೆ, ಅಪರಿಮಿತ ಎಂದು ತಿಳಿಯಬೇಕು.

**ದೇವೇಶ :** ಇದು ಸಕಲದೇವತೆಗಳಿಗೂ ಶ್ರೀಹರಿ ಒಡೆಯ ಎಂಬ ಅರ್ಥವನ್ನು ತಿಳಿಸುವುದು. ಸೂರ್ಯ ಚಂದ್ರಾದಿಗಳೆಲ್ಲಾ ಶ್ರೀಹರಿಯ ವಶವರ್ತಿಗಳಾಗಿದ್ದು ಅವನ ಆಜ್ಞಾಧಾರಕರಾಗಿರುವರು ಎಂಬ ಉಪನಿಷತ್ತುಗಳ ಮಾತು ಇದಕ್ಕೆ ಆಧಾರ : **ಯದ್ಭೀಷಾ ಉದೇತಿ ಸೂರ್ಯಃ ... ಮೃತ್ಯುರ್ಧಾವತಿ ಪಂಚಮಃ ।**(ಕಠೋಪನಿಷತ್)

**ವಾಸುದೇವ :** ವಸುದೇವನ ಮಗ ಎಂಬ ಕಾರಣದಿಂದ ವಾಸುದೇವ ಎಂಬುದು ಶ್ರೀಕೃಷ್ಣರೂಪದ ಹೆಸರು. ಆದರೆ ಮುಖ್ಯವಾಗಿ ಎಲ್ಲೆಡೆ ಸರ್ವಸ್ವಾಮಿಯಾಗಿ ನೆಲೆಸಿದವನು ಎಂಬುದು ಅದರ ಮುಖ್ಯವಾದ ಅರ್ಥ :

**ವಾಸನಾದ್ವಾಸುದೇವೋಽಸಿ ವಾಸಿತಂ ತೇ ಜಗತ್ತ್ರಯಮ್ ।**
**ಸರ್ವಭೂತನಿವಾಸೋಽಸಿ ವಾಸುದೇವ ನಮೋಽಸ್ತು ತೇ ॥**

ಶ್ರೀಹರಿಯು ಸೃಷ್ಟಿಯ ಪ್ರಾರಂಭದಲ್ಲಿ ಸ್ವೀಕರಿಸಿದ ೪ ರೂಪಗಳಲ್ಲಿ ವಾಸುದೇವ ರೂಪವು ಮೊದಲನೆಯದು. ಸಂಕರ್ಷಣ, ಪ್ರದ್ಯುಮ್ನ, ಅನಿರುದ್ಧ ಎಂಬುವು ಇತರ ಮೂರು ರೂಪಗಳು. ಮೋಕ್ಷ ಕೊಡುವ ರೂಪ ಎಂಬುದು ವಾಸುದೇವ ರೂಪದ ವಿಶೇಷ. ಶ್ರೀಮದಾಚಾರ್ಯರ ದ್ವಾದಶಸ್ತೋತ್ರವು **ಪ್ರೀಣಯಾಮೋ ವಾಸುದೇವಂ** ಎಂಬುದಾಗಿ ಶ್ರೀಹರಿಯ ವಾಸುದೇವರೂಪದ ವಿಶೇಷ ಹಿರಿಮೆಯನ್ನು ತಿಳಿಸಿಕೊಡುವುದು.

**ದಿನೇಶಶತಸಂಕಾಶ :** ದಿನೇಶ ಎಂದರೆ ಸೂರ್ಯ, ಶತ ಶಬ್ದವು ಸಾಮಾನ್ಯವಾಗಿ ನೂರು ಎಂಬ ಅರ್ಥವನ್ನು ಕೊಟ್ಟರೂ ಮುಖ್ಯವಾಗಿ ಬಹಳ ಅರ್ಥವನ್ನೇ ತಿಳಿಸುವುದು: **ಶಬ್ದೋ ಬಹುತ್ವವಚನಃ ಶತಮ್** – ಮ.ಭಾ.ತಾ.ನಿ(೧/೧೬). ಲೋಕದಲ್ಲೂ ನೂರು ಎಂಬ ಪದವನ್ನು ಬಹಳ ಎಂಬ ಅರ್ಥದಲ್ಲಿ ಉಪಯೋಗಿಸುವ ರೂಢಿಯೂ ಇದೆ. ಶ್ರೀಹರಿಯ ಕಾಂತಿ ಅನಂತಸೂರ್ಯರ ಕಾಂತಿ. ಆದ್ದರಿಂದಲೇ ಸೂರ್ಯ ಮೊದಲಾದ ಯಾವ ದೇವತೆಗಳೂ ಸಹ ಅವನಿಗೆ ಸರಿಸಾಟಿ ಎನ್ನಿಸರು ಎಂದು ಭಾವ. ಇದರಿಂದ ಸೂರ್ಯಮಂಡಲಮಧ್ಯವರ್ತಿಯಾದ ರೂಪ ಶ್ರೀಹರಿಯ ನಾರಾಯಣರೂಪವೇ ಹೊರತು ಅನೇಕರು ತಿಳಿದಿರುವಂತೆ ಕೇವಲ ಸೂರ್ಯದೇವತೆಯಲ್ಲ ಎಂಬ ಭಾವವು ಸೂಚಿತ. ಭಗವದ್ಗೀತೆಯಲ್ಲಿ ಶ್ರೀಕೃಷ್ಣನ ವಿಶ್ವರೂಪವನ್ನು ವರ್ಣಿಸಿರುವ ಶ್ಲೋಕ ಇಲ್ಲಿ ಸ್ಮರಣೀಯ :

**ದಿವಿಸೂರ್ಯಸಹಸ್ರಸ್ಯ ಭವೇದ್ಯುಗಪದುತ್ಥಿತಾ ।**
**ಯದಿ ಭಾಃ ಸದೃಶೀ ಸಾ ಸ್ಯಾತ್ ಭಾಸಸ್ತಸ್ಯ ಮಹಾತ್ಮನಃ ॥ (೧೧/೧೨)**

ದಿನೇಶ–ಸೂರ್ಯ ಎಂಬುದಕ್ಕೆ ಷಟ್ಪ್ರಶ್ನೋಪನಿಷತ್ತಿನಲ್ಲಿ ವಾಯು ಎಂಬ ಅರ್ಥ ಬಂದಿದೆ. ಇದರಿಂದ ಅನಂತ ವಾಯುದೇವರಿಗಿಂತ ಮಿಗಿಲಾದ ಕಾಂತಿ ಶ್ರೀಹರಿಯದು ಎಂಬ ವಿಶೇಷಾರ್ಥ ಸೂಚಿತವಾಗುವುದು.

**ಯದುಕುಲವಂಶತಿಲಕ :** ಯದುಕುಲ ಎಂಬುದು ಯಯಾತಿ ಪುತ್ರನಾದ ಯದುವಿನಿಂದ ಬೆಳೆದು ಬಂದ ಚಂದ್ರವಂಶದ ಒಂದು ಕವಲು. ಅದಕ್ಕೆ ಭೋಜ, ವೃಷ್ಣಿ, ಅಂಧಕ ಎಂಬುದು ಉಪಪಂಗಡಗಳು. ಅದನ್ನು ಸೂಚಿಸಲು ಯದುಕುಲ ಹಾಗೂ ವಂಶ ಎಂಬ ಪದಗಳನ್ನು ಸೂಚಿಸಿರುವರು. ಶ್ರೀರಾಮರೂಪವು ರಘುಕುಲತಿಲಕ ರೂಪವೆನ್ನಿಸಿದರೆ, ಶ್ರೀಕೃಷ್ಣ ರೂಪವು ಯದುಕುಲತಿಲಕವೆನ್ನಿಸಿದ ರೂಪ. ಒಟ್ಟಾಗಿ ಸರ್ವೋತ್ತಮ ಎಂಬುದು ಅದರ ಭಾವ.

**ಪರಾಶರಾನತ :** ಪರಾಶರ ಮುನಿಯಿಂದ ವಂದಿತ ಎಂದರ್ಥ. ಶ್ರೀಹರಿಯ ವೇದವ್ಯಾಸರೂಪ ಪರಾಶರ–ಸತ್ಯವತಿಯರಿಂದ ಅವತರಿಸಿದ ರೂಪ. ಹಾಗೆ ಅವತರಿಸಿದ್ದು ಅವರಿಬ್ಬರ ಪ್ರಾರ್ಥನೆಯಂತೆ. ಆದ್ದರಿಂದ ಆತನು ಅವರ ಪುತ್ರನಾದರೂ ಅವರಿಂದ ಪೂಜಿತನಾದವನೇ ಆಗಿರುವನು. ಇದರಿಂದ ವಸುದೇವಪುತ್ರ, ದಶರಥಪುತ್ರ ಎಂಬ ಪದಗಳಂತೆ ಪರಾಶರಪುತ್ರ ಎಂಬುದು ಸಹ ಪರಾಶರರಿಗೆ ಅನುಗ್ರಹ ಮಾಡಿದ ರೂಪ ಎಂಬ ಅರ್ಥವನ್ನು ನೀಡುವುದು. ವೇದವ್ಯಾಸರೂಪವು ಮೇಲ್ನೋಟಕ್ಕೆ ಪರಾಶರರ ಪುತ್ರ ಎಂದು ಕಾಣುವ ರೂಪವಾದರೂ ವಾಸ್ತವವಾಗಿ ಶ್ರೀರಾಮ, ಶ್ರೀಕೃಷ್ಣರೂಪಗಳಂತೆ ಶ್ರೀಹರಿಯ ಸಾಕ್ಷಾದ್ರೂಪವಾಗಿದೆಯೇ ಹೊರತು ಕೇವಲ ಒಂದು ಋಷಿರೂಪವಲ್ಲ ಎಂಬ ವಿಶೇಷಾರ್ಥ ಸೂಚಿತವಾಗುವುದು.

ಪರಾಶರರಿಗೆ ಆ ಹೆಸರು ಬರಲು ತಮ್ಮ ವಂಶ ನಿಂತುಹೋಗುವುದು ಎಂಬ ಆತಂಕದಲ್ಲಿದ್ದ ವಸಿಷ್ಠಮುನಿಗಳಿಗೆ ಇವರು ಮೊಮ್ಮಗನಾಗಿ ಜನಿಸುವ ಮೂಲಕ ಪರಿಹಾರವಾಗುವುದು. ಎಂದರೆ ವಂಶವನ್ನು ಬೆಳಗಿದ ಕೀರ್ತಿ [೧]ಪರಾಶರಮುನಿಯದು. ಅದರಂತೆ ಪರೀಕ್ಷಿದ್ರಾಜನು ಪಾಂಡವರ ಮೊಮ್ಮಗನಾಗಿ ಜನಿಸಿ, ನಿಮಿತ್ತ ಎನ್ನಿಸಿದ. ಇದರಿಂದ ಪರಾಶರ ಎಂಬುದಕ್ಕೆ ಪರೀಕ್ಷಿದ್ರಾಜ ಎಂಬ ಅರ್ಥವೂ ಹೊಂದುವುದು. ಆ ಪರೀಕ್ಷಿದ್ರಾಜನನ್ನು ಅಶ್ವತ್ಥಾಮನ ಅಸ್ತ್ರದಿಂದ ಗರ್ಭದಲ್ಲಿ ಸಂರಕ್ಷಿಸಿ ಅವನು ಜನಿಸಿದ ಕೂಡಲೇ ಮೃತನಾದಾಗ, ಮರಳಿ ಬದುಕಿಸಿದ ಹಿರಿಮೆ ಶ್ರೀಕೃಷ್ಣರೂಪದ್ದು. ಇದರಿಂದ ಇದು ಕೃಷ್ಣರೂಪಕ್ಕೂ ಅನ್ವಯಿಸುವ ಪದವಾಗುವುದು. ಎಂದರೆ ಒಂದರ್ಥದಲ್ಲಿ ಇದು ಕೃಷ್ಣರೂಪದ ಸ್ತುತಿಯಾಗಿದ್ದರೆ, ಮತ್ತೊಂದು ಅರ್ಥದಲ್ಲಿ ಶ್ರೀವ್ಯಾಸರೂಪದ ಸ್ತುತಿಯಾಗಿದೆ. ಈ ಮೂಲಕ ಶ್ರೀಕನಕದಾಸರು ರೂಪತ್ರಯಗಳನ್ನು ಈ ಪದ್ಯದಲ್ಲಿ ಸ್ತುತಿಸಿದಂತಾಗಿದೆ ಎಂದು ತಿಳಿಯಬೇಕು.

**ದೇವ :** ದೇವ ಎಂಬುದಕ್ಕೆ **ದಿವು ಕ್ರೀಡಾಯಾಮ್**[೨] ಎಂಬುದಾಗಿ ೭ ಬಗೆಯ ಅರ್ಥವಿದ್ದು ಎಲ್ಲ ಅರ್ಥಗಳು ಸಹ ಶ್ರೀಹರಿಗೆ ಅನ್ವಯಿಸುವವು. ಎಂದರೆ ಅವನು ಅತ್ಯಂತ ಮುಖ್ಯವಾದ ಅರ್ಥದಲ್ಲಿ ದೇವ ಎನ್ನಿಸುವ ಹಿರಿಮೆ ಹೊಂದಿದವನು.

---

೧. ಪರಾಸುಃ ಸ ಯತಸ್ತೇನ ವಸಿಷ್ಠಂ ಸ್ಥಾಪಿತೋ ಮುನಿಃ ।
ಗರ್ಭಸ್ಥೇನ ತತೋ ಲೋಕೇ ಪರಾಶರ ಇತಿ ಸ್ಮೃತಃ ॥ – ಮಹಾಭಾರತ ೧/೧೯೫/೩

೨. ದಿವುಕ್ರೀಡಾವಿಜಿಗೀಷಾವ್ಯವಹಾರದ್ಯುತಿಸ್ತುತಿಮೋದಮದಸ್ವಪ್ನಕಾಂತಿಗತಿಷು । ಇತಿ

ದೇವನೆಂದರೆ ಹರಿಯೇ ಎಂಬುದು ಇದರ ಒಟ್ಟು ಭಾವ. ದೇವ ಎಂಬುದಕ್ಕೆ ಬ್ರಹ್ಮದೇವ, ರುದ್ರದೇವ, ಇಂದ್ರದೇವ, ಇತ್ಯಾದಿ ವಿಶೇಷಣಗಳನ್ನು ಸೇರಿಸಿದಾಗ ಆ ದೇವತೆಗಳಿಗೆ ಅನ್ವಯಿಸುವುದು. ಆದರೆ ಯಾವ ವಿಶೇಷಣವೂ ಇಲ್ಲದೆ ದೇವ ಎಂದರೆ ಶ್ರೀಹರಿಯೇ ಎಂದರ್ಥ; ಸೂತ್ರ ಎಂದರೆ ಬ್ರಹ್ಮಸೂತ್ರ, ಗೀತೆ ಎಂದರೆ ಭಗವದ್ಗೀತೆ, ವ್ರತ ಎಂದರೆ ಏಕಾದಶೀ ಹೇಗೋ ಹಾಗೆ ದೇವ ಎಂದರೆ ಶ್ರೀಹರಿಯೇ ಎಂಬುದು ಶಾಸ್ತ್ರಗಳ ಭಾವ.

**-ಮುಂದುವರೆಯುವುದು**

*****

### ದಧಿವ್ರತಸಮರ್ಪಣಮಂತ್ರ(ಭಾದ್ರಪದ ಶುಕ್ಲ ದ್ವಾದಶೀ-೨೭.೦೯.೧೨)

**ಸಂಕರ್ಷಣ ನಮಸ್ತುಭ್ಯಂ ಶ್ರಾವಣೇ ಮತ್ಕೃತೇನ ಚ ।**
**ದಧಿವ್ರತೇನ ದೇವೇಶ ಪ್ರೀತೋ ಭವ ಜನಾರ್ದನ ॥**

### ಕ್ಷೀರವ್ರತ ಸಂಕಲ್ಪಃ (ಭಾದ್ರಪದ ಶುಕ್ಲ ದ್ವಾದಶೀ)

**ಕ್ಷೀರವ್ರತಮಿದಂ ದೇವ ಗೃಹೀತಂ ಪುರತಸ್ತವ ।**
**ನಿರ್ವಿಘ್ನಂ ಸಿದ್ಧಿಮಾಯಾತು ಪ್ರಸಾದಾತ್ತೇ ರಮಾಪತೇ ॥**

**ಪ್ರದ್ಯುಮ್ನ ತವ ತುಷ್ಟ್ಯರ್ಥಂ ಪ್ರೋಷ್ಟಪದ್ಯಾಂ ತೃತೀಯಕೇ ।**
**ನಿರ್ವಿಘ್ನಂ ಕುರು ದೇವೇಶ ಕರಿಷ್ಯೇऽಹಂ ಪಯೋವ್ರತಮ್ ॥**

### ಭಾದ್ರಪದಶುಕ್ಲ ದ್ವಾದಶೀ (ವಿಷ್ಣುಪರಿವರ್ತನ ಮಂತ್ರಃ)

**ದೇವ ದೇವ ಜಗನ್ನಾಥ ಕಲ್ಪಾನಾಂ ಪರಿವರ್ತಕ ।**
**ಪರಿವೃತ್ತಮಿದಂ ಸರ್ವಂ ಯೇನ ಸ್ಥಾವರಜಂಗಮಮ್ ॥**

**ಯದಿಷ್ಟಾಚೇಷ್ಟಿತೈರೇವ ಜಾಗ್ರತ್ಸ್ವಪ್ನಸುಷುಪ್ತಿಭಿಃ ।**
**ಜಗದ್ಧಿತಾಯ ಸುಪ್ತೋऽಸಿ ಪಾರ್ಶ್ವೇನ ಪರಿವರ್ತಯ ॥**

**ಪರಿವರ್ತನಕಾಲೋऽಯಂ ಜಗತಃ ಪಾಲನಾಯ ತೇ ।**
**ತವಾಜ್ಞಯಾऽಯಂ ಶಕ್ರೋऽಪಿ ಧ್ವಜೇ ತಿಷ್ಠೇತ್ಸಮುತ್ಸುಕಃ ।**

**ದೃಷ್ಟ್ವಾ ತ್ವತ್ಪಾದಕಮಲಂ ವಿಮುಂಚನ್ಮೂರ್ಧಭಿರ್ಜಲಮ್ ।**
**ಮಹೀತಲಂ ಪಾವಯತಿ ಪ್ರಜಾಪಾಲನಹೇತುಕಮ್ ॥**
**ಇತಿ ಸಂಪ್ರಾರ್ಥ್ಯ ದೇವೇತಿ ವಿನಯಾತ್ತೋಷಯೇತ್ತತಃ ।**
**ವಾಸುದೇವ ಜಗನ್ನಾಥ ಪ್ರಾಪ್ತೇಯಂ ದ್ವಾದಶೀ ತವ ।**
**ಪಾರ್ಶ್ವೇನ ಪರಿವರ್ತಸ್ವ ಸುಖಂ ಸ್ವಪಿಹಿ ಮಾಧವ ॥ – ಸ್ಮೃತ್ಯರ್ಥಸಾಗರ**

ಪ್ರಥಮೈಕಾದಶಿಯಂದು ಮಲಗಿಸಿದ ದೇವರ ಪ್ರತಿಮೆಯನ್ನು ಈ ಮಂತ್ರದಿಂದ ಮಗ್ಗುಲು ಬದಲಾಯಿಸಬೇಕು.

# ಮಾಸದ ವಿಶೇಷಗಳು

## ಅಧಿಕ ಭಾದ್ರಪದಮಾಸ ಕೃಷ್ಣಪಕ್ಷ

**೧೧.೦೯.೧೨ : ದಶಮೀ**

**೧೨.೦೯.೧೨ : ಸರ್ವರಿಗೂ ಏಕಾದಶೀ(ಪರಮಾ)**

**೧೩.೦೯.೧೨ : ದ್ವಾದಶೀ**

೧೫.೦೯.೧೨ : ಅನ್ವಾಧಾನ, ದರ್ಶ

೧೬.೦೯.೧೨ : ಅಮಾವಾಸ್ಯೆ, ವಿಷ್ಣುಪಂಚಕವ್ರತ, ಅಧಿಕಮಾಸ ಸಮಾಪ್ತಿ

## ನಿಜಭಾದ್ರಪದಮಾಸ ಶುಕ್ಲಪಕ್ಷ

**(ಮಾಸ ನಿಯಾಮಕ : ಬುದ್ಧಿ – ಹೃಷೀಕೇಶ)**

**೧೭.೦೯.೧೨ : ಬಲರಾಮಜಯಂತೀ, ಧನ್ವಂತರೀಜಯಂತೀ, ವರಾಹ ಜಯಂತೀ**

**೧೮.೦೯.೧೨ : ಸ್ವರ್ಣಗೌರೀವ್ರತ, ತಾಪಸಮನ್ವಾದಿ**

**೧೯.೦೯.೧೨ : ಗಣೇಶಚತುರ್ಥೀ**

**೨೦.೦೯.೧೨ : ಋಷಿಪಂಚಮೀ**

**(ವ್ರತಗ್ರಹಣ ಹಾಗೂ ಉದ್ಯಾಪನಗಳಿಗೆ ಅವಕಾಶವಿದೆ)**

೨೧.೦೯.೧೨ : ಜ್ಯೇಷ್ಠಾದೇವಿ ಆವಾಹನ, ಸೂರ್ಯಷಷ್ಠೀ
(ಪ್ರಾತಃಸ್ನಾನದಿಂದ ಅಶ್ವಮೇಧ ಫಲ)

೨೨.೦೯.೧೨ : ಜ್ಯೇಷ್ಠಾದೇವಿ ಪೂಜೆ

೨೩.೦೯.೧೨ : ಜ್ಯೇಷ್ಠಾದೇವಿ ಹಾಗೂ ಮಾಸಮಹಾಲಕ್ಷ್ಮೀಕಲಶ ವಿಸರ್ಜನೆ

**೨೪.೦೯.೧೨ : ದಶಮೀ**

**೨೬.೦೯.೧೨ : ಸರ್ವರಿಗೂ ಏಕಾದಶೀ(ಪರಿವರ್ತಿನೀ),**
**ದಧಿವ್ರತ ಸಮಾಪ್ತಿ, ಕ್ಷೀರವ್ರತಾರಂಭ**

**೨೭.೦೯.೧೨ : ಅಲ್ಪದ್ವಾದಶೀ (೮.೨೦ರ ಒಳಗೆ) ವಾಮನಜಯಂತೀ,**

**೨೯.೦೯.೧೨ : ಅನಂತಚತುರ್ದಶೀ ವ್ರತ, ಅನ್ವಾಧಾನ**

೩೦.೦೯.೧೨ : ಹುಣ್ಣಿಮೆ, ವಿಷ್ಣುಪಂಚಕ ಇಲ್ಲ, ಮಹಾಲಯ ಆರಂಭ.

## ನಿಜಭಾದ್ರಪದಮಾಸ ಕೃಷ್ಣಪಕ್ಷ

೦೩.೧೦.೧೨ : ಮಹಾಭರಣಿಶ್ರಾದ್ಧ

೦೮.೧೦.೧೨ : ಮಧ್ಯಾಷ್ಟಮೀಶ್ರಾದ್ಧ

೦೯.೧೦.೧೨ : ಅವಿಧವಾ ನವಮೀಶ್ರಾದ್ಧ
**೧೦.೧೦.೧೨ : ದಶಮೀ**
**೧೧.೧೦.೧೨ : ಸರ್ವರಿಗೂ ಏಕಾದಶೀ(ಇಂದಿರಾ)**
**೧೨.೧೦.೧೨ : ದ್ವಾದಶೀ, ಸನ್ಯಾಸಿಗಳಿಗೆ ಮಹಾಲಯ**
೧೩.೧೦.೧೨ : ತ್ರಯೋದಶೀಶ್ರಾದ್ಧ
೧೪.೧೦.೧೨ : ಘಾತಚತುರ್ದಶೀಶ್ರಾದ್ಧ
೧೫.೧೦.೧೨ : ಸರ್ವಪಿತೃಗಳ ಅಮಾವಾಸ್ಯೆ, ವಿಷ್ಣುಪಂಚಕವ್ರತ

*****

## ಗುರುಗಳ ಪುಣ್ಯದಿನಗಳು

೨೦.೦೯.೧೨ : ಶ್ರೀತಪೋನಿಧಿತೀರ್ಥರು(ಶ್ರೀಪಾ.ಮ.), ಪಳ್ಳಿಪಾಳ್ಯಂ
೨೦.೦೯.೧೨ : ಶ್ರೀವಿದ್ಯಾವಾರಿಧಿತೀರ್ಥರು(ವ್ಯಾ.ಮ.),ಶ್ರೀರಂಗ
೨೪.೦೯.೧೨ : ಶ್ರೀಜಗನ್ನಾಥದಾಸರು, ಮಾನ್ವಿ
೨೬.೦೯.೧೨ : ಶ್ರೀಸತ್ಯೇಷ್ಟತೀರ್ಥರು(ಉ.ಮ),ಆತಕೂರ
೨೭.೦೯.೧೨ : ಶ್ರೀಪ್ರಸನ್ವೇಂಕಟದಾಸರು, ಬದಾಮಿ
೩೦.೦೯.೧೨ : ಶ್ರೀಯಾದವಾರ್ಯರು, ಹುಬ್ಬಳ್ಳಿ
೦೨.೧೦.೧೨ : ಶ್ರೀಶ್ರೀನಿವಾಸತೀರ್ಥರು, ಹೊನ್ನಾಳಿ
೧೦.೧೦.೧೨ : ಶ್ರೀವಿದ್ಯಾಪಯೋನಿಧಿತೀರ್ಥರು(ವ್ಯಾ.ಮ.), ತಿರುಮಕೂಡಲು
೧೨.೧೦.೧೨ : ಶ್ರೀವಿಜ್ಞಾನನಿಧಿತೀರ್ಥರು(ಶ್ರೀಪಾ.ಮ.), ಮುಳಬಾಗಿಲು

*****

## ಶ್ರೀವ್ಯಾಸಮಧ್ವಸಂಶೋಧನ ಪ್ರತಿಷ್ಠಾನದ ನಿರ್ದೇಶಕರ ಕಾರ್ಯಕ್ರಮಗಳು

**೨೩.೦೯.೨೦೧೨ ಪ್ರವಚನ ಸಂಜೆ ೬.೦೦ಕ್ಕೆ**
**ವಿಷಯ : ಶ್ರೀಮನ್ಮಹಾಭಾರತ ಪ್ರವಚನ**
**ಸ್ಥಳ : ತತ್ವಜ್ಞಾನಮಂದಿರ, ಕೃಷ್ಣಮೂರ್ತಿಪುರಂ, ಮೈಸೂರು**

*****

**೨೪.೦೯.೨೦೧೨ ರಿಂದ ೩೦.೦೯.೨೦೧೨ ಪ್ರವಚನ ಸಂಜೆ ೬.೦೦ಕ್ಕೆ**
**ವಿಷಯ : ಶ್ರೀಮದ್ಭಾಗವತ ಪ್ರೋಷ್ಠಪದೀ ಪ್ರವಚನ**
**ಸ್ಥಳ : ಶ್ರೀಕೃಷ್ಣಧಾಮ, ಸರಸ್ವತೀಪುರಂ, ಮೈಸೂರು**

*****

॥ಶ್ರೀಗೋಪಾಲಕೃಷ್ಣೋ ವಿಜಯತೇ॥

# ಗೋವರ್ಧನಗಿರಿ ಟ್ರಸ್ಟ್

## ಶ್ರೀ ಪೇಜಾವರ ಅಧೋಕ್ಷಜ ಮಠ, ಉಡುಪಿ - ೫೭೬ ೧೦೧

**ನೀಲಾವರ ಗೋಶಾಲೆಯಲ್ಲಿ ಗೋಮೂತ್ರ ಮತ್ತು ಗೋಮಯದಿಂದ ತಯಾರಿಸಿದ ಔಷಧಿಗಳು**

**೧. ಗೋಮೂತ್ರ ಅರ್ಕ(ಪ್ರತಿರೋಧಿ)**-500ML Rs.60/-; 200ML Rs.30/-

**ಉಪಯೋಗಗಳು :** ಪಚನ ತಂತ್ರ ಜೀರ್ಣಸಂಬಂಧದ ಖಾಯಿಲೆಗಳಿಗೆ ರಾಮಬಾಣ. ಲಿವರ್, ಕಿಡ್ನಿ, ಹೃದಯರೋಗ, ಕ್ಯಾನ್ಸರ್ ಇತ್ಯಾದಿ, ಕೊಲೆಸ್ಟ್ರಾಲ್‌ನ್ನು ಮತ್ತು ಶರೀರದ ತೂಕವನ್ನು ಕಡಿಮೆ ಮಾಡುತ್ತದೆ.

**ಉಪಯೋಗಿಸುವ ವಿಧಾನ :** 10 ರಿಂದ 15 ಮಿ.ಲೀ. ಬೆಳಿಗ್ಗೆ ಮತ್ತು ರಾತ್ರಿ ಬಿಸಿನೀರು ಅಥವಾ ಜೇನುತುಪ್ಪದೊಂದಿಗೆ ತೆಗೆದುಕೊಳ್ಳಬಹುದು.

**೨. ಉಜ್ಜೀವನೀ (ಘನವಟೀ)** - 120 ಮಾತ್ರೆ - Rs.60/-

**ಉಪಯೋಗಗಳು :** ಈ ಔಷಧವು ಶ್ವಾಸಕೋಶದ ರೋಗಗಳು, ಮಾನಸಿಕ ಖಾಯಿಲೆ, ಡಯಾಬಿಟೀಸ್, ಕ್ಯಾನ್ಸರ್ ಖಾಯಿಲೆಗಳಿಗೆ ಪ್ರಯೋಜನಕಾರಿ.

**ಉಪಯೋಗಿಸುವ ವಿಧಾನ :** ಬೆಳಿಗ್ಗೆ 2 ಮಾತ್ರೆ, ಸಂಜೆ
2 ಮಾತ್ರೆ ಅಥವಾ ಬೆಳಿಗ್ಗೆ 1 ಮಾತ್ರೆ, ಸಂಜೆ 1 ಮಾತ್ರೆ ತೆಗೆದುಕೊಳ್ಳಬಹುದು.

**೩. ಜೀರ್ಣಕಾರಿ** - 50 gms. - Rs.35/-

**ಉಪಯೋಗಗಳು :** ಈ ಔಷಧವು ಜೀರ್ಣಶಕ್ತಿ, ಅಸಿಡಿಟಿ, ಗ್ಯಾಸ್, ಅಪಚನ, ಪಿತ್ತ , ಕಬ್ಜ (ಮಲವಿಸರ್ಜನೆ ಬಂದಾಗುವಿಕೆ), ಹೊಟ್ಟೆನೋವುಗಳಿಗೂ ಪ್ರಯೋಜನಕಾರಿ.

**ಉಪಯೋಗಿಸುವ ವಿಧಾನ :** ದಿನವೂ 5 ಗ್ರಾಂ.ನಂತೆ ಬಿಸಿನೀರಿನಲ್ಲಿ ಊಟದ ನಂತರ ಅಥವಾ ರಾತ್ರಿ ಮಲಗುವ ಮುಂಚೆ ತೆಗೆದುಕೊಳ್ಳಬಹುದು.

**೪. ಉನ್ಮೀಲಿನಿ** - 20 ML - Rs.20/-

**ಉಪಯೋಗಗಳು :** ಕಣ್ಣಿನ ಸಂಬಂಧಪಟ್ಟ ಎಲ್ಲಾ ಖಾಯಿಲೆಗಳನ್ನು ಗುಣಪಡಿಸುತ್ತದೆ. (ನಿತ್ಯ ಉಪಯೋಗಿಸುವುದರಿಂದ ಕಣ್ಣಿನ ದೃಷ್ಟಿಶಕ್ತಿ ಕಡಿಮೆಯಾಗುವುದಿಲ್ಲ). ಶಸ್ತ್ರಚಿಕಿತ್ಸೆ ಆದ ಕಣ್ಣಿಗೆ ಒಂದು ವರ್ಷ ಈ ಔಷಧ ಬಳಸಬಾರದು. **ಉಪಯೋಗಿಸುವ ವಿಧಾನ:** ದಿನಕ್ಕೆ 2 ಬಾರಿ 2 ಹನಿ.

**೫. ವಜ್ರಾಂಗ ತೈಲ** - 50 ML - Rs.40/-

**ಉಪಯೋಗಗಳು :** ಈ ತೈಲವು ಮೂಳೆ, ಗಂಟುನೋವು, ಉಳುಕುವುದು, ಬೀಗುವುದು, ಸುಟ್ಟಗಾಯಗಳಿಗೆ, ಇತ್ಯಾದಿ ಎಲ್ಲಾ ನೋವುಗಳಿಗೆ ಹಚ್ಚಬಹುದು.

**ಉಪಯೋಗಿಸುವ ವಿಧಾನ :** ದಿನಕ್ಕೆ 2 ಬಾರಿಯಂತೆ ಉಪಯೋಗಿಸಬಹುದು. ಬಿಸಿನೀರಿನಲ್ಲಿ ಶಾಖ ಕೊಡುವುದು.

**೬. ಶುಭ್ರದಂತಿ ಹಲ್ಲುಪುಡಿ** - 50 Gms. - Rs.20/-

**ಉಪಯೋಗಗಳು:** ಹಲ್ಲಿನ ಎಲ್ಲ ತರಹದ ರೋಗಗಳನ್ನು ಗುಣಪಡಿಸುತ್ತದೆ ಮತ್ತು ಸ್ವಚ್ಛಗೊಳಿಸುತ್ತದೆ.

**ಸಂಖ್ಯೆ :** 9986258076, 65330798

# ಶ್ರೀವ್ಯಾಸಮಧ್ವಸಂಶೋಧನ ಪ್ರತಿಷ್ಠಾನ (ರಿ.)

'Pajaka', # 89/24, III Cross, Mount Joy Road, Hanumanthanagar, Bangalore - 560 019.
Website: www.vyasamadhwa.org Ph:26602802 Email: info@vyasamadhwa.org

## ಸಂಸ್ಥೆಯ ಪ್ರಮುಖ ಯೋಜನೆಗಳು

೧. ಪ್ರಾಚೀನ ಸಂಸ್ಕೃತ ಹಸ್ತಪ್ರತಿಗ್ರಂಥಗಳನ್ನು ಸಂಗ್ರಹಿಸಿ, ವ್ಯವಸ್ಥಿತವಾಗಿ ಸಂರಕ್ಷಿಸುವುದು; ಈಗಾಗಲೇ ೨೦೦೦ಕ್ಕೂ ಹೆಚ್ಚು ಹಸ್ತಪ್ರತಿಗಳನ್ನು ಸಂಗ್ರಹಿಸಿ, ತನ್ನ 'ಶ್ರೀಜಯತೀರ್ಥ ಸಂಸ್ಕೃತ ಹಸ್ತಲಿಖಿತ ಗ್ರಂಥಾಲಯ'ದಲ್ಲಿ ಸಂರಕ್ಷಿಸುತ್ತಿದೆ.

೨. ಶ್ರೀವ್ಯಾಸಮಧ್ವರ ಕೃತಿಗಳ ಅನುವಾದ ಹಾಗೂ ವಿವರಣೆಗಳನ್ನೊಳಗೊಂಡ ಕೃತಿಗಳನ್ನು, ಹರಿದಾಸಸಾಹಿತ್ಯವನ್ನು ಪ್ರಕಾಶನಪಡಿಸುವುದು (ಐತರೇಯಪ್ರಕಾಶನ); ಈಗಾಗಲೇ ೩೦೦೦೦ ಪುಟಗಳಿಗೂ ಮೀರಿದ ಸಾಹಿತ್ಯವನ್ನು ಸಂಸ್ಕೃತ, ಕನ್ನಡ, ಆಂಗ್ಲ ಹಾಗೂ ತೆಲುಗು ಭಾಷೆಗಳಲ್ಲಿ ಪ್ರಕಾಶನ ಪಡಿಸಲಾಗಿದೆ.

೩. 'ಶ್ರೀರಾಘವೇಂದ್ರ ವೇದಾಂತಪಾಠಶಾಲಾ' ಎಂಬ ಸಂಸ್ಥೆಯನ್ನೂ ಪ್ರಾರಂಭಿಸಿ, ಪ್ರತಿನಿತ್ಯ ಸರ್ವ-ಮೂಲಗ್ರಂಥಗಳ ಪಾಠ-ಪ್ರವಚನ, ಸ್ತೋತ್ರಪಾಠ ಇತ್ಯಾದಿಗಳನ್ನು ಅನೇಕ ವರ್ಷಗಳಿಂದ ನಿರಂತರ ನಡೆಸುತ್ತಾ ಬಂದಿದೆ.

೪. 'ಶ್ರೀವ್ಯಾಸಮಧ್ವಸೇವಾಪುರಸ್ಕಾರ ಯೋಜನೆ': ಶ್ರೀವ್ಯಾಸಮಧ್ವರ ಸೇವೆ ಸಲ್ಲಿಸಿದ ವೃದ್ಧ ವಿದ್ವಾಂಸರಿಗೆ ಪ್ರತಿತಿಂಗಳು ಮಾಸಿಕ ಗೌರವಧನವನ್ನು ಆಜೀವ ಸಲ್ಲಿಸುವುದು; ಪ್ರಕೃತ ೨೬ ವಿದ್ವಾಂಸರಿಗೆ ರೂ. ೧೦೦೦/-ಗಳನ್ನು ಸಲ್ಲಿಸುತ್ತಿದೆ.

೫. ಶ್ರೀವ್ಯಾಸಮಧ್ವರ ಕೃತಿಗಳನ್ನು ಅಧ್ಯಯನ ಮಾಡುತ್ತ, ಲೌಕಿಕ ವಿದ್ಯೆಯ ವ್ಯಾಸಂಗ ಮಾಡುತ್ತಿರುವ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಆರ್ಥಿಕಸಹಾಯ ನೀಡುವುದು.

೬. ಪ್ರತಿವರ್ಷ ಒಬ್ಬ ಶ್ರೇಷ್ಠ ಹಿರಿಯವಿದ್ವಾಂಸರಿಗೆ ರೂ. ೧೨,೦೦೦/-ಗಳ 'ಶ್ರೀವ್ಯಾಸಮಧ್ವಸೇವಾಪ್ರಶಸ್ತಿ'.

೭. ಮಹಾಭಾರತತಾತ್ಪರ್ಯನಿರ್ಣಯವನ್ನು ಪೂರ್ಣಕಂಠಪಾಠ ಒಪ್ಪಿಸುವ ವಿದ್ಯಾರ್ಥಿಗೆ ರೂ.೨೫,೦೦೦/- ಪ್ರಶಸ್ತಿ, ಸುಮಧ್ವವಿಜಯವನ್ನು ಒಪ್ಪಿಸುವ ವಿದ್ಯಾರ್ಥಿಗೆ 'ಶ್ರೀಮಧ್ವಪ್ರಿಯ' ಪ್ರಶಸ್ತಿ, ಹಾಗೂ ಹರಿಕಥಾಮೃತಸಾರವನ್ನು ಒಪ್ಪಿಸುವ ವಿದ್ಯಾರ್ಥಿನಿಗೆ 'ದಾಸಪ್ರಿಯ' ಪ್ರಶಸ್ತಿಪ್ರದಾನ.

೮. ಶ್ರೀವ್ಯಾಸಮಧ್ವರನ್ನು ಹಾಗೂ ಅವರ ಕೃತಿಗಳನ್ನು ಕುರಿತ ಸಂಶೋಧನಕೃತಿಗಳ ಪ್ರಕಾಶನಕ್ಕೆ ಆರ್ಥಿಕ ಸಹಾಯ.

೯. ಯುವಜನತೆಯಲ್ಲಿ ತಾತ್ತ್ವಿಕಜಾಗೃತಿಯನ್ನು ಉಂಟು ಮಾಡಲು ಕಾಲಕಾಲಕ್ಕೆ ಶ್ರೀವ್ಯಾಸಮಧ್ವರ ತತ್ತ್ವಗಳ ಬಗ್ಗೆ ಕಾರ್ಯಾಗಾರಗಳನ್ನು, ವಿಚಾರಸಂಕಿರಣಗಳನ್ನು ಮತ್ತು ವಿದ್ವದ್ಗೋಷ್ಠಿಗಳನ್ನು ಏರ್ಪಡಿಸುವುದು.

ಅಪಾರವೆಚ್ಚದ ಈ ಎಲ್ಲ ಯೋಜನೆಗಳಿಗಾಗಿ ಪ್ರತಿಷ್ಠಾನವು ಯಾವುದೇ ರೀತಿಯ ದೇಣಿಗೆಯನ್ನು ಆಸ್ತಿಕಜನತೆಯಿಂದ ಸ್ವಾಗತಿಸುತ್ತದೆ. ರೂ.೧೫,೦೦೦/- ಹಾಗೂ ಅದಕ್ಕಿಂತ ಹೆಚ್ಚಿನ ಮೊತ್ತದ ದೇಣಿಗೆಯನ್ನು ನೀಡುವವರಿಗೆ ಸರ್ವಮೂಲಗ್ರಂಥಗಳು, ಮಹಾಭಾರತತಾತ್ಪರ್ಯನಿರ್ಣಯ ಹಾಗೂ ಹರಿಕಥಾಮೃತಸಾರಗಳ ಅನುವಾದಗಳು ಸೇರಿದಂತೆ ಪ್ರತಿಷ್ಠಾನದ ಪ್ರಕಾಶನದಲ್ಲಿ ಲಭ್ಯವಿರುವ ಎಲ್ಲಾ ಗ್ರಂಥಗಳನ್ನು ಉಚಿತವಾಗಿ ನೀಡಲಾಗುವುದು.

### ವಿಶೇಷ ಸೂಚನೆ :

೧. ದೇಣಿಗೆಗಳನ್ನು ''ಶ್ರೀವ್ಯಾಸಮಧ್ವಸಂಶೋಧನ ಪ್ರತಿಷ್ಠಾನ(ರಿ.)'', ಬೆಂಗಳೂರು - ಈ ಹೆಸರಿಗೆ ನಗದು/ಚೆಕ್/ಡ್ರಾಫ್ಟ್ ಮೂಲಕ ಸಲ್ಲಿಸಿ ಅಧಿಕೃತ ರಸೀತಿಯನ್ನು ಪಡೆಯತಕ್ಕದ್ದು.

೨. **80G** ಅನ್ವಯ ಆದಾಯ ತೆರಿಗೆ ವಿನಾಯಿತಿಯನ್ನು ಬಯಸುವವರು ನಮ್ಮ ಪ್ರತಿಷ್ಠಾನಕ್ಕೆ ''**Sri Vyasa Madhwa Research Foundation (R)**'' ಎಂಬ ಹೆಸರಿಗೆ ದೇಣಿಗೆ ನೀಡಬಹುದು.